ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 23 ಮಂಗಳವಾರ 2024

ಸಂಪುಟ: 44 | ಸಂಚಿಕೆ: 276 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಪ್ರಧಾನಮಂತ್ರಿ ನರೇಂದ್ರ ಮೋದಿ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಪೇಜಾವರ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಮುಖ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ಅಯೋಧ್ಯೆಯಲ್ಲಿ ಬಾಲರಾಮ ವಿರಾಜಮಾನ

■500 ವರ್ಷಗಳ ಅವಿರತ ಪ್ರಯತ್ನ, ಐದು ದಶಕದ ಹೋರಾಟದ ಫಲ ■ಯಜಮಾನನಾಗಿ ಬಾಲರಾಮನ ಪ್ರತಿಷ್ಠಾಪನೆಯೊಂದಿಗೆ ವ್ರತ ಅಂತ್ಯಗೊಳಿಸಿದ ಪ್ರಧಾನಿ ಮೋದಿ ■7000 ಮಂದಿ ವಿಶೇಷ ಆಹ್ವಾನಿತರು ಹಾಜರಿ

ಅಯೋಧ್ಯೆ, ಜ. 22– ಅಯೋಧ್ಯೆಯ ರಾಮ ಮಂದಿರದಲ್ಲಿ ಸೋಮವಾರ ಮಧ್ಯಾಹ್ನ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯ ನೆರವೇರಿತು. ಇದರೊಂದಿಗೆ ದೇಶದ ನೂರಾರು ಕೋಟಿ ಜನರ ಕನಸು ನನಸಾಗಿದೆ. ಇನ್ನು ಮುಂದೆ ಮರ್ಯಾದಾ ಪುರುಷೋತ್ತಮನ ದರ್ಶನ ಭಕ್ತರಿಗೆ ಲಭ್ಯವಾಗಲಿದೆ.

ಸರಯೂ ನದಿ ತೀರದಲ್ಲಿರುವ ಅಯೋಧ್ಯೆ ರಾಮ ಮಂದಿರದಲ್ಲಿ ಇಂದು ಮಧ್ಯಾಹ್ನ 12.29ರಿಂದ 12.30ರೊಳಗಿನ ಅಭಿಜಿತ್ ಮುಹೂರ್ತದಲ್ಲಿ ಬಾಲರಾಮನಿಗೆ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಾಯಿತು. ಆಚಾರ್ಯ ಲಕ್ಷ್ಮೀಕಾಂತ ದೀಕ್ಷಿತ್ ನೇತೃತ್ವದಲ್ಲಿ 121 ಧಾರ್ಮಿಕ ಮುಖಂಡರ ನೇತೃತ್ವದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರ ಹಣೆಗೆ ಲಕ್ಷ್ಮೀಕಾಂತ ದೀಕ್ಷಿತರು ತಿಲಕವನ್ನಿಟ್ಟ ನಂತರ ಶಂಖ, ಜಾಗಟೆಗಳು ಮೊಳಗುತ್ತಿದ್ದಂತೆಯೇ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿತು. ಈ ಸಂದರ್ಭದಲ್ಲಿ ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಉಪಸ್ಥಿತರಿದ್ದರು. ಪ್ರಾಣ ಪ್ರತಿಷ್ಠಾಪನೆಯ ವಿಧಿವಿಧಾನಗಳಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಪ್ರಧಾನಿ ಮೋದಿ ಭಾಗವಹಿಸಿದ್ದರು. ಇದಕ್ಕೂ ಮುನ್ನ ವಿಶೇಷ ಹೆಲಿಕಾಪ್ಟರ್‌ನಲ್ಲಿ ಅಯೋಧ್ಯೆಗೆ ಆಗಮಿಸಿದ ಮೋದಿಯವರು ಬೆಳ್ಳಿಯ ಛತ್ರಿ ಹಿಡಿದುಕೊಂಡು ರಾಮಮಂದಿರ ಪ್ರವೇಶಿಸಿದರು. ಮಂದಿರದ ಒಳಗೆ ಪೂಜಾ ಕೈಂಕರ್ಯಗಳು ನಡೆಯುತ್ತಿದ್ದರೆ, ಹೊರ ಆವರಣದಲ್ಲಿ ●9ನೇ ಪುಟಕ್ಕೆ



ರಾಮ ನಮ್ಮವನಲ್ಲ; ಅವನು ಎಲ್ಲರಿಗೂ ಸೇರಿದವನು; ರಾಮ ಸಮಸ್ಯೆಯಲ್ಲ; ಪರಿಹಾರ

ಪ್ರಧಾನಿ ಮೋದಿ ಜಪ

■ಪುಟ–9



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಶ್ರೀ ರಾಮನಿಗೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಕೋಸಂಬರಿ, ಪಾನಕ ವಿತರಿಸಲಾಯಿತು. ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ನಿರ್ದೇಶಕರಾದ ಮಂಜುನಾಥ್, ಗೋಪಿನಾಥ್, ನಾಗಶಯನ, ಮಂಜುನಾಥ್, ಶ್ರೀಕಂಠಶರ್ಮ, ಹೊಮ್ಮ ಮಂಜುನಾಥ್, ದಿನೇಶ್ ಇತರರು ಉಪಸ್ಥಿತರಿದ್ದರು.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಕುಂಬಾರಕೊಪ್ಪಲು ಕಿಡಗಣ್ಣಮ್ಮನ ಬಡಾವಣೆಯ ಶ್ರೀ ವಿಘ್ನೇಶ್ವರ ಕನ್ನಡ ಯುವಕರ ಸಂಘದ ಸದಸ್ಯರು ರಾಮನ ಚಿತ್ರಕ್ಕೆ ಪೂಜೆ ಸಲ್ಲಿಸಿ, ಪಾನಕ, ಮಜ್ಜಿಗೆ ವಿತರಿಸಿದರು.



ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಸಂದರ್ಭದಲ್ಲಿ ವಾರ್ಡ್ ನಂ.57ರ ಕುವೆಂಪುನಗರ ಕೆ-ಬ್ಲಾಕ್‌ನ ಶ್ರೀ ಮಹಾಭೈರವೇಶ್ವರ ಗಣಪತಿ ದೇವಸ್ಥಾನದ ಮುಂಭಾಗ ಶ್ರೀ ರಾಮನ ಭಾವಚಿತ್ರಕ್ಕೆ ಪೂಜಿಸಿ, ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ಮುಖಂಡರಾದ ವಿಕ್ರಂತ್ ದೇವೇಗೌಡ, ಬಸವರಾಜಣ್ಣ, ರವಿ, ಮಂಜಣ್ಣ, ಮೋಹನ್, ರಾಕೇಶ್, ವೆಂಕಟೇಶ್‌ದಾಸ್, ಮಣಿ, ದಿಲೀಪ, ಪ್ರದೀಪ್, ಅನಿಲ್, ವಾಸ, ಸುರೇಶ, ರವಿ, ವಿವೇಕ್ ಉಪಸ್ಥಿತರಿದ್ದರು.



ಮೈಸೂರು ಕುವೆಂಪುನಗರದ ಸೌಗಂಧಿಕ ಉದ್ಯಾನವನದಲ್ಲಿ 80X100 ಅಳತೆಯ ಕಲಾವಿದ ಪೂರ್ಣಚಂದ್ರ, ಶ್ರೀರಾಮನ ಚಿತ್ರಕಲೆ ಬಿಡಿಸಿ, ಗಮನ ಸೆಳೆದರು.

ಚಾಮುಂಡಿಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ




ಎಬಿವಿಪಿ, ವಿಹೆಚ್‌ಪಿ, ಸುಬ್ಬಣ್ಣ ಹಾಸ್ಟೆಲ್ ಹಾಗೂ ಗೀತಾ ಪರಿವಾರದ ಸ್ವಯಂ ಸೇವಕರಿಂದ ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛತೆ

ಮೈಸೂರು,ಜ.22-ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ವಿಶ್ವ ಹಿಂದೂ ಪರಿಷತ್, ಸುಬ್ಬಣ್ಣ ಹಾಸ್ಟೆಲ್ ಹಾಗೂ ಗೀತಾ ಪರಿವಾರದ ಸ್ವಯಂ ಸೇವಕರು ಇಂದು ಬೆಳಗ್ಗೆ ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಿದರು. ನೂರಕ್ಕೂ ಅಧಿಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಬೆಳಗ್ಗೆ ಆರು ಗಂಟೆಗೆ ಸರಿಯಾಗಿ ಸ್ವಚ್ಛತಾ ಸೇವೆ ಆರಂಭಿಸಿದರು. ಬಳಿಕ ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡಿಯ ದರ್ಶನ ಪಡೆದು, ಪುನೀತರಾದರು.

ಪ್ಲಾಸ್ಟಿಕ್ ಮುಕ್ತ ಮೈಸೂರು ಅಭಿಯಾನದ ಅಂಗವಾಗಿ ನಡೆದ ಅಭಿಯಾನದಲ್ಲಿ, ಎಲ್ಲಾ ಕಾರ್ಯಕರ್ತರು ಸ್ಥಳೀಯ ಮಾರಾಟಗಾರರಿಗೆ ಪರಿಸರಸ್ನೇಹಿ ಕಾಗದದ ಚೀಲಗಳನ್ನು ವಿತರಿಸಿದರು. ಈ ಅಭಿಯಾನವು ವಸ್ತುಗಳ ಮರುಬಳಕೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಮರು ಬಳಕೆ ಮತ್ತು ಪ್ಲಾಸ್ಟಿಕ್ ಬಳಕೆಯ ಸಾಮೂಹಿಕ ನಿರಾಕರಣೆಯನ್ನು ಪ್ರತಿಪಾದಿಸುವ ಪ್ರಮುಖ ಸಂದೇಶಗಳನ್ನು ಸ್ಥಳೀಯರು, ಭಕ್ತರು ಹಾಗೂ ವ್ಯಾಪಾರಿಗಳಿಗೆ ನೀಡಿತು.

ಯುವತಿ ನಾಪತ್ತೆ



ಮೈಸೂರು, ಜ. 22- ನರಸಿಂಹರಾಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯುವತಿಯೋರ್ವರು ನಾಪತ್ತೆಯಾಗಿರುವ ಬಗ್ಗೆ ದೂರು ದಾಖಲಾಗಿದೆ. ಮೈಸೂರಿನ ಬೆಲವತ್ತ ನಿವಾಸಿ ಸ್ವಾಮಿ ಅವರ ಪುತ್ರಿ ಕು.ರಕ್ಷಿತಾ (19) ಕಾಣೆಯಾದವರು. ಇವರು ಜನವರಿ 1ರಂದು ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಸ್ವಾಮಿ ದೂರು ದಾಖಲಿಸಿದ್ದಾರೆ. ಈಕೆಯ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ. 9480802236, 9844700684 ಸಂಪರ್ಕಿಸಲು ಕೋರಲಾಗಿದೆ.


ನಿಧನ

ಎಂ.ದೇಶಿಗೌಡ



ಮೈಸೂರು,ಜ.22- ಮೈಸೂರಿನ ಕನ್ನೇಗೌಡನಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಎಂ.ದೇಶಿಗೌಡ (68) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ನಾಳೆ (ಮಂಗಳವಾರ) ಬೆಳಗ್ಗೆ 11ಕ್ಕೆ ಕನ್ನೇಗೌಡನಕೊಪ್ಪಲಿನ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಹೆಚ್.ರಾಮಕೃಷ್ಣ



ಮೈಸೂರಿನ ಸರಸ್ವತಿಪುರಂ ನಿವಾಸಿ ಎಂ.ಹೆಚ್.ರಾಮಕೃಷ್ಣ(87) ಅವರು ವಯೋಸಹಜ ಅನಾರೋಗ್ಯದಿಂದ ಸೋಮವಾರ ನಿಧನರಾದರು. ಇವರು ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ಮೈಸೂರು ಜೋನ್ ಸಂಚಾಲಕ ಹರಿಕೃಷ್ಣ ಕುಮಾರ್ ಸೇರಿ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 12 ಗಂಟೆವರೆಗೆ ಸರಸ್ವತಿಪುರಂ ನಿವಾಸದಲ್ಲಿ ಅಂತಿಮ ದರ್ಶನಕ್ಕಿಟ್ಟು, ಬಳಿಕ ನಾಗಮಂಗಲದ ಬಳಿಯ ತೋಟದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಎನ್.ಇಂದಿರಾ



ಮೈಸೂರಿನ ಸರಸ್ವತಿಪುರಂ ನಿವಾಸಿ ಎನ್.ಇಂದಿರಾ(76) ಅವರು ಬೆಂಗಳೂರಿನಲ್ಲಿ ಭಾನುವಾರ ಹೃದಯಾಘಾತದಿಂದ ನಿಧನರಾದರು. ಇವರು ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ವರ್ಗ ಅಗಲಿದ್ದಾರೆ. ಸೋಮವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಿನಕಲ್ ಸ.ನಂ. 89ರ ಆಸ್ತಿಗಳಿಗೆ ಖಾತಾ ಮಾಡಿಕೊಡಿ

ಜನಸ್ಪಂದನಾ ಸಭೆಯಲ್ಲಿ ನಗರಪಾಲಿಕೆ ಅಧಿಕಾರಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ತಾಕೀತು



ಮೈಸೂರಿನ ಎಂಜಿ ಕೊಪ್ಪಲಿನಲ್ಲಿ ಸೋಮವಾರ ಶಾಸಕ ಕೆ. ಹರೀಶ್‌ಗೌಡ ಜನಸ್ಪಂದನಾ ಕಾರ್ಯಕ್ರಮದಲ್ಲಿ ಜನರ ಕುಂದು-ಕೊರತೆ ಆಲಿಸಿದರು. ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜ.22(ಆರ್‌ಕೆ)- ಹಲವು ವರ್ಷಗಳಿಂದ ಸಮಸ್ಯೆಯಾಗಿ ಉಳಿದಿದ್ದ ಮೈಸೂರಿನ ಮಂಚೇಗೌಡನಕೊಪ್ಪಲಿಗೆ ಹೊಂದಿಕೊಂಡಂತಿರುವ ಹಿನಕಲ್ ಗ್ರಾಮದ ಸರ್ವೆ ನಂಬರ್ 89ರ ನಿವೇಶನ, ಆಸ್ತಿಗಳಿಗೆ ಖಾತಾ ಮಾಡಿಕೊಡುವಂತೆ ಶಾಸಕ ಕೆ. ಹರೀಶ್‌ಗೌಡ ಪಾಲಿಕೆ ಅಧಿಕಾರಿಗಳಿಗೆ ಇಂದಿಲ್ಲಿ ತಾಕೀತು ಮಾಡಿದ್ದಾರೆ.

ಮಂಚೇಗೌಡನಕೊಪ್ಪಲಿನ ಭೂಪಯ್ಯನ ಛತ್ರದ ಬಳಿಯ ಮೈದಾನದಲ್ಲಿ ಜನಸ್ಪಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕರು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಈ ಸಂದರ್ಭ ಹಿನಕಲ್ ಸರ್ವೆ ನಂಬರ್‌ನಲ್ಲಿ ಬರುವ ನಿವೇಶನ, ಮನೆಗಳು ಪಾಲಿಕೆ ವ್ಯಾಪ್ತಿಗೆ ಬರುತ್ತಿವೆಯಾದರೂ ಪಾಲಿಕೆಯವರಾಗಲೀ, ಮುಡಾದವರಾಗಲೀ ಖಾತೆ ಮಾಡದ ಕಾರಣ, ಅವುಗಳ ಮೇಲೆ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಸಾರ್ವಜನಿಕರು ಅಳಲು ತೋಡಿಕೊಂಡರು.

ಈ ಸಂಬಂಧ ಇತ್ತೀಚೆಗೆ ನಡೆದ ಮುಡಾ ಸಭೆಯಲ್ಲಿ ನಾನೇ ವಿಷಯ ಪ್ರಸ್ತಾಪಿಸಿ ಪಾಲಿಕೆಗೆ ಆ ಬಡಾವಣೆ ಹಸ್ತಾಂತರವಾಗಿರುವುದರಿಂದ, ಈಗಾಗಲೇ ಕೆಲ ರೆವಿನ್ಯೂ ಆಸ್ತಿಗಳಿಗೂ ಖಾತೆ ಮಾಡಿಕೊಟ್ಟಿರುವ ನಿದರ್ಶನಗಳಿರುವ ಕಾರಣ, ಸದರಿ ಸರ್ವೆ ನಂಬರ್‌ನಲ್ಲಿ ಬರುವ ಎಲ್ಲಾ ಆಸ್ತಿಗಳನ್ನು ಪಾಲಿಕೆಗೆ ಹಸ್ತಾಂತರಿಸುವಂತೆ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಭಾ ನಡಾವಳಿಯಂತೆ ಈ ವ್ಯಾಪ್ತಿಯ ಕಂದಾಯ ಆಸ್ತಿಗಳಿಗೆ ಖಾತೆ ಮಾಡಿಕೊಡುವಂತೆ ಪಾಲಿಕೆ ವಲಯ ಕಚೇರಿ-5ರ ಪ್ರಭಾರ ವಲಯಾಧಿಕಾರಿ ನಾಗರಾಜ್ ಹಾಗೂ ಅಧಿಕಾರಿಗಳಿಗೆ ಸೂಚಿಸಿದ ಹರೀಶ್‌ಗೌಡರು, ಸರ್ಕಾರವೇ ರಾಜ್ಯಾದ್ಯಂತ 'ಬಿ' ಖಾತಾ ಮಾಡುವಂತೆ ನಿರ್ದೇಶಿಸಿದರು.

ಅದರಿಂದ ಸರ್ವೆ ನಂ.89ರಲ್ಲಿ ಬರುವ 330 ಆಸ್ತಿಗಳು, ಸುತ್ತಲಿನ ರೆವಿನ್ಯೂ ಲೇಔಟ್‌ಗಳ ನಿವೇಶನ, ಸ್ವತ್ತುಗಳ ಮಾಲೀಕರಿಗೆ ಅನುಕೂಲವಾಗುವುದಲ್ಲದೇ, ಸುತ್ತಲಿನ ಬಡಾವಣೆಗಳ ಆಸ್ತಿಗಳಿಗೂ ಇದರಿಂದ ಅನುಕೂಲವಾಗಲಿದೆ. ಇನ್ನು ಮುಂದೆ ರೆವಿನ್ಯೂ ಬಡಾವಣೆಗಳಿಗೂ ಖಾತೆ ಮಾಡಬೇಕು ಎಂದು ಶಾಸಕರು ಸೂಚಿಸಿದರು.

ನೀರಿನ ಸಂಪರ್ಕ ಕಡಿತಗೊಳಿಸಬೇಡಿ: ನೀರಿನ ತೆರಿಗೆ ಪಾವತಿಸಿಲ್ಲ ಎಂಬ ಕಾರಣಕ್ಕೆ ಮನೆಯ ಕುಡಿಯುವ ನೀರಿನ ಸಂಪರ್ಕ ಕಡಿತಗೊಳಿಸಬೇಡಿ. ಬಾಕಿ ಉಳಿಸಿಕೊಂಡಿರುವ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನವಾಗುತ್ತದೆ. ಆದರೆ, ತೆರಿಗೆ ಕಟ್ಟಿಲ್ಲ ಎಂಬ ಕಾರಣಕ್ಕೆ ನೀರು ಪೂರೈಕೆ ಸ್ಥಗಿತಗೊಳಿಸಿ ತೊಂದರೆ ಮಾಡಬೇಡಿ ಎಂದು ಇದೇ ಸಂದರ್ಭ ವಾಣಿವಿಲಾಸ ನೀರು ಸರಬರಾಜು ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹಲಕ್ಷ್ಮಿಯರಿಗೆ ನೆರವಾಗಿ: ಸರ್ಕಾರ ಜಾರಿಗೆ ತಂದಿರುವ ಗೃಹಲಕ್ಷ್ಮಿ ಯೋಜನೆಯಡಿ ನಿರಂತರವಾಗಿ ಪ್ರತೀ ತಿಂಗಳೂ 2,000 ರೂ. ಹಣ ತಲುಪದಿರುವ ಮಹಿಳೆಯರಿಗೆ ದಾಖಲಾತಿ ಪಡೆದು ಸಮಸ್ಯೆಗಳಿದ್ದರೆ ನಿವಾರಣೆ ಮಾಡಿ ಹಣ ಬರುವಂತೆ ಮಾಡಬೇಕು. ಇನ್ನೂ ನೋಂದಣಿಯನ್ನೇ ಮಾಡಿಸದವರನ್ನು ಗುರ್ತಿಸಿ ಯೋಜನೆ ಫಲಾನುಭವಿಯನ್ನಾಗಿ ಮಾಡುವಂತೆಯೂ ಅವರು ಇದೇ ವೇಳೆ ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ಹೇಳಿದರು.

ರೇಷನ್ ಕಾರ್ಡ್ ಮಾಡಿಸಿಕೊಡಿ: ಬಡತನ ರೇಖೆಯಿಂದ ಕೆಳಗಿರುವ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಮಾಡಿಸಿಕೊಡಿ, ತೀವ್ರ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಗೆ ಹಾಗೂ ಇನ್ನಿತರ ಉದ್ದೇಶಗಳಿಗೆ ಅಗತ್ಯ ದಾಖಲೆಯಾಗಿರುವ ಕಾರಣ ಅರ್ಹ ಕುಟುಂಬಕ್ಕೆ ರೇಷನ್ ಕಾರ್ಡ್ ಮಾಡಿಸಿಕೊಡಿ ಎಂದು ತಾಕೀತು ಮಾಡಿದರು.

ಅರ್ಹರಿಗೆ ಸೌಲಭ್ಯ ತಲುಪಿಸಿ: 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಯೋಜನೆಯಡಿ ಅರ್ಹರಿಗೆ ಸೌಲಭ್ಯ ತಲುಪುವಂತೆ ನೋಡಿಕೊಂಡು ಬಿಲ್ ಮಾಡುವಾಗ ಎಚ್ಚರಿಕೆಯಿಂದ ಪರಿಶೀಲಿಸಿ ಕ್ರಮ ವಹಿಸುವಂತೆ ಸೆಸ್ಕ್ ಅಧಿಕಾರಿಗಳಿಗೆ ಸಲಹೆ ನೀಡಿದ ಹರೀಶ್‌ಗೌಡರು, ಒಳಚರಂಡಿ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಲಭ್ಯಗಳು, ಖಾತಾ-ಕಂದಾಯ ಇತ್ಯಾದಿ ಕೋರಿ ಬರುವ ಅರ್ಜಿಗಳನ್ನು ಆದ್ಯತೆ ಮೇಲೆ ಇತ್ಯರ್ಥಗೊಳಿಸಿ, ದೂರುಗಳು ಬಾರದಂತೆ ತಾರತಮ್ಯವಿಲ್ಲದೆ ಕ್ರಮ ವಹಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಪಾಲಿಕೆ ಆಯುಕ್ತಅಶಾದ್ ಉರ್ ರೆಹಮಾನ್ ಷರೀಫ್, ವಲಯ-5ರ ವಲಯಾಧಿಕಾರಿ ನಾಗರಾಜ್, ವಾಣಿವಿಲಾಸ ವಾಟರ್ ವರ್ಕ್ಸ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸೋಮಶೇಖರ್, ಮಾಜಿ ಉಪಮೇಯರ್ ಮಹದೇವಪ್ಪ, ಮಾಜಿ ಕಾರ್ಪೊರೇಟರ್ ಶಿವಮಾದು, ಕಾಂಗ್ರೆಸ್ ಮುಖಂಡ ಎಂ.ಜಿ.ಕೊಪ್ಪಲು ರವಿ ಸೇರಿದಂತೆ ಮುಡಾ, ಪಾಲಿಕೆ ಹಾಗೂ ಇತರ ಇಲಾಖೆಗಳ ಅಧಿಕಾರಿಗಳು ಇದ್ದರು.

ಬಾಲರಾಮನಿಗೆ ವಿಶೇಷ ಆಭರಣಗಳ ಅಲಂಕಾರ



ಅಯೋಧ್ಯೆ: ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಲರಾಮ ದಿವ್ಯ ಮತ್ತು ಭವ್ಯ ರೂಪದಲ್ಲಿ ಎಲ್ಲರ ಮುಂದೆ ಕಾಣುತ್ತಿದ್ದು, ಅನೇಕ ದೈವಿಕ ಆಭರಣಗಳು ಮತ್ತು ವಸ್ತ್ರಗಳಿಂದ ಅಲಂಕರಿಸಲಾಗಿದೆ.

ಬಾಲರಾಮನ ಬಟ್ಟೆ: ಬನಾರಸಿ ಬಟ್ಟೆಯ ಹಳದಿ ಧೋತಿ ಮತ್ತು ಕೆಂಪು ಬಣ್ಣದ ಅಂಗವಸ್ತ್ರದಲ್ಲಿ ಬಾಲರಾಮನನ್ನು ಅಲಂಕರಿಸಲಾಗಿದೆ. ಈ ಬಟ್ಟೆಗಳನ್ನು ಶುದ್ಧ ಚಿನ್ನದ ಝರಿ ಮತ್ತು ನಕ್ಷತ್ರಗಳ ಕುಸುರಿ ಕೆಲಸ ಮಾಡಲಾಗಿದೆ. ಅದರ ಮೇಲೆ ವೈಷ್ಣವ ಮಂಗಳಕರ ಚಿಹ್ನೆಗಳಾದ ಶಂಖ, ಪದ್ಮ, ಚಕ್ರ ಮತ್ತು ನವಿಲು ಕೆತ್ತಲಾಗಿದೆ.

ಕಿರೀಟ: ಬಾಲರಾಮನಿಗೆ ಉತ್ತರ ಭಾರತೀಯ ಸಂಪ್ರದಾಯದ ಪ್ರಕಾರ ಚಿನ್ನದಿಂದ ಮಾಡಲ್ಪಟ್ಟಿದೆ, ಇದನ್ನು ಮಾಣಿಕ್ಯ, ಪಚ್ಚೆ ಮತ್ತು ವಜ್ರಗಳನ್ನು ಅಲಂಕರಿಸಲಾಗಿದೆ. ಸೂರ್ಯನನ್ನು ಕಿರೀಟದ ಮಧ್ಯದಲ್ಲಿ ಚಿತ್ರಿಸಲಾಗಿದೆ. ಕಿರೀಟದ ಬಲಭಾಗದಲ್ಲಿ ಮುತ್ತುಗಳನ್ನು ಚಿನ್ನದ ತಂತಿಗಳಿಂದ ಇಳಿಬಿಡಲಾಗಿದೆ.

ಕುಂಡಲಿ: ಬಾಲರಾಮನ ಕಿವಿಯ ಆಭರಣಗಳನ್ನು ಮುಕುಟ ಅಥವಾ ಕಿರೀಟದ ಪ್ರಕಾರ ಮತ್ತು ಅದೇ ವಿನ್ಯಾಸದ ಅನುಕ್ರಮದಲ್ಲಿ ತಯಾರಿಸಲಾಗಿದೆ. ನವಿಲು ಆಕೃತಿಗಳನ್ನು ಹೊಂದಿದ್ದು, ಅದನ್ನು ಚಿನ್ನ, ವಜ್ರ, ಮಾಣಿಕ್ಯ ಮತ್ತು ಪಚ್ಚೆಗಳಿಂದ ಅಲಂಕರಿಸಲಾಗಿದೆ.

ಹಾರ: ಅರ್ಧ ಚಂದ್ರನ ಆಕಾರದ ರತ್ನಗಳಿಂದ ಹೊದಿಸಿದ ಹಾರದಿಂದ ಕುತ್ತಿಗೆಯನ್ನು ಅಲಂಕರಿಸಲಾಗಿದೆ. ಅದರಲ್ಲಿ ಮಂಗಳಕರವಾದ ಹೂವುಗಳನ್ನು ಚಿತ್ರಿಸಲಾಗಿದ್ದು, ಮಧ್ಯದಲ್ಲಿ ಸೂರ್ಯದೇವರ ಚಿತ್ರಣವಿದೆ. ಚಿನ್ನದಿಂದ ಮಾಡಿದ ಕುತ್ತಿಗೆಯ ಸರವನ್ನು ವಜ್ರಗಳು, ಮಾಣಿಕ್ಯಗಳು ಮತ್ತು ಪಚ್ಚೆಗಳಿಂದ ಅಲಂಕರಿಸಲಾಗಿದೆ. ಕುತ್ತಿಗೆಯ ಕೆಳಗೆ ಪಚ್ಚೆಗಳ ಸರವನ್ನು ಹಾಕಲಾಗಿದೆ.

ಕೌಸ್ತುಭಮಣಿ: ಕೌಸ್ತುಭಮಣಿಯನ್ನು ಭಗವಂತನ ಹೃದಯ ಭಾಗದಲ್ಲಿ ಇರಿಸಲಾಗಿದೆ. ಇದು ದೊಡ್ಡ ಮಾಣಿಕ್ಯ ಮತ್ತು ವಜ್ರಗಳಿಂದ ಅಲಂಕರಿಸಲ್ಪಟ್ಟಿದೆ. ಚಿನ್ನದಿಂದ ಮಾಡಿದ ಮತ್ತು ಭಗವಂತ ಧರಿಸಿರುವ ಮೂರನೇ ಮತ್ತು ಉದ್ದನೆಯ ಹಾರವಾದ ವಿಜಯ ಮಾಲೆಯ ಕೆಲವು ಸ್ಥಳಗಳಲ್ಲಿ ಮಾಣಿಕ್ಯಗಳನ್ನು ಸೇರಿಸಲಾಗಿದ್ದು, ಇದನ್ನು ವಿಜಯದ ಸಂಕೇತವಾಗಿ ಧರಿಸ ಲಾಗುತ್ತದೆ. ಇದರಲ್ಲಿ ವೈಷ್ಣವ ಸಂಪ್ರದಾಯದ ಎಲ್ಲಾ ಮಂಗಳಕರ ಚಿಹ್ನೆಗಳಾದ ಸುದರ್ಶನ ಚಕ್ರ, ಪದ್ಮಪುಷ್ಪ, ಶಂಖ ಮತ್ತು ಮಂಗಳ-ಕಲಶವನ್ನು ಚಿತ್ರಿಸಲಾಗಿದೆ. ಇದು ಕಮಲ, ಚಂಪಾ, ಪಾರಿಜಾತ, ಕುಂಡ ಮತ್ತು ತುಳಸಿ ಎಂಬ ಐದು ವಿಧದ ಹೂವುಗಳಿಂದ ಅಲಂಕರಿಸಲ್ಪಟ್ಟಿದೆ.

ಸೊಂಟದಲ್ಲಿನ ಕವಚ: ರತ್ನಗಳಿಂದ ಕೂಡಿದ ಭಗವಂತನ ಸೊಂಟದ ಕವಚವನ್ನು ಬಾಲರಾಮನಿಗೆ ಹಾಕಲಾಗಿದೆ. ಇದು ಚಿನ್ನದಿಂದ ಮಾಡಲ್ಪಟ್ಟಿದೆ. ವಜ್ರಗಳು, ಮಾಣಿಕ್ಯಗಳು, ಮುತ್ತುಗಳು ಮತ್ತು ಪಚ್ಚೆಗಳಿಂದ ಅಲಂಕರಿಸಲ್ಪಟ್ಟಿದೆ. ಚಿನ್ನ ಮತ್ತು ರತ್ನಗಳಿಂದ ಹೊದಿಸಿದ ಭುಜಬಂಧವನ್ನು ಭಗವಂತನ ಎರಡೂ ತೋಳುಗಳಲ್ಲಿ ಹಾಕಲಾಗಿದೆ. ರತ್ನಗಳಿಂದ ಕೂಡಿದ ಸುಂದರವಾದ ಬಳೆಗಳನ್ನು ಎರಡೂ ಕೈಗಳಿಗೆ ಧರಿಸಲಾಗಿದೆ.

ಎಡ ಮತ್ತು ಬಲ ಎರಡೂ ಕೈಗಳ ಉಂಗುರಗಳು ರತ್ನದ ಉಂಗುರಗಳಿಂದ ಅಲಂಕರಿಸಲ್ಪಟ್ಟಿವೆ, ಅವುಗಳಿಂದ ಮುತ್ತಿನ ಸರಗಳು ನೇತು ಬಿದ್ದಿವೆ. ಕಾಲುಗಳಲ್ಲಿ ಚಿನ್ನದ ಗೆಜ್ಜೆಗಳನ್ನು ಧರಿಸಲಾಗಿದೆ. ಅಲ್ಲದೆ, ಚಿನ್ನದ ಕಿವಿಯೋಲೆಗಳನ್ನು ಹಾಕಲಾಗಿದೆ.

ಒಕ್ಕಲಿಗರ ಮಹಾಸಭಾದಿಂದ ಶ್ರೀರಾಮ ಸಂಭ್ರಮಾಚರಣೆ



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಶ್ರೀರಾಮನಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಹಿರಿಯ ಸಾಹಿತಿ ಡಾ.ಸಿ.ಪಿ.ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಜ.22- ಅಯೋಧ್ಯೆಯಲ್ಲಿ ನಡೆದ ಶ್ರೀ ಬಾಲರಾಮನ ಪ್ರತಿಷ್ಠಾಪನೆ ಪ್ರಯುಕ್ತ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಮೈಸೂರಿನ ಶಿವರಾಂಪೇಟೆಯಲ್ಲಿರುವ ಸಂಘದ ಕಚೇರಿಯಲ್ಲಿ ಶ್ರೀರಾಮನಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಹಿರಿಯ ಸಾಹಿತಿ ಡಾ. ಸಿ.ಪಿ.ಕೆ, ಪುಷ್ಪಾರ್ಚನೆ ಮಾಡಿದರು. ನಂತರ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಅಯೋಧ್ಯೆಯಲ್ಲಿ ಶ್ರೀಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಮ್ಮೆಲ್ಲರಿಗೂ ಸಂತೋಷದ ವಿಷಯ. ರಾಮನ ವಿಚಾರವನ್ನು ಮೊದಲು ಜಗತ್ತಿಗೆ ಸಾರಿದ್ದು, ವಾಲ್ಮೀಕಿ ಮಹರ್ಷಿಗಳು. ಪ್ರತಿಯೊಬ್ಬ ಪುರುಷನು ರಾಮನಾಗಬೇಕು. ಪ್ರತಿಯೊಬ್ಬ ಸ್ತ್ರೀಯು ಸೀತೆಯಾಗಬೇಕು. ಅದು ಎಲ್ಲರ ಆಸೆ ಎಂದು ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟರು. ಒಂದು ಕಡೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಶುದ್ಧತೆಗಿಂತಲೂ ಶುದ್ಧಳಾದವಳು ಸೀತೆ, ರಾಮಾಯಣದ ಪರಂಪರೆ ಬಹಳ ವಿಸ್ತಾರವಾದದ್ದು. ರಾಮ ಭಾರತೀಯರಿಗೆ ಆದರ್ಶ ಪುರುಷ. ಇಂದು ಧರ್ಮದ ಮೌಲ್ಯಗಳ ಪ್ರತಿಪಾದಕ ರಾಮಾಯಣ, ಮಹಾಭಾರತ. ಈ ಎರಡು ಮಹಾಕಾವ್ಯಗಳು ಭಾರತದ ಸಾಂಸ್ಕೃತಿಕ ಚರಿತ್ರೆಯ ಪ್ರತಿಬಿಂಬಗಳು ಎಂದು ಹೇಳಿದರು.

ನಂತರ ಮಾತನಾಡಿದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರು, ಭಾರತದ ಇತಿಹಾಸದಲ್ಲಿ ಭರತಖಂಡ ಮಾತ್ರವಲ್ಲ ಇಡೀ ವಿಶ್ವವೇ ಭಾರತವನ್ನು ತಿರುಗಿ ನೋಡುತ್ತಿದೆ. ಅಯೋಧ್ಯೆಯಲ್ಲಿ ಇಂದು ಶ್ರೀರಾಮದೇವರ ಪ್ರತಿಷ್ಠಾಪನೆ ಆಗುತ್ತಿರುವುದು ನಮ್ಮ ಪೂರ್ವಜನ್ಮದ ಪುಣ್ಯ ಎಂದು ಹೇಳಿದರು.

ರಾಮದೇವರ ಶಿಲೆ ದೊರೆತಿದ್ದು ನಮ್ಮ ಮೈಸೂರು ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದಲ್ಲಿ. ಅದನ್ನು ನಮ್ಮ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತನೆ ಮಾಡಿರುವ ವಿಗ್ರಹ ಪ್ರತಿಷ್ಠಾಪನೆಯಾಗುತ್ತಿರುವುದು ನಿಜಕ್ಕೂ ಮೈಸೂರಿಗರು ಹೆಮ್ಮೆಪಡುವ ವಿಷಯ. ಮೈಸೂರಿಗೂ ಅಯೋಧ್ಯೆಗೂ ಅವಿನಾಭಾವ ಸಂಬಂಧ ಇದೆ. ರಾಮ ಬಹುಶಃ ಶಿಲಾ ರೂಪದಲ್ಲಿ ಹಾರೋಹಳ್ಳಿಯಲ್ಲಿ ಭೂಮಿಯಲ್ಲಿ ನೆಲೆಗೊಂಡಿದ್ದರು ಎಂದೆನಿಸುತ್ತದೆ. ಏಕೆಂದರೆ, ಜಮೀನು ಮಾಲೀಕರ ಹೆಸರು ರಾಮದಾಸ್. ಮುಂದೊಂದು ದಿನ ಅಯೋಧ್ಯೆಗೆ ಹೋಗುವವರು ಮೊದಲು ಹಾರೋಹಳ್ಳಿಗೆ ಹೋಗಿ ಆನಂತರ ಅಯೋಧ್ಯೆಗೆ ಹೋಗಬೇಕಾಗುತ್ತದೆ ಎಂದರು.

ಸಾಹಿತ್ಯ ಲೋಕ ಟ್ರಸ್ಟ್‌ನ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಸಂಸ್ಥಾಪಕ ಅಧ್ಯಕ್ಷ ಎನ್.ಬೆಟ್ಟೇಗೌಡ, ಉಪಾಧ್ಯಕ್ಷೆ ಲಕ್ಷ್ಮಿದೇವಿ, ಕೋಶಾಧ್ಯಕ್ಷ ಎಂ.ಎನ್.ಚಂದ್ರಶೇಖರ್, ನಿರ್ದೇಶಕರಾದ ರವಿಕುಮಾರ್, ಶಾರದ, ವಿಕ್ರಂ ಅಯ್ಯಂಗಾರ್, ಉಮೇಶ್, ಹೇಮಂತ್, ಸಿರಿ ಬಾಲು, ಉಮೇಶ್, ಜಗದೀಶ್, ಎನ್.ಪುನೀತ್ ಇತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.1.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024 ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸ ಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಇಂದಿರಾ ಅವರಿಂದ ಸಾಂವಿಧಾನಿಕ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಸರ್ಕಾರಿ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ ಮೇಲ್ವಿಚಾರಕ ಟಿ. ರಾಜೇಶ್ವರಿ, ಸ್ಥಳ: ಸರ್ಕಾರಿ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ, ವಿಜಯನಗರ 4ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಸಮಿತಿ ಟ್ರಸ್ಟ್:** ರಾಜಗೋಪುರ ಮತ್ತು ಶ್ರೀ ಚಾಮರಾಜ ಒಡೆಯರ್ ಭವನದ ಗುದ್ದಲಿಪೂಜೆ ಸಮಾರಂಭ, ರಾಜಗೋಪುರದ ಗುದ್ದಲಿಪೂಜೆ : ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಜಗನ್ನಾಥ ಶೆಣೈ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಎಂಎಲ್‌ಸಿ ಡಾ. ಡಿ. ತಿಮ್ಮಯ್ಯ, ಮಾಜಿ ಶಾಸಕ ಎಸ್.ಎ. ರಾಮದಾಸ್, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸ್, ಸ್ಥಳ: ತ್ಯಾಗರಾಜ ರಸ್ತೆ, ಅಗ್ರಹಾರ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ-ಲೇಖನ ಮತ್ತು ಪ್ರಸ್ತುತಿ-ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ-ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ-ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ- ಉಮೇಶ್ ಎಸ್.ಎಸ್., 8.30 ಪರಾಗ-ಬೇಸಾಯದ ಬದುಕು ಸರಾಗ-ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ವಿ. ದೇಶಿಕಾಚಾರ್-ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00 ವನಿತಾ ವಿಹಾರ-ಕವಯಿತ್ರಿ ಮಧುರಾಣಿ ಅವರೊಂದಿಗೆ ಮಾತುಕತೆ ನಡೆಸಿಕೊಡುತ್ತಾರೆ- ಅಬ್ದುಲ್ ರಶೀದ್, 12.30 ದೇವರನಾಮ-ಪಿ.ರಮಾ, 12.45 ಸಂವಿಧಾನ ತಿದ್ದುಪಡಿಯ ವಿಧಿ ವಿಧಾನಗಳು ಕುರಿತು ಮಾತನಾಡುತ್ತಾರೆ ಸಂವಿಧಾನ ತಜ್ಞ ಡಾ. ಸುಧಾಕರ ಹೊಸಳ್ಳಿ, 1.20 ಭಾವಗೀತೆಗಳು-ರಶ್ಮಿ ವಿ. ರಾಮ್, 3.00 ಕೆ. ವರದರಂಗನ್-ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ-ಶ್ರೀರಾಮ ಪಟ್ಟಾಭಿಷೇಕ, ಪ್ರಸ್ತುತಿ- ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ-ಗ್ರಾಮೀಣರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಕುರಿತು ಎನ್.ಎಸ್. ಸುಪ್ರಿಯಾ ಅವರೊಂದಿಗೆ ಸಂದರ್ಶನ. ಸಂದರ್ಶಕರು- ಎನ್.ಕೇಶವಮೂರ್ತಿ, 9.30 ಎಲ್.ವೈದ್ಯನಾಥನ್, ಎಲ್. ಸುಬ್ರಹ್ಮಣ್ಯನ್ ಹಾಗೂ ಎಲ್. ಶಂಕರ್-ವಯೋಲಿನ್ ತ್ರಯೋ, 10.00 "ರಾಮು ರಮಯ್ಯ ಗಾಯೇಜಾ" ಅಯೋಧ್ಯೆಯಲ್ಲಿ ಏರ್ಪಡಿಸಿದ್ದ ಸಂಗೀತ ಸಂಜೆಯ ಧ್ವನಿಮುದ್ರಣ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಎಸ್. ವ್ಯಾಸ್ ಯೋಗ ವಿಶ್ವವಿದ್ಯಾನಿಲಯದಿಂದ ಡಿ.ಲಿಟ್‌ಗೆ ಭಾಜನರಾದ ಹಿರಿಯ ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್ ಅವರಿಗೆ ಅಭಿನಂದನಾ ಸಮಾರಂಭ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದಿಸುವವರು : ಹಿರಿಯ ವಿದ್ವಾಂಸ ಡಾ. ಸಿ.ಪಿ. ಕೃಷ್ಣಕುಮಾರ್, ಅಭಿನಂದನಾ ಭಾಷಣ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿಗಳಾದ ಡಾ. ಪದ್ಮಾಶೇಖರ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ನವಕರ್ನಾಟಕ ಪ್ರಕಾಶನ :** ಪುಸ್ತಕ ಪ್ರದರ್ಶನ, ಸ್ಥಳ: ನವಕರ್ನಾಟಕ ಪ್ರಕಾಶನ, ಬೆಳಗ್ಗೆ 9.30 ರಿಂದ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 58ನೇ ವರ್ಷದ ತೈಪೂಜಾ ಮಹೋತ್ಸವ, ಕಲ್ಯಾಣೋತ್ಸವ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5ಕ್ಕೆ.

ಮೈಸೂರು ಮಿತ್ರ

ಮಂಗಳವಾರ 23 ಜನವರಿ 2024

ಮೈಸೂರಿನಾದ್ಯಂತ ಭಕ್ತಿ ಭಾವದಿಂದ ಮೊಳಗಿದ ಜೈ ಶ್ರೀರಾಮ್...!

●ಅಯೋಧ್ಯೆ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ವೀಕ್ಷಣೆ; ವಿವಿಧೆಡೆ ಹೋಮ-ಹವನ ●ಮಜ್ಜಿಗೆ, ಪಾನಕ, ಪ್ರಸಾದ ವಿತರಣೆ; ಇದೇ ವೇಳೆ ಆರೋಗ್ಯ ತಪಾಸಣಾ ಶಿಬಿರ; ರಾಮ ಪಾರಾಯಣ

ಮೈಸೂರು,ಜ.22(ಜಿಎ)-ಅಯೋಧ್ಯೆ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಮೈಸೂರಿನಲ್ಲಿ ಎಲ್ಲೆಡೆ ಜೈ ಶ್ರೀರಾಮ್ ಘೋಷಣೆ ಮೊಳಗಿತು. ಮೈಸೂರಲ್ಲೂ ಶ್ರೀರಾಮ ಮಂದಿರ, ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಮಾತ್ರವಲ್ಲದೆ, ಬಹುತೇಕ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯ, ಶ್ರೀರಾಮ ತಾರಕ ಹೋಮ, ಆರೋಗ್ಯ ತಪಾಸಣೆ, ಮಜ್ಜಿಗೆ, ಪಾನಕ ಮತ್ತು ಪ್ರಸಾದ ವಿತರಿಸಲಾಯಿತು.

ನಗರದ ಬಹುತೇಕ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಂತರ ವಿವಿಧ ಪೂಜೆ ಸಲ್ಲಿಸಿದರು. ಮತ್ತೊಂದೆಡೆ ನಗರದ ವಿವಿಧೆಡೆ ಎಲ್‌ಇಡಿ ಪರದೆ ಮೂಲಕ ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ವೀಕ್ಷಿಸಿದರು.

ಕೇಸರಿಮಯ: ಮೈಸೂರಿನಾದ್ಯಂತ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಉತ್ಸವವನ್ನು ಹಬ್ಬದಂತೆ ಆಚರಿಸಿದರು. ಪ್ರಮುಖ ವೃತ್ತಗಳಲ್ಲಿ ಕೇಸರಿ ಬಂಟಿಂಗ್ಸ್ ಬಾವುಟಗಳನ್ನು ಕಟ್ಟಿ, ಕೆಲವರು ತಮ್ಮ ವಾಹನಗಳಿಗೂ ಕೇಸರಿ ಬಾವುಟ ಕಟ್ಟಿದರೆ, ಮತ್ತೆ ಹಲವರು ಕೇಸರಿ ಶಾಲು ಹಾಕಿಕೊಂಡು ಜೈ ಶ್ರೀರಾಮ್ ಘೋಷಣೆ ಕೂಗಿದರು.

ರಾಮಮಂದಿರಗಳಲ್ಲಿ ರಾಮ ಜಪ: ನಗರದ ಶಿವರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾದ ಶ್ರೀರಾಮ ಮಂದಿರದಲ್ಲಿ ಬೆಳಗ್ಗೆ 7ಕ್ಕೆ ರುದ್ರಾಭಿಷೇಕ, ಶ್ರೀರಾಮ ಸೀತಾ ಹನುಮ ಅಷ್ಟೋತ್ತರ, ಗಣಪತಿ ಹೋಮ, ಪಂಚಾಮೃತ ಅಭಿಷೇಕ, ನವಗ್ರಹ ಪೂಜೆ ಪೂರ್ಣಗೊಳಿಸಿ, ನಂತರ ರಾಮ ತಾರಕ ಹೋಮ ನಡೆಸಲಾಯಿತು. 11.30ರಿಂದ 12ರವರೆಗೆ ರಾಮ ಭಜನೆ, 12.30ಕ್ಕೆ ಮಹಾ ಮಂಗಳಾರತಿ ಮಾಡಲಾಯಿತು. ಬಳಿಕ ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು.

ನೂತನ ಮೂರ್ತಿ ಸ್ಥಾಪನೆ: ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ತಿಲಕ್‌ನಗರದಲ್ಲಿನ ತೆಲುಗು ರೆಡ್ಡಿ ಸಂಘದ ಶ್ರೀರಾಮಮಂದಿರದಲ್ಲಿ ಪಂಚಲೋಹದ ಶ್ರೀರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಂತನ ನೂತನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಯಿತು. ಇದಕ್ಕೂ ಮುನ್ನ ಬೆಳಗ್ಗೆ 7ಕ್ಕೆ ಗಣಪತಿ ಹೋಮ, ಶ್ರೀರಾಮನ ಬಿಂಬ ಸುಧಿ ಸ್ಥಾಪನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಗುರುಪ್ರಸಾದ್, ಪದಾಧಿಕಾರಿಗಳಾದ ಗುರುರಾಜ್, ಹರೀಶ್ ರೆಡ್ಡಿ, ವಿಶ್ವನಾಥ್, ಸುರೇಶ್, ನಾಗರಾಜು, ರವಿ ಇದ್ದರು.

ಶ್ರೀರಾಮ ತಾರಕ ಹೋಮ: ಅಯೋಧ್ಯೆಯಲ್ಲಿ ಶ್ರೀರಾಮ ಪ್ರತಿಷ್ಠಾಪನಾ ಕಾರ್ಯ ಯಶಸ್ವಿಯಾಗಿ ನಡೆಯಲೆಂದು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಸಿಎಫ್‌ಟಿಆರ್‌ಐ ಪಕ್ಕದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಅಮೃತೇಶ್ವರ ದೇವಾಲಯದ ಅರ್ಚಕರು ಶ್ರೀರಾಮ ತಾರಕ ಹೋಮ ನಡೆಸಿದರು.

ಮಹಿಳೆಯರು ಶ್ರೀರಾಮ ಜಪ ಹಾಗೂ ಶ್ರೀರಾಮ ಭಜನೆ ಕಾರ್ಯಕ್ರಮಗಳನ್ನು ನಡೆಸಲಾಯಿತು. ಅಯೋಧ್ಯೆಯ ನೇರ ಪ್ರಸಾರ ವೀಕ್ಷಿಸಲು ಎಲ್‌ಇಡಿ ವ್ಯವಸ್ಥೆ ಮಾಡಲಾಗಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಗೋಪಾಲ ರಾವ್, ನಾಗರಾಜ್, ವಾಸುದೇವ ಮೂರ್ತಿ, ಪರಾಜಿತ ಪ್ರಕಾಶ್, ಹರೀಶ್, ಬಾಲಕೃಷ್ಣ, ವಿನೋದ್ ಬಾಬು, ಜ್ಯೋತಿ ಮತ್ತಿತರರು ಪಾಲ್ಗೊಂಡಿದರು.

ಆರೋಗ್ಯ ತಪಾಸಣೆ: ವಿ.ಆರ್.ಟ್ರಸ್ಟ್, ಜಿಲ್ಲಾ ಅರ್ಚಕರ ಮತ್ತು ಪುರೋಹಿತರ ಸಂಘದ ವತಿಯಿಂದ ಬೆಳಗ್ಗೆ 9.30ರಿಂದ ಮಧ್ಯಾಹ್ನ 12.30ರವರೆಗೆ ನಗರದ ಕುಂಚಿಟಿಗರ ಸಂಘದ ಆಲಮ್ಮ ಛತ್ರದಲ್ಲಿ ಶ್ರೀರಾಮ ತಾರಕ ಹೋಮ ಮೈಸೂರು ಕುಮಾರ್ ನೇತೃತ್ವದಲ್ಲಿ ನಡೆಸಲಾಯಿತು. ಈ ವೇಳೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿ, ಶಿಬಿರದಲ್ಲಿ ರಕ್ತದೊತ್ತಡ, ಮಧುಮೇಹ ಮೊದಲಾದ ಸಮಸ್ಯೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಸಲಹೆ ನೀಡಿದ್ದಲ್ಲದೆ, ಶಿಬಿರದಲ್ಲಿ ಪಾಲ್ಗೊಂಡವರ ಆರೋಗ್ಯದ ಮೇಲೆ ವರ್ಷ ಪೂರ್ತಿ ನಿಗಾ ಇರಿಸಿ ಸಲಹೆ ಸೂಚನೆ ನೀಡಲಾಗುವುದು ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ.ಶುಶ್ರುತ್‌ಗೌಡ ತಿಳಿಸಿದರು.

ಶಾಲೆಗಳಲ್ಲಿ ಮೊಳಗಿದ ರಾಮ ಪಾರಾಯಣ: ಮೈಸೂರಿನ ಸಂಘ-ಸಂಸ್ಥೆ, ಹೋಟೆಲ್, ಸಂಘಟನೆ, ದೇವಾಲಯ ಮತ್ತು ಮನೆ ಮನೆಗಳಲ್ಲಿ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ವೀಕ್ಷಿಸಿ, ರಾಮ ತಾರಕ ಹೋಮ ಮತ್ತು ರಾಮ ಪಾರಾಯಣ ಮಾಡಿದಂತೆ ನಗರದ ಅನೇಕ ವಿದ್ಯಾ ಸಂಸ್ಥೆಗಳಲ್ಲಿಯೂ ವಿದ್ಯಾರ್ಥಿಗಳು ರಾಮ ಪಾರಾಯಣ ಮಾಡಿಕೊಂಡು ಬಾಲರಾಮ ಪ್ರಾಣ ಪ್ರತಿಷ್ಠಾಪನೆಯನ್ನು ಭಕ್ತಿಯಿಂದ ವೀಕ್ಷಿಸಿದರು.

ಎಲ್‌ಇಡಿ ಪರದೆ: ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ವೀಕ್ಷಿಸಲು ಮೈಸೂರಿನ ಬಹುತೇಕ ವೃತ್ತಗಳಲ್ಲಿ ಬೃಹತ್ ಎಲ್‌ಇಡಿ ಪರದೆ ಮತ್ತು ಧ್ವನಿವರ್ಧಕಗಳನ್ನು ಅಳವಡಿಸಲಾಗಿತು. ನಗರದ ಅಗ್ರಹಾರ ವೃತ್ತದಲ್ಲಿ ಅಳವಡಿಸಿದ್ದ ಎಲ್‌ಇಡಿ ಪರದೆ ಮುಂದೆ ಬೈಕ್, ಕಾರು, ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರು ಬಾಲರಾಮನ ಮೂರ್ತಿ ನೋಡಿ ಕಣ್ತುಂಬಿಕೊಂಡರು.

ಪ್ರಸಾದ ವಿತರಣೆ: ಸಂಘ-ಸಂಸ್ಥೆ, ಹೋಟೆಲ್, ಸಂಘಟನೆ, ದೇವಾಲಯ ಮತ್ತು ಮನೆ ಮನೆಗಳಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ವೀಕ್ಷಿಸಿ ಸಂಭ್ರಮಿಸಿ, ಅನೇಕ ವೃತ್ತಗಳಲ್ಲಿ ಮಜ್ಜಿಗೆ, ಪಾನಕ, ಬಾತು, ಲಾಡುಗಳನ್ನು ವಿತರಿಸಿದ್ದು, ವಿಶೇಷವಾಗಿತ್ತು.



ಮೈಸೂರು ನಗರ-ಜಿಲ್ಲಾ ಬ್ರಾಹ್ಮಣ ಸಂಘದಿಂದ ಶ್ರೀರಾಮ ತಾರಕ ಹೋಮ ನೆರವೇರಿಸಲಾಯಿತು.



ಮೈಸೂರಿನ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಲಾಡು ಪ್ರಸಾದ ವಿತರಿಸಲಾಯಿತು.



ಮೈಸೂರಿನ ಆಲಮ್ಮ ಛತ್ರದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು.



ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿ ಮೈಸೂರಿನ ತ್ಯಾಗರಾಜ ರಸ್ತೆಯ ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿ, ನೂರಾರು ಭಕ್ತರಿಗೆ ಮಜ್ಜಿಗೆ-ಪಾನಕ ಹಾಗೂ ಪ್ರಸಾದ ವಿತರಿಸಲಾಯಿತು.



ಅಯೋಧ್ಯದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ ಮೈಸೂರು ಮಹದೇಶ್ವರ ಬಡಾವಣೆಯಲ್ಲಿ ಎಲ್‌ಇಡಿ ಸ್ಕ್ರೀನ್ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ವಿಜಯನಗರ ರೈಲ್ವೆ ಲೇಔಟ್ ಉದ್ಯಾನವನದಲ್ಲಿ ರಾಮ ದೀಪಂ ಮೂಲಕ ದೀಪಗಳನ್ನು ಬೆಳಗಿಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್, ರಾಮ ಭಕ್ತರು ಹಾಗೂ ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.

ಶ್ರೀರಾಮಮಂದಿರ ಸೇರಿದಂತೆ ಮೈಸೂರು ದೇವಾಲಯಗಳಲ್ಲಿ ವಿಶೇಷ ಪೂಜೆ

ಮೈಸೂರು,ಜ.22(ಆರ್‌ಕೆ)- ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಇಂದು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ರಾಮ ನಾಮ ಸ್ಮರಣೆ ಮಾಡಲಾಯಿತು. ಮೈಸೂರಿನ ದೇವರಾಜ ಮೊಹಲ್ಲಾ, ಲಕ್ಷ್ಮೀಪುರಂ, ವಿವಿಪುರಂ, ಪಡುವಾರಹಳ್ಳಿ, ಸಿದ್ಧಾರ್ಥ ನಗರ, ಹೆಬ್ಬಾಳು, ಮೇಟಗಳ್ಳಿ, ಕುಂಬಾರ ಕೊಪ್ಪಲು, ಮಂಚೇಗೌಡನಕೊಪ್ಪಲು, ಶಿವರಾಂಪೇಟೆ ಸೇರಿದಂತೆ ನಗರದಾದ್ಯಂತ ಶ್ರೀರಾಮಮಂದಿರಗಳಲ್ಲಿ ಸೋಮವಾರ ಮುಂಜಾನೆಯಿಂದಲೇ ವಿಶೇಷ ಪೂಜೆ, ಧಾರ್ಮಿಕ ಕೈಂಕರ್ಯಗಳು, ಭಜನೆ, ಧ್ಯಾನ, ಹೋಮ, ಹವನಾದಿಗಳು ನಡೆದವು.

ಅದೇ ರೀತಿ ಬನ್ನಿಮಂಟಪದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆಯ ಪಂಚಮುಖಿ ಆಂಜನೇಯ ಸ್ವಾಮಿ, ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ಎಲ್ಲಾ ಹನುಮ ದೇವಾಲಯಗಳನ್ನೂ ತಳಿರು-ತೋರಣಗಳಿಂದ ಅಲಂಕೃತಗೊಳಿಸಿ ವಿಶೇಷ ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು.

ಅಲ್ಲದೆ ಉಳಿದೆಲ್ಲಾ ದೇವಸ್ಥಾನಗಳಿಗೂ ಇಂದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ದೇವರ ದರ್ಶನ ಪಡೆದರು. ಇಡೀ ಮೈಸೂರು ನಗರದಾದ್ಯಂತ ತಳಿರು-ತೋರಣಗಳಿಂದ ಕಂಗೊಳಿಸುತ್ತಿದ್ದ ದೇವಸ್ಥಾನಗಳಲ್ಲಿ ಶ್ರೀರಾಮನ ಫೋಟೋಗೆ ಪೂಜೆ ನೆರವೇರಿಸಲಾಯಿತು. ಅಭಿಷೇಕ, ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ಎಲ್ಲಾ ದೇವಾಲಯಗಳಲ್ಲೂ ಶ್ರೀ ರಾಮನ ಫ್ಲೆಕ್ಸ್, ಬಾವುಟ, ಬಂಟಿಂಗ್ಸ್‌ಗಳಿಂದ ಕಂಗೊಳಿಸುತ್ತಿದ್ದು, ಇಡೀ ಮೈಸೂರು ನಗರದಾದ್ಯಂತ ಹಬ್ಬದ ವಾತಾವರಣ, ಎಲ್ಲೆಲ್ಲೂ ಕೇಸರಿ ಬಣ್ಣದ ರಾಮನ ಭಾವಚಿತ್ರವಿರುವ ಬಾವುಟಗಳ ಪ್ರದರ್ಶನ, ರಾಮ ನಾಮ ಸ್ಮರಣೆ, ಸರ್ಕಲ್‌ಗಳು, ಜಂಕ್ಷನ್‌ಗಳ ಪ್ರಮುಖ ರಸ್ತೆಗಳಲ್ಲಿ ಶ್ರೀರಾಮನ ಆರಾಧನೆ, ಪ್ರಸಾದ ವಿನಿಯೋಗ ನಡೆಯಿತು. ಕಾರು, ಆಟೋ, ದ್ವಿಚಕ್ರ ವಾಹನಗಳಲ್ಲೂ ಶ್ರೀರಾಮನ ಭಾವಚಿತ್ರವಿರುವ ಕೇಸರಿ ಬಾವುಟಗಳ ಪ್ರದರ್ಶನವಾಯಿತು. ಸಂಜೆಯೂ ರಾಮಮಂದಿರ, ಹನುಮ ದೇವಾಲಯಗಳಿಗೆ ಭಕ್ತರು ಧಾವಿಸಿ ಭಜನೆ, ರಾಮ ನಾಮ ಜಪಗಳಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.



ಮೈಸೂರಿನಲ್ಲಿ ಶಾಲಾ ವಿದ್ಯಾರ್ಥಿಗಳು ಸೋಮವಾರ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ವೀಕ್ಷಿಸಿ, ರಾಮ ಪಾರಾಯಣ ಮಾಡಿದರು.



ಮೈಸೂರಿನ ತಿಲಕ್‌ನಗರದಲ್ಲಿನ ತೆಲುಗು ರೆಡ್ಡಿ ಸಂಘದ ಶ್ರೀರಾಮಮಂದಿರದಲ್ಲಿ ಪಂಚಲೋಹದ ಶ್ರೀರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಂತನ ನೂತನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಯಿತು. ಈ ವೇಳೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಕೇಸರಿ ಶಾಲು, ಧ್ವಜ ಹಿಡಿದು ಜೈ ಶ್ರೀರಾಮ್ ಘೋಷಣೆ ಕೂಗುತ್ತಿರುವ ದೃಶ್ಯ ಕಂಡು ಬಂತು.



ಅಗ್ರಹಾರದ ವೃತ್ತದಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗಿತ್ತು.



ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಬನ್ನೂರು ಹೋಬಳಿ, ಕೊಡಗಹಳ್ಳಿ ಗ್ರಾಮದ ಶ್ರೀ ರಾಮ ದೇವಸ್ಥಾನ ಭಕ್ತರ ಯುವಕ ಮಂಡಳಿ ವತಿಯಿಂದ ಮನೆ ಮನೆಗೂ ಸಿಹಿ ಹಂಚಿ, ಸಂಭ್ರಮಿಸಲಾಯಿತು.



ಗಜಾನನ ಯೂತ್ಸ್ & ಜೆ.ಪಿ.ನಗರ ಯುವ ಬಳಗದಿಂದ ಜೆ.ಪಿ.ನಗರದ ಕವಿತಾ ಬೇಕರಿ ರಸ್ತೆಯಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಸಾರ್ವಜನಿಕರಿಗೆ ಪಾನಕ ಮತ್ತು ಮಜ್ಜಿಗೆ ಹಾಗೂ ಅನ್ನದಾನ ಏರ್ಪಡಿಸಲಾಗಿತ್ತು. ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಯುವ ಮುಖಂಡರಾದ ಜಗನ್ನಾಥ್ ಭೋವಿ, ನವೀನ, ಮಹೇಂದ್ರ, ಕುಮಾರ ಇತರರಿದ್ದರು.

ಮೈಸೂರಲ್ಲಿ ಭಾರಿ ಪೊಲೀಸ್ ಭದ್ರತೆ; ಕಟ್ಟೆಚ್ಚರ




ಮೈಸೂರು,ಜ.22(ಆರ್‌ಕೆ)-ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ಇಂದು ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಭಾರಿ ಪೊಲೀಸ್ ಬಂದೋಬಸ್ತ್ ಮಾಡಿ, ಕಟ್ಟೆಚ್ಚರ ವಹಿಸಲಾಗಿತ್ತು.

ಭಾನುವಾರ ರಾತ್ರಿಯಿಂದಲೇ ಪೊಲೀಸ್ ಹಿರಿಯ ಅಧಿಕಾರಿಗಳು ಅಧೀನಾಧಿಕಾರಿಗಳಿಗೆ ಭದ್ರತೆ ಕುರಿತು ಬ್ರೀಫಿಂಗ್ ಮಾಡಿ ಬಂದೋಬಸ್ತ್ ಕರ್ತವ್ಯದ ಬಗ್ಗೆ ಸೂಚನೆಗಳನ್ನು ನೀಡಿದ್ದರು. ಇಂದು ಮುಂಜಾನೆಯಿಂದಲೇ ಸಿಟಿ ಸಿವಿಲ್ ಪೊಲೀಸ್, ಸಿಎಆರ್, ಕೆಎಸ್‌ಆರ್‌ಪಿ, ಕಮಾಂಡೋ ಪಡೆ, ಅಶ್ವಾರೋಹಿ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ರಾಮತಾರಕ ಹೋಮ ನಡೆದ ಅರಮನೆ ಆವರಣ, ಎಲ್ಲಾ ಮುಜರಾಯಿ ದೇವಸ್ಥಾನಗಳು, ಪ್ರಮುಖ ಸರ್ಕಲ್, ಜಂಕ್ಷನ್‌ಗಳು, ಶ್ರೀರಾಮಮಂದಿರ, ಹನುಮ ದೇವಸ್ಥಾನಗಳ ಬಳಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತಲ್ಲದೆ, ಬೇರೆ ಬೇರೆ ದೇವಾಲಯಗಳ ಬಳಿಯೂ ಆಯಾ ಠಾಣಾ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಜನಸಂದಣಿ ಇರುವ ಬಸ್‌ಸ್ಟ್ಯಾಂಡ್, ರೈಲ್ವೆ ಸ್ಟೇಷನ್, ಕೆಆರ್ ಸರ್ಕಲ್, ಗಾಂಧಿ ಚೌಕ, ಮಕ್ಕಾಜಿ ಚೌಕ, ಶಿವರಾಂಪೇಟೆ ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಅಗ್ರಹಾರ ಸರ್ಕಲ್, ಚಾಮುಂಡಿಪುರಂ ವೃತ್ತ ಸೇರಿದಂತೆ ಹಲವೆಡೆಯೂ ಪೊಲೀಸರು ನಿಗಾ ವಹಿಸಿ ಮೆರವಣಿಗೆ, ವಿಜಯೋತ್ಸವಗಳ ಬಗ್ಗೆ ಎಚ್ಚರ ವಹಿಸಿದ್ದರು.

ಸೂಕ್ಷ್ಮ ಪ್ರದೇಶಗಳಾದ ಮಂಡಿ ಮೊಹಲ್ಲಾ, ಎನ್‌ಆರ್ ಮೊಹಲ್ಲಾ, ಉದಯಗಿರಿ, ಗಾಯತ್ರಿಪುರಂ, ಕಲ್ಯಾಣಗಿರಿನಗರ, ಬೀಡಿ ಕಾಲೋನಿ, ಭಾರತ್‌ನಗರ, ಸೇಂಟ್ ಫಿಲೋಮಿನಾ ಚರ್ಚ್ ಸೇರಿದಂತೆ ವಿವಿಧ ಕ್ರೈಸ್ತ ದೇವಾಲಯಗಳು, ಮಸೀದಿಗಳ ಬಳಿಯೂ ಹೆಚ್ಚುವರಿ ಪೊಲೀಸ್ ಸಿಬ್ಬದಿ ನಿಯೋಜಿಸಿ, ಕಟ್ಟೆಚ್ಚರ ವಹಿಸಲಾಗಿತ್ತು.

ಕಾನೂನು-ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ನಡೆದ ವಿಶೇಷ ಭದ್ರತಾ ವ್ಯವಸ್ಥೆಯನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮೇಲ್ವಿಚಾರಣೆ ನಡೆಸಿದರು. ಎಲ್ಲಾ ಉಪವಿಭಾಗಗಳ ಎಸಿಪಿ, ಇನ್ಸ್‌ಪೆಕ್ಟರ್ಸ್, ಸಬ್ ಇನ್ಸ್‌ಪೆಕ್ಟರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಭದ್ರತಾ ಕರ್ತವ್ಯ ನಿರ್ವಹಿಸಿದರು. ಆದರೆ ಮೈಸೂರಿನಲ್ಲಿ ಇಂದು ಯಾವುದೇ ಅಹಿತಕರ ಘಟನೆ ನಡೆದ ಬಗ್ಗೆ ವರದಿಯಾಗಿಲ್ಲ. ಅದೇ ರೀತಿ ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ.ಎನ್.ನಂದಿನಿ ನೇತೃತ್ವದಲ್ಲಿ ಕೆಆರ್‌ನಗರ, ಹುಣಸೂರು, ಪಿರಿಯಾಪಟ್ಟ ಸೇರಿದಂತೆ ಜಿಲ್ಲೆಯಾದ್ಯಂತ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.



ನಕ್ಕರೆ ಅದೇ ಸ್ವರ್ಗ

ಹುಡುಗ : ಇಲ್ಲಿಂದ ಬ್ಯಾಂಕ್ ಎಷ್ಟು ದೂರ ಇದೆ?
ಹುಡುಗಿ : ಎರಡು ಕಿಲೋಮೀಟರ್!
ಹುಡುಗ : ನಡೆದು ಹೋಗುವುದೇ? ಅಥವಾ ಆಟೋದಲ್ಲಿ ಹೋಗಬಹುದೇ?
ಹುಡುಗಿ : ಸುಮ್ಮನೆ ನನ್ನ ಹಿಂದೆ ಸಾಲಿನಲ್ಲಿ ನಿಂತುಕೋ!

ಮೈಸೂರು ಮಿತ್ರ

ಮಂಗಳವಾರ, 23 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬೇರೆಯವರ ಗಟ್ಟಿ ಧ್ವನಿಗಳು ನಿಮ್ಮ ಒಳದನಿಯನ್ನು ಅಡಗಿಸಲು ಬಿಡಬೇಡಿ. ನಿಮ್ಮ ಹೃದಯ ಮತ್ತು ಸ್ಫೂರ್ತಿಯ ಮಾತುಗಳನ್ನು ಅನುಸರಿಸಿ. –ಬಿಲ್ ಗೇಟ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಾನಕ್ಕಿಂತ ದೊಡ್ಡದಿಲ್ಲ. ದಾನ ಮಾಡಿ ಕೆಟ್ಟೋರಿಲ್ಲ

ನಿಮ್ಮ ಪತ್ರಗಳು

ಆ್ಯಂಟಿ ಬಯೋಟಿಕ್‌ಗೆ ಕಾರಣ ಕಡ್ಡಾಯ ಸ್ವಾಗತಾರ್ಹ

ಮಾನ್ಯರೆ,

ವೈದ್ಯರು ರೋಗಿಗಳಿಗೆ ಶಿಫಾರಸ್ಸು ಮಾಡುವ ಆ್ಯಂಟಿ ಬಯೋಟಿಕ್ ಔಷಧಗಳಿಂದಾಗಿ 2019 ಅಂಕಿ ಅಂಶಗಳ ಪ್ರಕಾರ 27 ಕೋಟಿ ಜನ (ಆ್ಯಂಟಿ ಬಯೋಟಿಕ್ ಪ್ರತಿರೋಧದಿಂದಾಗಿ) ಮೃತಪಟ್ಟಿರುವುದಾಗಿ ವಿಶ್ವಸಂಸ್ಥೆಯ ಆರೋಗ್ಯ ಇಲಾಖೆ ತಿಳಿಸಿದ್ದು, ಇದಕ್ಕೆ ಪ್ರತಿಯಾಗಿ ಭಾರತದ ಕೇಂದ್ರ ಸರ್ಕಾರ ವೈದ್ಯರು ಬರೆದುಕೊಡುವ ಔಷಧಿಯ ಚೀಟಿಯಲ್ಲಿ ಆ್ಯಂಟಿಬಯೋಟಿಕ್ ಏಕೆ ಶಿಫಾರಸ್ಸು ಮಾಡುತ್ತಿದ್ದೇವೆ ಎಂದೂ ತಿಳಿಸಬೇಕೆಂದು ಕಡ್ಡಾಯ ಮಾಡಿ ಆದೇಶ ಹೊರಡಿಸಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಆ್ಯಂಟಿಬಯೋಟಿಕ್‌ಗಳನ್ನು ಶಿಫಾರಸ್ಸು ಮಾಡುವಾಗ ವೈದ್ಯರಿಗೆ ಕಡ್ಡಾಯವಾಗಿ ಸೂಚನೆಗಳು ಮತ್ತು ಕಾರಣಗಳನ್ನು ನಮೂದಿಸುವಂತೆ ಸೂಚಿಸಿರುವುದು, ಆ್ಯಂಮೈಕ್ರೊಬಿಯಲ್ ಬಳಕೆಯನ್ನು ತರ್ಕಬದ್ಧಗೊಳಿಸಲು ಮತ್ತು ವಿವೇಚನಾರಹಿತ ಸೇವನೆಯನ್ನು ತಪ್ಪಿಸಲು ಸಹಾಯ ಮಾಡುತ್ತದೆ. ದೇಶದಲ್ಲಿ ಅತಿಯಾದ ಆ್ಯಂಟಿಬಯೋಟಿಕ್‌ಗಳ ಬಳಕೆಯಿಂದಾಗಿ, ಜನರಲ್ಲಿ ಆ್ಯಂಟಿಬಯೋಟಿಕ್‌ಗಳು ಯಾವುದೇ ರೀತಿಯ ಕೆಲಸ ಮಾಡದ ಸ್ಥಿತಿಗೆ ತಲುಪಿದ್ದು ಇದನ್ನು ತಡೆಗಟ್ಟುವ ಸಲುವಾಗಿ ಸರ್ಕಾರ ಆ್ಯಂಟಿಬಯೋಟಿಕ್‌ಗಳ ಬಳಕೆಯ ಅನಿವಾರ್ಯತೆಯನ್ನು ವೈದ್ಯರು ತಿಳಿಸಬೇಕೆಂಬ ನಿಯಮ ಜಾರಿಗೆ ತಂದಿರುವುದು ಉತ್ತಮ ಬೆಳವಣಿಗೆಯಾಗಿದೆ.

ಅತಿಯಾದ ಅಮೃತವು ವಿಷವಾಗುವ ರೀತಿಯಲ್ಲಿ ಹೆಚ್ಚು ಆ್ಯಂಟಿಬಯೋಟಿಕ್‌ಗಳ ಬಳಕೆ ಕೂಡ ದೇಹದ ಆರೋಗ್ಯಕ್ಕೆ ಹಾನಿಕಾರಕವಾಗುತ್ತದೆ. ವೈದ್ಯಕೀಯ ಕ್ಷೇತ್ರ ಪ್ರಸ್ತುತ ವ್ಯಾಪಾರವಾಗಿ ಪರಿಣಮಿಸಿದ್ದು, ಔಷಧ ಕಂಪನಿಗಳು ಕೆಲ ವೈದ್ಯರನ್ನು ಲಂಚದ ಮೂಲಕ ತಮ್ಮದೇ ಔಷಧಗಳನ್ನು ರೋಗಿಗಳಿಗೆ ಶಿಫಾರಸ್ಸು ಮಾಡುವಂತೆ ಪ್ರಭಾವ ಬೀರುತ್ತವೆ. ಆದ ಕಾರಣ ಇಂತಹ ಔಷಧಗಳನ್ನು ಅಗತ್ಯವಿಲ್ಲದಿದ್ದರೂ ವೈದ್ಯರು ರೋಗಿಗಳಿಗೆ ಬರೆದುಕೊಡುತ್ತಾರೆ ಮತ್ತು ಜೆನರಿಕ್ ಔಷಧಗಳನ್ನು ಕಡೆಗಣಿಸುತ್ತಾರೆ.

ಕೇಂದ್ರ ಸರ್ಕಾರವು ಅನಗತ್ಯ ಆ್ಯಂಟಿಬಯೋಟಿಕ್‌ಗಳನ್ನು ಶಿಫಾರಸ್ಸು ಮಾಡುವವರ ವಿರುದ್ಧ ಕಠಿಣ ಕಾನೂನು ಜಾರಿಗೊಳಿಸಬೇಕು ಮತ್ತು ಇದನ್ನು ಪಾಲಿಸದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ದೇಶದ ಜನರ ಪರವಾಗಿ ಆಗ್ರಹಿಸೋಣ.

–ರಾಸುಮ ಭಟ್,ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಕೆಆರ್‌ಎಸ್ ಅಣೆಕಟ್ಟೆಯ ಸೇತುವೆ ಟೋಲ್ ಸಂಗ್ರಹ ರದ್ದುಪಡಿಸಿ

ಮಾನ್ಯರೆ,

ವಿಶ್ವ ವಿಖ್ಯಾತ ಕೆಆರ್‌ಎಸ್ ಅಣೆಕಟ್ಟಿನ ಕೆಳಭಾಗದಲ್ಲಿ ಸಾರ್ವಜನಿಕರು ಮತ್ತು ವಾಹನಗಳ ಓಡಾಟಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಳೆದ 20 ವರ್ಷಗಳ ಹಿಂದೆ ಸುಮಾರು ಒಂದು ಫರ್ಲಾಂಗ್ ದೂರದ ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ. ಕೆಆರ್‌ಎಸ್ ಅಣೆಕಟ್ಟನ್ನು ವೀಕ್ಷಿಸಲು ಬರುವವರಿಗೆ ಮತ್ತು ಕೆಆರ್‌ಎಸ್‌ನಿಂದ ಉತ್ತರ ಭಾಗಕ್ಕೆ ಕಾರು, ಬಸ್ಸು, ಟೆಂಪೋಗಳಲ್ಲಿ ಪ್ರಯಾಣ ಮಾಡುವ ಎಲ್ಲರೂ ಈ ಸೇತುವೆ ಮೇಲೆ ಸಂಚರಿಸಲು ಟೋಲ್ (ವಾಹನಗಳ ಸಂಚಾರ ಶುಲ್ಕ) ಅನ್ನು ಕೊಟ್ಟು ಸಂಚರಿಸಬೇಕು. 20 ವರ್ಷಗಳ ಹಿಂದೆ ಈ ಒಂದು ಫರ್ಲಾಂಗ್ ದೂರದ ಸೇತುವೆ ನಿರ್ಮಾಣ ಕಾರ್ಯಕ್ಕೆ 8 ರಿಂದ 10 ಕೋಟಿ ರೂಪಾಯಿ ಖರ್ಚು ಮಾಡಿರಬಹುದು. ಆದರೆ ಪ್ರತಿ ವರ್ಷ ಈ ಟೋಲ್ ಸಂಗ್ರಹದಿಂದ ಕನಿಷ್ಠ ಪಕ್ಷ 4 ರಿಂದ 5 ಕೋಟಿ ರೂಪಾಯಿ ಸಂಗ್ರಹವಾಗುತ್ತಿದೆ. ಅಂದರೆ ಸುಮಾರು 20 ವರ್ಷಗಳಿಂದ ಸರಿ ಸುಮಾರು 100 ಕೋಟಿ ರೂಪಾಯಿ ಟೋಲ್ ಸಂಗ್ರಹಿಸಿದಂತಾಗಿದೆ.

ಸಂಪರ್ಕ ಸೇತುವೆಗಳನ್ನು ನಿರ್ಮಾಣ ಮಾಡುವುದು ಸರ್ಕಾರ ಲಾಭ ಗಳಿಸಲೋ ಅಥವಾ ಸಾರ್ವಜನಿಕರ ಅನುಕೂಲಕ್ಕಾಗಿಯೋ? ಕಳೆದ ಹತ್ತು ವರ್ಷಗಳಿಂದೀಚೆಗಂತೂ, ಕೆಆರ್‌ಎಸ್‌ನ ಹಿನ್ನೀರಿನ ಭಾಗದಲ್ಲಿ ಹೊಸದಾಗಿ ಕೋಡೇಸ್ ಕಂಪನಿಯವರು ನಿರ್ಮಾಣ ಮಾಡಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ಮತ್ತು ಭೂವರಹಾಸ್ವಾಮಿ ದೇವಸ್ಥಾನಕ್ಕೆ ಶನಿವಾರ ಮತ್ತು ಭಾನುವಾರ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಇವರುಗಳಿಂದಲೇ ಸಾಕಷ್ಟು ಟೋಲ್ ಸಂಗ್ರಹವಾಗುತ್ತಿದೆ. ಈ ಸೇತುವೆಯ ಮೇಲೆ ಓಡಾಡುವ ಎಲ್ಲಾ ರೀತಿಯ ವಾಹನಗಳಿಗೂ ಟೋಲ್ ಅನ್ನು ಸರ್ಕಾರ ರದ್ದು ಮಾಡಲಿ. ಆದರೆ ಸಂಬಂಧಿಸಿದ ಅಧಿಕಾರಿಗಳು ಇತ್ತೀಚೆಗೆ ಹೇಳಿಕೆ ನೀಡಿ ಮತ್ತೆ ಇನ್ನೊಂದು ವರ್ಷ ಮಾತ್ರ ಟೋಲ್ ಸಂಗ್ರಹಿಸುವುದಾಗಿ ಹೇಳಿದ್ದಾರೆ. ಇವರು ಹೀಗೆ ಕಳೆದ 5 ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದಾರೆ. ಮಾನ್ಯ ಪ್ರವಾಸೋದ್ಯಮ ಸಚಿವರು ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಟೋಲ್ ಸಂಗ್ರಹ ರದ್ದುಪಡಿಸಲಿ.

–ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪು ನಗರ, ಮೈಸೂರು

ಪೂಜಿಸುವವರಲ್ಲ, ಅನುಸರಿಸುವವರು ಮಾತ್ರ ನೈಜ ಡಾ.ಅಂಬೇಡ್ಕರ್‌ವಾದಿಗಳು

ಮಾನ್ಯರೆ,

"ನನ್ನನ್ನು ಪುಸ್ತಕಗಳಲ್ಲಿ ಹುಡುಕಿ, ಪ್ರತಿಮೆಗಳಲ್ಲಲ್ಲ" ಎಂದು ಹೇಳಿದ ಅಂಬೇಡ್ಕರ್ ಅವರ 125ಮೀ ಎತ್ತರದ ಮೂರ್ತಿ ಹೈದರಾಬಾದ್‌ನಲ್ಲಿ ಮತ್ತು ವಿಜಯವಾಡದಲ್ಲಿ ಭವ್ಯವಾಗಿ ತಲೆ ಎತ್ತಿ ನಿಂತಿರುವುದು ಸಂತೋಷವೇ. ಆದರೂ, ಅಂಬೇಡ್ಕರ್ ಅವರನ್ನು ಓದಿ ಅರ್ಥೈಸಿಕೊಂಡ ನಾವು ಒಮ್ಮೆ ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಅಂದು ಗುಜರಾತಿನ ಸರ್ದಾರ್ ಪಟೇಲರ ಮೂರ್ತಿಗೆ ಭಾರೀ ವೆಚ್ಚದ ಕುರಿತು ನಾವು ಮಾಡಿದ ಟೀಕೆಗಳನ್ನೊಮ್ಮೆ ನೆನೆಸಿಕೊಳ್ಳಬೇಕು. ಆ ವೆಚ್ಚದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗುತ್ತಿದ್ದವು ಎಂದು ಹೇಳಿದ ನಾವು ಈಗ ಮೂರ್ತಿಪೂಜೆಯನ್ನು ಕಟುವಾಗಿ ವಿರೋಧಿಸಿದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರಂತಹ ಮಹಾಚೇತನವನ್ನು ಪ್ರತಿಮೆಯಲ್ಲಿ ಹುಡುಕ ಹೊರಟಿದ್ದೇವೆ. ಅದರ ಬದಲಾಗಿ ಅವರದೇ ಹೆಸರಿನಲ್ಲಿ ಬೇರೆ ಅಭಿವೃದ್ಧಿ ಕೆಲಸಗಳಿಗೆ, ಬಡ ವಿದ್ಯಾರ್ಥಿಗಳ ಓದಿಗೆ ಅನುಕೂಲವಾಗುವಂತೆ ಮಾಡಿದ್ದರೆ ಡಾ.ಅಂಬೇಡ್ಕರ್ ಅವರನ್ನು ಅರಿತು, ಅಪ್ಪಿದಂತಾಗುತ್ತಿತ್ತು.


–ಹಣಮಂತ ಕಾಂಬಳೆ, ಪತ್ರಿಕೋದ್ಯಮ ವಿದ್ಯಾರ್ಥಿ, ತುಮಕೂರು

ಅವೈಜ್ಞಾನಿಕ ಮದ್ಯಪಾನ ತಪಾಸಣೆ ತಪ್ಪಿಸಿ!

ಮಾನ್ಯರೆ,

ನಿನ್ನೆ ರಾತ್ರಿ ಸುಮಾರು 10.30 ಘಂಟೆಗೆ ಒಂದು ಆರತಕ್ಷತೆ ಕಾರ್ಯಕ್ರಮ ಮುಗಿಸಿಕೊಂಡು ವಯೋವೃದ್ಧರಾದ ನನ್ನ ತಾಯಿಯವರೊಂದಿಗೆ ಬನ್ನೂರು ರಸ್ತೆ ದೇವೇಗೌಡ ಸರ್ಕಲ್ ಬಳಿ ಬರುತ್ತಿದ್ದೆ. ಮದ್ಯಪಾನ ತಪಾಸಣೆಗೆಂದು ಅಡ್ಡಗಟ್ಟಿದ ಪೊಲೀಸ್ ಪೇದೆಯೊಬ್ಬರು ನನ್ನೊಡನೆ "ಎಲ್ಲಿಂದ ಬರುತ್ತಿದ್ದೀರಾ, ಎಲ್ಲಿಗೆ ಹೋಗುತ್ತಿದ್ದೀರಾ" ಎಂದರು. ಮಧ್ಯಮ ಧ್ವನಿಯಲ್ಲಿ ಅವರ ಪ್ರಶ್ನೆಗೆ ಉತ್ತರಿಸಿದೆ. ಮತ್ತೆ ಆತ ಸ್ವಲ್ಪ ಜೋರಾಗಿ ಹೇಳಿ ಎಂದು ತನ್ನ ಮುಖವನ್ನು ನನ್ನ ಬಾಯಿಯ ಬಳಿ ತಂದರು. ಇವರ ಮೂಗು ಹಾಗೂ ನನ್ನ ಬಾಯಿಯ ಅಂತರ ಎರಡು ಇಂಚು ಇರಬಹುದು. ಬಹುಶಃ ನನ್ನ ಮಡದಿ ಬಿಟ್ಟರೆ ಈತನೇ ಅಷ್ಟು ಹತ್ತಿರ ಬಂದವನು. ಸಾಂಕ್ರಾಮಿಕ ರೋಗಗಳು ಹರಡುತ್ತಿರುವ ಈ ಕಾಲದಲ್ಲಿ ಸರಿಯಾದ ಗುಣಮಟ್ಟವಿಲ್ಲದ ತಪಾಸಣೆ ಯಂತ್ರವಿಲ್ಲದೆ ಈ ರೀತಿ ಅವೈಜ್ಞಾನಿಕ ಪದ್ಧತಿ ಅನುಸರಿಸಿ ಸಾರ್ವಜನಿಕರಿಗೆ ಕಿರಿಕಿರಿ ಮಾಡುತ್ತಿರುವುದು ಎಷ್ಟು ಸರಿ? ಇದರಿಂದ ರೋಗಗಳು ತಮಗೂ ಹರಡುವುದೆಂಬ ಕನಿಷ್ಠ ಬುದ್ಧಿಯು ಇಲ್ಲವೇ? ಪೊಲೀಸ್ ಆಯುಕ್ತರು ದಯವಿಟ್ಟು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಮನವಿ.

–ನೊಂದ ನಾಗರಿಕರು, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದೇಶಾದ್ಯಂತ ಮೊಳಗುತ್ತಿದೆ ಜೈ ಶ್ರೀರಾಮ್...

ಇಡೀ ದೇಶ ಹೆಮ್ಮೆಯಿಂದ ಸ್ಮರಿಸುವಂತಹ ಹೆಸರು ಶ್ರೀರಾಮಚಂದ್ರ. ನಮ್ಮ ದೇಶದೆಲ್ಲೆಡೆ ಶ್ರೀರಾಮ ಹಾಗೂ ಶ್ರೀಕೃಷ್ಣರನ್ನು ಆರಾಧಿಸಲಾಗುತ್ತದೆ. ಇವರಿಬ್ಬರೂ ದೇವತಾ ಸ್ವರೂಪವಾದರೂ ನಡೆದುಕೊಂಡಿದ್ದು ಮಾತ್ರ ಸಾಮಾನ್ಯ ಜನರಂತೆ. ಅದರಲ್ಲೂ ಶ್ರೀರಾಮನ ಕಥೆ, ಇಡೀ ದೇಶದಾದ್ಯಂತ ಹೆಮ್ಮೆಯಿಂದ ಸ್ಮರಿಸಲಾಗುವಂತಹುದು. ಇತ್ತೀಚಿನ ವರ್ಷದಲ್ಲಿ ರಾಮನ ಹೆಸರು ಜನರ ಬಾಯಲ್ಲಿ ನಲಿದಾಡುತ್ತಿದೆ. ಶ್ರೀರಾಮನ ಜನ್ಮ ಸ್ಥಳ ಅಯೋಧ್ಯೆಯಲ್ಲಿ ಭವ್ಯವಾದ ರಾಮಮಂದಿರ ಉದ್ಘಾಟನೆಯಾದ ಈ ಶುಭ ಸಂದರ್ಭದಲ್ಲಿ ಭಾರತದಲ್ಲಿ ಮಾತ್ರವಲ್ಲ, ಎಲ್ಲೆಲ್ಲಿ ಹಿಂದುಗಳು ನೆಲೆಸಿರುವರೋ ಅಂತಹ ಎಲ್ಲ ದೇಶಗಳಲ್ಲೂ ಸಂಭ್ರಮ ಮನೆ ಮಾಡಿದೆ. ಎಲ್ಲೆಲ್ಲೂ ರಾಮನಾಮದ ಜಪ, ಆರಾಧನೆ ಕಾಣಿಸುತ್ತಿದೆ.

ಈ ದೇಶದ ಅಸ್ಮಿತೆ ಶ್ರೀರಾಮ. ರಾಮನ ಪ್ರತಿಯೊಂದು ನಡೆಯೂ ಅನುಕರಣೀಯ. ಎಲ್ಲೂ ಸಣ್ಣ ತಪ್ಪು ಗೋಚರಿಸದಂತಹ ವ್ಯಕ್ತಿತ್ವ ಶ್ರೀರಾಮನದು. ಆದರ್ಶ ಮಗನಾಗಿ, ಆದರ್ಶ ಸಹೋದರನಾಗಿ, ಆದರ್ಶ ಪತಿಯಾಗಿ, ಆದರ್ಶ ಸಂಪ್ರದಾಯಸ್ಥನಾಗಿ, ಆದರ್ಶ ರಾಜನಾಗಿ ಹೀಗೆ ಪ್ರತಿಯೊಂದು ಹಂತದಲ್ಲಿಯೂ ರಾಮ ಆದರ್ಶಪ್ರಾಯನಾಗಿಯೇ ವ್ಯಕ್ತನಾಗುತ್ತಾನೆ. ಹೀಗಾಗಿ ಅವನ ಪಾತ್ರ ಅನುಕರಣೀಯವಾದುದು. ಶ್ರೀರಾಮ ಜನಿಸಿದ್ದು ಅಯೋಧ್ಯೆಯಲ್ಲಿ. ರಾಮಾಯಣದ ಕಥೆ ಮಿಥ್ಯ ಕಥೆಯಲ್ಲ. ಅದು ಈ ಭೂಮಿಯಲ್ಲಿ ನಡೆದಿದೆ ಎಂದು ಈ ದೇಶದ ಜನರು ನಂಬಿದ್ದಾರೆ. ಜನರಿಗೆ ರಾಮನೇ ಆದರ್ಶ. ಇದಕ್ಕೆ ಕಾರಣ ಅವನು ಶ್ರೀಸಾಮಾನ್ಯನಂತೆ ನಡೆದುಕೊಂಡದ್ದು. ಸೀತೆಯನ್ನು ಕಳೆದುಕೊಂಡಾಗ ಒಬ್ಬ ಸಾಮಾನ್ಯ ಮನುಷ್ಯನಂತೆ ದುಃಖಿಸಿದ್ದು, ವಾನರ ಸೇನೆಯನ್ನು ಆತ್ಮೀಯವಾಗಿ ಕಂಡು ಅವರನ್ನೇ ತನ್ನ ವೀರ ಯೋಧರ ಪಡೆಯಾಗಿ ಕಂಡುಕೊಂಡದ್ದು, ಹೀಗೆ ಎಲ್ಲವೂ ಆದರ್ಶವೇ.

ನಮ್ಮ ದೇಶದ ಸಂಸ್ಕೃತಿಯಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಆದ್ಯತೆ ಇದೆ. ಹಿಂದಿನಿಂದಲೂ ದೇವಾಲಯಗಳು ಮನುಷ್ಯ ಹೇಗೆ ನಡೆದುಕೊಳ್ಳಬೇಕೆಂಬ ಶಿಕ್ಷಣ ನೀಡುತ್ತಾ ಬಂದಿದೆ. ಹಿಂದೆ ರಾಜಮಹಾರಾಜರು ಮಾಡಿರುವ ದೊಡ್ಡದಾದ ಹಾಗೂ ಹೇಳಿಕೊಳ್ಳಬಹುದಾದ ಕೆಲಸಗಳಲ್ಲಿ ದೇವಾಲಯಗಳ ನಿರ್ಮಾಣವು ಮುಖ್ಯವಾದುದು. ಏಕೆಂದರೆ ಜನರು ದೇವಾಲಯಗಳಿಂದ ವಿವಿಧ ರೀತಿಯಲ್ಲಿ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದರು. ಊರಿನ ಜನರು ಒಟ್ಟಾಗಿ ಸೇರುವ ಜಾಗ ದೇವಸ್ಥಾನವಾದರೆ, ಜನರು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದುದೂ ದೇವಸ್ಥಾನಗಳಲ್ಲಿ. ಅಲ್ಲಿಯೇ ಪುರಾಣ, ಪುಣ್ಯ ಕಥೆಗಳ ವಾಚನ ನಡೆಯುತ್ತಿತ್ತು, ಅಲ್ಲಿಯೇ ಹರಿಕಥೆ. ನಾಟ್ಯ ಕಾರ್ಯಕ್ರಮಗಳೂ ನಡೆಯುತ್ತಿತ್ತು. ಅನೇಕ ಸಂದರ್ಭದಲ್ಲಿ ವ್ಯಾಜ್ಯಗಳ ವಿಚಾರಣೆ ನಡೆಯುತ್ತಿದ್ದುದೂ ಇದೇ ದೇವಾಲಯಗಳಲ್ಲಿ. ಜನರು ಭಯಭಕ್ತಿಗಳಿಂದ ನಡೆದುಕೊಳ್ಳಬೇಕೆಂಬ ಕಾರಣದಿಂದ ದೇವಾಲಯಗಳು ಭವ್ಯವಾಗಿ ಹಾಗೂ ವಿಸ್ತಾರವಾದ ಜಾಗಗಳಲ್ಲಿ ಕಟ್ಟಲಾಗುತ್ತಿತ್ತು. ಊರಿನಲ್ಲಿ ದೇವಾಲಯವಿರುವುದರಿಂದ ಜನರು ತಪ್ಪು ಮಾತಾಡದಂತೆ ಹಾಗೂ ತಪ್ಪು ಮಾಡದಂತೆ ಎಚ್ಚರಿಕೆ ವಹಿಸುತ್ತಿದ್ದರು. ಜನರು ದೇವಾಲಯಗಳಿಗೆ ಹೋಗಿ ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದುದೇ ಅಲ್ಲದೆ, ತಮ್ಮಲ್ಲಿನ ಅನೇಕ ವಸ್ತುಗಳನ್ನು ಕಾಣಿಕೆಯಾಗಿ ದೇವಾಲಯಗಳಿಗೆ ನೀಡುತ್ತಿದ್ದರು. ಅಲ್ಲಿ ಭಜನೆಗಳು, ವಿವಿಧ ಪೂಜಾ ವಿಧಿವಿಧಾನಗಳು ಹಾಗೂ ಅನ್ನಸಂತರ್ಪಣೆಯೂ ನಡೆಯುತ್ತಿತ್ತು. ದೇವಾಲಯಗಳು ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದವು. ಊರಿನಲ್ಲಿ ದೊಡ್ಡ ದೇವಾಲಯವಿಲ್ಲದಿದ್ದರೂ ಸಣ್ಣದಾದ ರಾಮಮಂದಿರವಂತೂ ಇದ್ದೇ ಇರುತ್ತಿತ್ತು. ಇಲ್ಲಿ ರಾಮನ ವಿಗ್ರಹ ಬೇಕೆಂದೇನೂ ಇರಲಿಲ್ಲ. ರಾಮನ ಭಾವಚಿತ್ರವೇ ಸಾಕಾಗುತ್ತಿತ್ತು. ಅಲ್ಲಿಯೇ ಸಂಜೆಯ



ವೇಳೆ ಭಜನೆಗಾಗಿ ಊರವರು ಸೇರುತ್ತಿದ್ದುದೂ ಇದೆ. ಹೀಗೆ ಈ ಸಮಾಜದಲ್ಲಿ ದೇವಾಲಯಗಳಿಗೆ ವಿಶೇಷವಾದ ಸ್ಥಾನಮಾನಗಳಿವೆ.

ಶ್ರೀರಾಮ ಈ ರೀತಿಯಲ್ಲಿ ಜನಮನ್ನಣೆ ಗಳಿಸಿದ್ದ. ಇಂತಹ ಶ್ರೀರಾಮನ ಗುಣ ವಿಶೇಷಗಳನ್ನು ಅಲ್ಲಿ ರಾಮಾಯಣದ ಕಥೆಗಳನ್ನು ಹೇಳುವ, ಕೇಳುವ ಮೂಲಕ ನಡೆಸಲಾಗುತಿತ್ತು. ರಾಮ ಜನರ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡಿದ್ದಾನೆ.

ರಾಮಾಯಣ ಕಥೆಯ ಪ್ರತಿಯೊಂದು ಭಾಗವನ್ನೂ ಜನರು ಇಷ್ಟಪಡುತ್ತಾರೆ. ರಾಮನು ಕಾಡಿಗೆ ಹೋಗುವ ಸಂದರ್ಭದ ಕಥೆ ಹೇಳುವಾಗ, ಕೇಳುವಾಗ ಅವರು ಗದ್ಗದಿತರಾಗುತ್ತಾರೆ. ಸೀತಾ ಅಪಹರಣದ ಪ್ರಕರಣ ಕೇಳಿ ಕಣ್ಣೀರುಗರೆಯುತ್ತಾರೆ, ರಾವಣನಿಗೆ ಹಿಡಿಶಾಪ ಹಾಕುತ್ತಾರೆ. ಅವರಿಗೆ ರಾಮ, ಲಕ್ಷ್ಮಣ, ಸೀತೆ ಹಾಗೂ ಆಂಜನೇಯ ಪೂಜಾರ್ಹರು. ಇದಕ್ಕೆ ಕಾರಣವೂ ಇಲ್ಲದಿಲ್ಲ. ಸತ್ಯವನ್ನೇ ಜೀವನವಾಗಿರಿಸಿಕೊಂಡು ಕಷ್ಟಪಟ್ಟ ಪಾತ್ರಗಳು ಅವು.

ಶ್ರೀರಾಮನ ಪಾತ್ರ ಜನಮನ್ನಣೆ ಗಳಿಸಲು ಮತ್ತೊಂದು ಕಾರಣ ರಾಮ ತುಮ್ಮಂತೆಯೇ ಕಷ್ಟನಷ್ಟಗಳನ್ನು ಅನುಭವಿಸಿದ ಎಂಬುದು. ಆದರೆ ರಾಮನ ಬಾಯಲ್ಲಿ ಎಂದೂ ಅಸತ್ಯ ಹೊರಬಾರದಿರುವುದು, ಅವನು ಎಂದೂ ಧರ್ಮದಿಂದ ವಿಮುಖನಾಗದಿರುವುದೂ ಇದಕ್ಕೆ ಕಾರಣ. ಅದರಲ್ಲೂ ಜನರಿಗೆ ಮಾರ್ಗದರ್ಶನ ಮಾಡುವ ಪ್ರತಿಯೊಂದೂ ಅಂಶವೂ ರಾಮಕಥೆಯಲ್ಲಿ ಕಂಡುಬರುತ್ತದೆ. ಕೊನೆಗೆ ಲಂಕೆಯಲ್ಲಿ ರಾವಣನ ಸಂಹಾರವಾದ ಕಥೆ ಕೇಳಿ ಜನರು ಸಮಾಧಾನ ಪಟ್ಟುಕೊಳ್ಳುತ್ತಾರೆ. ಲಂಕೆಯನ್ನು ಜಯಿಸಿದ ನಂತರ ರಾಮಲಕ್ಷ್ಮಣರ ನಡುವೆ ನಡೆಯುವ ಸಂವಾದ ಇಡೀ ರಾಮಾಯಣದ ಶೋಭೆಯನ್ನು ಹೆಚ್ಚಿಸಿದೆ. ಲಂಕೆ ಅತ್ಯಂತ ವೈಭವದ ನಾಡಾಗಿತ್ತು. ರಾವಣನ ಸಂಹಾರದ ನಂತರ ಅದು ರಾಮನ ಸ್ವತ್ತಾಯಿತು. ಅದನ್ನು ಸ್ವರ್ಣಮಯೀ ಲಂಕಾ ಎಂದೇ ಸಂಭೋದಿಸಲಾಗುತ್ತಿತ್ತು. ರಾವಣನೂ ಶ್ರೇಷ್ಠ ಆಡಳಿತಗಾರ ಹಾಗೂ ದೈವಭಕ್ತನೇ. ಆದರೆ ಪರಸ್ತ್ರೀ ವ್ಯಾಮೋಹ ಅವನ ಎಲ್ಲ ದೊಡ್ಡ ಗುಣಗಳನ್ನು ಮರೆಸಿತು. ಆ ಕಾರಣಕ್ಕಾಗಿಯೇ ಅವನ ಸಂಹಾರವೂ ಆಯಿತು. ರಾವಣ ಸಂಹಾರದ ನಂತರ ಅದು ಶ್ರೀರಾಮನ ಸ್ವತ್ತಾಯಿತು. ರಾವಣ ಸಂಹಾರದ ನಂತರ ಲಕ್ಷ್ಮಣ ಲಂಕೆಯ ವೈಭವ ಕಂಡು ರಾಮನಿಗೆ ನಾವು ಏಕೆ ಈ ವೈಭವದ ಲಂಕೆಯಲ್ಲೇ ಇದ್ದು ಬಿಡಬಾರದು ಎಂದು ಕೇಳುತ್ತಾನೆ. ಅದಕ್ಕೆ ಶ್ರೀರಾಮಚಂದ್ರ ಹೇಳುವ ಮಾತು ಚರಿತ್ರಾರ್ಹವಾದುದು. ಅವನು ಹೇಳುತ್ತಾನೆ "ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೆ। ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ॥". 'ಲಂಕೆಯು ಸ್ವರ್ಣಭರಿತವಾಗಿದ್ದರೂ ಜನನಿ ಹಾಗೂ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದುದು' ಎಂದು ಹೇಳಿ ಮತ್ತೆ ಅಯೋಧ್ಯೆಗೆ ತೆರಳುತ್ತಾನೆ. ಈ ಮಾತು ಇಂದಿಗೂ ನಮಗೆ ಆದರ್ಶವೇ. ಜನನಿ ಎಂದರೆ ತಾಯಿ ಹಾಗೂ ಜನ್ಮಭೂಮಿ ಅಂದರೆ ನಮ್ಮ ದೇಶ ನಮಗೆ ಸ್ವರ್ಗಕ್ಕಿಂತಲೂ ಮಿಗಿಲಾದುದು

> "ರಾಮಾಯಣದ ಒಂದು ಪ್ರಸಂಗ. ವಾನರ ಸೇನೆ ಸಾಗರ ದಾಟಿ ಲಂಕೆಗೆ ಹೋಗಲು ಬಂಡೆಗಳ ಮೇಲೆ ಶ್ರೀರಾಮ ಎಂದು ಬರೆದು ಸಮುದ್ರಕ್ಕೆ ಹಾಕುತ್ತಿದ್ದಾಗ ಅವು ತೇಲುತ್ತಿತ್ತು. ಇದರ ಮೇಲೆ ನಡೆದು ಸೈನ್ಯ ಲಂಕೆಗೆ ಸೇರಿತು. ಆ ಸಮಯದ ಎರಡು ಕಥೆಗಳನ್ನು ನಾವು ಕೇಳುತ್ತೇವೆ. ಕಪಿಗಳು ಬಂಡೆಗಳ ಮೇಲೆ ಶ್ರೀರಾಮ ಎಂದು ಬರೆದು ಹಾಕಿದಾಗ ಅವು ತೇಲುತ್ತಿದ್ದುದನ್ನು ಕಂಡ ರಾಮನೂ ಒಂದು ಬಂಡೆಯನ್ನು ಸಮುದ್ರಕ್ಕೆ ಹಾಕಿದಾಗ ಅದು ತೇಲದೇ ಮುಳುಗುತ್ತದೆ. ಇದಕ್ಕೆ ರಾಮನು ಕಾರಣ ಕೇಳಿದಾಗ ರಾಮನ ಹೆಸರು ಹೇಳಿ ಬಂಡೆ ನೀರಿಗೆ ಹಾಕಿದಾಗ ಅದು ತೇಲುತ್ತದೆ. ರಾಮನೇ ಬಂಡೆಯನ್ನು ನೀರಿಗೆ ಹಾಕಿದಾಗ, ಅದು ಮುಳುಗುತ್ತದೆ ಎಂದು ಹೇಳಲಾಗುತ್ತದೆ.

ಎಂಬ ಮಾತೂ ಆದರ್ಶದ ಪರಮಾವಧಿಯೇ. ನಾವು ನಮ್ಮ ದೇಶವನ್ನು ಸ್ವರ್ಗಕ್ಕಿಂತಲೂ ಹೆಚ್ಚಾಗಿ ಪ್ರೀತಿಸಬೇಕು ಎಂಬ ಮಾತು ನಮ್ಮ ದೇಶದ ಜನರಿಗೆ ಅದರಲ್ಲೂ ಕೆಲಸದ, ಸಂಪಾದನೆಯ ಸಲುವಾಗಿ ವಿದೇಶಗಳಿಗೆ ಹೋಗುವವರು ಮನದಟ್ಟು ಮಾಡಿಕೊಳ್ಳಬೇಕು.

ರಾಮಾಯಣದಲ್ಲಿ ರಾಮನಿಗೆ ತಕ್ಕ ತಮ್ಮ ಲಕ್ಷ್ಮಣ ಹಾಗೂ ಸೀತೆ ತಕ್ಕವಳಾದ ಹೆಂಡತಿ. ರಾಮನು ಪಟ್ಟಾಭಿಷೇಕ ಹೊಂದಿ ರಾಜನಾಗಬೇಕಾದ ಸಮಯದಲ್ಲಿ ತಂದೆಯ ಮಾತಿಗೆ ಕಟ್ಟುಬಿದ್ದು, ಮತ್ತೊಂದು ಆಲೋಚನೆ ಮಾಡದೆ ವನವಾಸಕ್ಕೆ ಸಿದ್ಧನಾಗಿ ಬಿಡುತ್ತಾನೆ. ಸಾಧ್ವಿ ಸೀತೆಯೂ ರಾಮನೊಟ್ಟಿಗೆ ವನವಾಸಕ್ಕೆ ತೆರಳಲು ತಾನು ಸಿದ್ಧಳಾಗುತ್ತಾಳೆ. ಪಿತೃವಾಕ್ಯ ಪಾಲಿಸಬೇಕಾದುದು ರಾಮನ ಕರ್ತವ್ಯವಾದರೆ, ಪತಿಯೊಡನೆ ಕಷ್ಟಸುಖಗಳಲ್ಲಿ ತಾನು ಪಾಲ್ಗೊಳ್ಳಬೇಕೆಂಬುದು ಸೀತೆಯ ಆಶಯ. ಇದು ಇಂದಿಗೂ ನಮ್ಮ ಸಂಸ್ಕೃತಿಯ ಹೆಗ್ಗುರುತಾಗಿ ಗುರುತಿಸಲಾಗುತ್ತದೆ. ಹಾಗೆಯೇ ಅಣ್ಣನ ಸುಖವೇ ತನ್ನ ಸುಖ, ಅಣ್ಣನ ಕಷ್ಟ ತನ್ನ ಕಷ್ಟ ಎಂಬಂತೆ ಲಕ್ಷ್ಮಣನೂ ಹೊರಟು ನಿಲ್ಲುತ್ತಾನೆ.

ಇವರು ವನವಾಸಕ್ಕೆ ಹೊರಟ ನಂತರ ಒಮ್ಮೆ ರಾಮನು ಸೀತೆಯನ್ನು ಕುರಿತು "ಸೀತೆ, ನಿನಗೆ ಎಂತಹ ಕಷ್ಟ ಬಂದಿತು! ರಾಜಕುಮಾರಿಯಾಗಿ ಹುಟ್ಟಿ, ಸುಕುಮಾರಿಯಾಗಿ ಬೆಳೆದು ರಾಜಕುಮಾರನೆಂದು ನನ್ನ ಕೈಹಿಡಿದೆ. ಆದರೆ ಈಗ ನೋಡಿದರೆ ನೀನು ಕಾಡಿನಲ್ಲಿ ಅಲೆದಾಡಬೇಕಾಗಿದೆ. ಹಂಸತೂಲಿಕಾತಲ್ಪದಲ್ಲಿ ಮಲಗುತ್ತಿದ್ದವಳು, ಮರದಡಿಯಲ್ಲಿ ಮಲಗಬೇಕಾಗಿದೆ. ಮೃಷ್ಟಾನ್ನ ಭೋಜನಗಳನ್ನು ಸೇವಿಸುತ್ತಿದ್ದವಳು ಕಂದಮೂಲಗಳನ್ನು ತಿನ್ನಬೇಕಾಗಿದೆ. ಮೃದುವಾದ ನಿನ್ನ ಪಾದಗಳು ಮುಳ್ಳಿನಿಂದ ಚುಚ್ಚಲ್ಪಟ್ಟು ತೂತುತೂತಾಗಿ ಹೋಗಿದೆಯಲ್ಲ" ಎನ್ನುತ್ತಾನೆ.

ಅದಕ್ಕೆ ಸೀತೆ ಕೊಡುವ ಉತ್ತರವು ಮಾರ್ಮಿಕವಾಗಿದೆ. "ಶ್ರೀರಾಮಚಂದ್ರ ನಿನ್ನ ಮಾತುಗಳನ್ನು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ. ನಮ್ಮ ರಾಜ್ಯಗಳು, ಅಧಿಕಾರಗಳು ಎಷ್ಟರಮಟ್ಟಿಗೆ ಶಾಶ್ವತ? ಇಂದು ರಾಜರಾದವರು ನಾಳೆ ಭಿಕ್ಷುಕರಾಗಬಹುದು. ಯಾವುದು ತಾನೇ ನಮ್ಮ ಕೈಯ್ಯಲ್ಲಿದೆ? ನೀನು ನನಗಾಗಿ ದುಃಖಿಸಬೇಡ. ಪತಿಯಿದ್ದ ಸ್ಥಳವೇ ಪತ್ನಿಗೆ ಅರಮನೆ. ನಾನು ಇಲ್ಲಿ ಸಂತೋಷವಾಗಿದ್ದೇನೆ. ನೀನು ಚಿಂತಿಸಬೇಡ. ಮನುಷ್ಯನಿಗೆ ಸುಖವಾಗಲೀ, ಕಷ್ಟವಾಗಲೀ ಸ್ಥಿರವಾಗಿರುವುದಿಲ್ಲ" ಎಂದು. ಇದನ್ನು ಇಂದಿನ ಆಡಳಿತಗಾರರು ಯಾವಾಗಲೂ ಸ್ಮರಿಸಬೇಕಾಗುತ್ತದೆ.

ರಾಮನ ಜನ್ಮ ದುಷ್ಟಸಂಹಾರ ಹಾಗೂ ಶಿಷ್ಟರ ಪರಿಪಾಲನೆಗಾಗಿಯೇ ಆದದ್ದು ಎಂದು ನಾವು ನಂಬುತ್ತೇವೆ. ಹಾಗಾಗಿ ಅದರ ಪಾಲನೆಗೆ ರಾಮನು ವನವಾಸವನ್ನು ಚೆನ್ನಾಗಿ ಬಳಸಿಕೊಂಡಿದ್ದು ಕಂಡುಬರುತ್ತದೆ. ಋಷಿಮುನಿಗಳು ಅರಣ್ಯ ಪ್ರದೇಶಗಳಲ್ಲಿ ನಾಡಿನ ಕಲ್ಯಾಣಕ್ಕಾಗಿ ಹೋಮ ಹವನಾದಿಗಳನ್ನು ಮಾಡುತ್ತಿದ್ದಾಗ, ಅದನ್ನು ಕೆಡಿಸಲು ಬರುವ ರಾಕ್ಷಸೀ ಮನೋಭಾವದವರನ್ನು ಸಂಹಾರ ಮಾಡಿದ್ದೂ ಇದರ ಉದಾಹರಣೆ. ತಮ್ಮನ ಮಡದಿಯನ್ನೇ ಅಪಹರಿಸಿದ್ದ ವಾಲಿಯ ಸಂಹಾರ ಮತ್ತೊಂದು ಉದಾಹರಣೆ. ಕೊನೆಗೆ ರಾವಣನ ಸಂಹಾರ. ಹೀಗೆ ತಾನು ಜನ್ಮ ತಳೆದ ಕಾರಣವನ್ನು ಅವನು ಪೂರ್ಣಗೊಳಿಸಿ ಆದರ್ಶ ಎಂದರೆ ಇದು ಎಂಬಂತೆ ನಡೆದುಕೊಳ್ಳುತ್ತಾನೆ.

ಇಂತಹ ರಾಮಾಯಣ ಈ ದೇಶದ ಸ್ವತ್ತು. ಹಿಂದಿನ ಅಖಂಡ ಭಾರತ ಇಂದಿನ ಪ್ರಪಂಚದ ಅರ್ಧ ಭಾಗದವರೆಗೂ ಹರಡಿತ್ತು. ಅದರ ದ್ಯೋತಕವಾಗಿ ಇಂದಿಗೂ ಅನೇಕ ದೇಶಗಳಲ್ಲಿ ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ದೇವಾಲಯಗಳು, ಕುರುಹುಗಳು ಸಿಗುತ್ತವೆ. ಇಂದಿಗೂ ಅಲ್ಲಲ್ಲಿ ಉತ್ಖನನಗಳಾದಾಗ ಇದಕ್ಕೆ ಪೂರಕವಾದ ವಸ್ತುವಿಶೇಷಗಳು ಕಂಡುಬರುತ್ತದೆ. ರಾಮಾಯಣ ಕಟ್ಟುಕಥೆಯಲ್ಲ ಎಂಬುದನ್ನು ಅವು ಸಾಬೀತುಪಡಿಸುತ್ತವೆ.

ರಾಮಾಯಣದ ಒಂದು ಪ್ರಸಂಗ. ವಾನರ ಸೇನೆ ಸಾಗರ ದಾಟಿ ಲಂಕೆಗೆ ಹೋಗಲು ಬಂಡೆಗಳ ಮೇಲೆ ಶ್ರೀರಾಮ ಎಂದು ಬರೆದು ಸಮುದ್ರಕ್ಕೆ ಹಾಕುತ್ತಿದ್ದಾಗ ಅವು ತೇಲುತ್ತಿತ್ತು. ಇದರ ಮೇಲೆ ನಡೆದು ಸೈನ್ಯ ಲಂಕೆಗೆ ಸೇರಿತು. ಆ ಸಮಯದ ಎರಡು ಕಥೆಗಳನ್ನು ನಾವು ಕೇಳುತ್ತೇವೆ. ಕಪಿಗಳು ಬಂಡೆಗಳ ಮೇಲೆ ಶ್ರೀರಾಮ ಎಂದು ಬರೆದು ಹಾಕಿದಾಗ ಅವು ತೇಲುತ್ತಿದ್ದುದನ್ನು ಕಂಡ ರಾಮನೂ ಒಂದು ಬಂಡೆಯನ್ನು ಸಮುದ್ರಕ್ಕೆ ಹಾಕಿದಾಗ ಅದು ತೇಲದೇ ಮುಳುಗುತ್ತದೆ. ಇದಕ್ಕೆ ರಾಮನು ಕಾರಣ ಕೇಳಿದಾಗ ರಾಮನ ಹೆಸರು ಹೇಳಿ ಬಂಡೆ ನೀರಿಗೆ ಹಾಕಿದಾಗ ಅದು ತೇಲುತ್ತದೆ. ರಾಮನೇ ಬಂಡೆಯನ್ನು ನೀರಿಗೆ ಹಾಕಿದಾಗ, ಅದು ಮುಳುಗುತ್ತದೆ ಎಂದು ಹೇಳಲಾಗುತ್ತದೆ. ಹಾಗೆಯೇ ರಾವಣನಿಗೆ ಸಮುದ್ರದಲ್ಲಿ ಬಂಡೆಗಳ ಸಹಾಯದಿಂದ ಸೇತುವೆ ಕಟ್ಟುತ್ತಿರುವುದು ಹಾಗೂ ಬಂಡೆಗಳ ಮೇಲೆ ರಾಮನ ಹೆಸರು ಬರೆದಾಗ ಅವು ತೇಲುತ್ತಿವೆ ಎಂಬ ಸುದ್ದಿ ಗೊತ್ತಾದಾಗ, ರಾಮನಿಗಿಂತ ನಾನೇನೂ ಕಡಿಮೆಯಿಲ್ಲ. ನನ್ನ ಹೆಸರನ್ನೂ ಬರೆದು ಬಂಡೆಯನ್ನು ನೀರಿಗೆ ಹಾಕುತ್ತೇನೆ ಎಂದು ಒಂದು ಬಂಡೆಯ ಮೇಲೆ ರಾವಣ ಎಂದು ಬರೆದು ನೀರಿಗೆ ಹಾಕಿದ, ಅದೂ ತೇಲಿತು. ಇದನ್ನು ಕೇಳಿದ ಅವನ ಮಡದಿ ಅದು ಹೇಗೆ ಸಾಧ್ಯವಾಯಿತು? ಎಂದಾಗ ರಾವಣ ಗುಟ್ಟು ಹೇಳುತ್ತಾನೆ. ನಾನು ಸಮುದ್ರಕ್ಕೆ ಬಂಡೆ ಹಾಕಿದಾಗ ಇದು ತೇಲದಿದ್ದರೆ ಶ್ರೀರಾಮನ ಆಣೆ ಎಂದು ಹೇಳಿದೆ. ಅದಕ್ಕೆ ಅದು ತೇಲಿತು ಎಂದು. ಶ್ರೀರಾಮ ಹಾಗೂ ರಾಮನ ನಾಮ ಇಂತಹ ಶಕ್ತಿಯನ್ನು ಹೊಂದಿತ್ತು ಎಂದು ಹೇಳಲು ಈ ಘಟನೆಯನ್ನು ಉಲ್ಲೇಖಿಸಲಾಗುತ್ತದೆ.

ಇಂತಹ ರಾಮಚಂದ್ರನು ಹುಟ್ಟಿದ ಅಯೋಧ್ಯೆಯನ್ನು ರಾಮಜನ್ಮಭೂಮಿ ಎಂದು ಕರೆಯಲಾಗುತ್ತದೆ. ಇಂತಹ ಸ್ಥಳದಲ್ಲಿ ರಾಮನ ಭವ್ಯ ದೇವಾಲಯ ಇರಬೇಕೆಂಬುದು ಇಡೀ ದೇಶದ ಜನರ ಆಶಯವಾಗಿತ್ತು. ಸುಮಾರು 550 ವರ್ಷಗಳ ಕಾಲ ಇದಕ್ಕಾಗಿ ದೊಡ್ಡ ಹೋರಾಟವೇ ನಡೆದಿತ್ತು. ಲಕ್ಷಾಂತರ ಜನರ ಬಲಿದಾನವೂ ಆಗಿದೆ. ಇದೀಗ ವಿವಾದ ಬಗೆಹರಿದು ಅಲ್ಲಿ ಜನರು ನೀಡಿದ ಕಾಣಿಕೆಯಿಂದ ಭವ್ಯವಾದ ಶ್ರೀರಾಮಮಂದಿರ ನಿರ್ಮಾಣವಾಗಿದೆ. ಇಡೀ ಹಿಂದೂ ಸಮಾಜಕ್ಕೆ ಆನಂದ ತಂದಿದೆ. ಮುಖ್ಯವಾಗಿ ಅಲ್ಲಿನ ಮುಸ್ಲಿಮರೂ ಸೇರಿದಂತೆ ಅಯೋಧ್ಯಾವಾಸಿಗಳಿಗೆ, ಎಲ್ಲರಿಗೂ ಹರ್ಷ ತಂದಿದೆ ಎಂಬುದು ಒಂದು ಐತಿಹಾಸಿಕ ವಿಚಾರವೇ ಆಗಿದೆ.

ಶ್ರೀ ರಾಮ ಸ್ಮರಣೆಯೊಂದಿಗೆ 77ನೇ ದಿನ ಪೂರೈಸಿದ ಕಾವೇರಿ ಹೋರಾಟ

ಮೈಸೂರು, ಜ.22(ಎಂಕೆ)– ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಟೌನ್‌ಹಾಲ್ ಎದುರು ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಪ್ರತಿಭಟನಾ ಧರಣಿ 77ನೇ ದಿನ ಪೂರೈಸಿದ್ದು, ಸೋಮವಾರ ಅಯೋಧ್ಯೆ 'ಬಾಲರಾಮ' ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪೂಜೆ ಸಲ್ಲಿಸಿ, ಸಿಹಿ ಹಂಚುವ ಮೂಲಕ ರಾಜ್ಯ ಸರ್ಕಾರದ ನಡೆ ಖಂಡಿಸಲಾಯಿತು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ) ಮಾತನಾಡಿದರು. ಮುಖಂಡರಾದ ಎಂ.ಜೆ.ಸುರೇಶ್‌ಗೌಡ, ತೇಜಸ್, ಲೋಕೇಶ್ ಗೌಡ, ಸಿ.ಎಚ್.ಕೃಷ್ಣಯ್ಯ, ರವೀಶ್, ಆರ್.ಶ್ರೀನಿವಾಸ್, ವಿ.ಮಹದೇವ್, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ಕೆ.ಮಂಜುಳಾ, ಸವಿತಾ, ಲಕ್ಷ್ಮಮ್ಮ, ಸರ್ವಮಂಗಳ, ಸುಧಾ, ಮಂಜುಳಾ, ಮೂಗೂರು ನಂಜುಂಡಸ್ವಾಮಿ, ಚಂದನ್ ಜೈನ್ ಮತ್ತಿತರರಿದ್ದರು.



ಬಾಲರಾಮ ದೇಶದ ಸಾಂಸ್ಕೃತಿಕ ಕ್ಷೇತ್ರದ ಪ್ರತೀಕ: ಸುತ್ತೂರು ಶ್ರೀಗಳು


ಮೈಸೂರು, ಜ.22(ಎಸ್‌ಪಿಎನ್)– ಅಯೋಧ್ಯೆಯಲ್ಲಿ ವಿರಾಜಮಾನರಾಗಿರುವ ಬಾಲರಾಮ ದೇಶದ ಸಾಂಸ್ಕೃತಿಕ ಕ್ಷೇತ್ರದ ಪ್ರತೀಕ. ಎಲ್ಲರೂ ಪೂಜಿಸುವ, ಎಲ್ಲರೂ ಒಪ್ಪುವ ವ್ಯಕ್ತಿತ್ವ ಶ್ರೀರಾಮನದ್ದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅಯೋಧ್ಯೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶ್ರೀರಾಮ ಮಂದಿರ 5 ಶತಮಾನ ಕಳೆದ ನಂತರದ ಪ್ರಯತ್ನ ಅಯೋಧ್ಯೆಯಲ್ಲಿ ನಿರ್ಮಾಣವಾಗಿ ಉದ್ಘಾಟನೆಯಾಗುತ್ತಿದೆ. ಬೇರೆಬೇರೆ ಕಾರಣಗಳಿಗಾಗಿ ತಡವಾದರೂ ಪ್ರಭು ಶ್ರೀರಾಮನ ಭವ್ಯ ಮಂದಿರ ನಿರ್ಮಾಣವಾಗಿದೆ.

ಶ್ರೀರಾಮಮಂದಿರಗಳು ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಇವೆ. ಇಲ್ಲಿ ನಿತ್ಯ ಭಜನೆ, ಗಾಯನ ಹಾಗೂ ಆ ಊರಿನ ವ್ಯಾಜ್ಯಗಳ ನ್ಯಾಯ–ಪಂಚಾಯ್ತಿ ಕೂಡ ಈ ಹಿಂದಿನಿಂದಲೂ ನಡೆಯುತ್ತಿವೆ. ಏಕೆಂದರೆ, ಶ್ರೀರಾಮ ಮಂದಿರದಲ್ಲಿ ರಾಜೀ–ಪಂಚಾಯ್ತಿ ನಡೆದರೆ, ನ್ಯಾಯ ದೊರಕುತ್ತದೆ ಎಂಬ ಭಾವನೆ ಜನರ ಮನಸ್ಸಿನಲ್ಲಿದೆ ಎಂದು ಹೇಳಿದರು.

ಶ್ರೀರಾಮಚಂದ್ರ ಬೇರೆಬೇರೆ ಕಾರಣಗಳಿಗಾಗಿ 14 ವರ್ಷ ವನವಾಸ. ನಂತರ ಜನಸಾಮಾನ್ಯರ ನಡುವೆ ಇದ್ದು, ಎಲ್ಲರೂ ಒಪ್ಪುವಂತಹ ಆಡಳಿತ ನೀಡಿದ್ದು, ಏಕಪತ್ನಿ ವ್ರತಸ್ಥ ಹಾಗೂ ಜನರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದು, ಅಣ್ಣ–ತಮ್ಮಂದಿರ ನಡುವೆ ಇದ್ದ ಭಾವೈಕ್ಯತೆ, ಸಾಮರಸ್ಯ ಬದುಕಿಗೆ ಶ್ರೀರಾಮ ಇಂದಿನ ಪೀಳಿಗೆ ಮಾತ್ರವಲ್ಲ, ಮುಂದಿನ ಪೀಳಿಗೆಗೂ ಇಷ್ಟವಾಗುವ ವ್ಯಕ್ತಿತ್ವ ಹೊಂದಿರುವುದರಿಂದ ಎಲ್ಲರೂ ಇಷ್ಟಪಟ್ಟು ಪೂಜಿಸುವ ಏಕೈಕ ದೇವರು ಶ್ರೀರಾಮ ಎಂದರು.

ಜನಸಂದಣಿಯಿಂದಾಗಿ ಪೂರ್ಣ ಪ್ರಮಾಣದಲ್ಲಿ ಮಂದಿರವನ್ನು ನೋಡಲು ಸಾಧ್ಯವಾಗಿಲ್ಲ. ಅದರೂ ಮಂದಿರವನ್ನು ದೂರದಿಂದ ವೀಕ್ಷಣೆ ಮಾಡಲಾಗಿದ್ದು, ಸುಂದರವಾಗಿ ಮೂಡಿಬರುತ್ತಿದೆ ಎಂದ ಶ್ರೀಗಳು, ಇಂದು ಲೋಕಾರ್ಪಣೆಗೊಂಡಿರುವ ಬಾಲರಾಮ ಮೂರ್ತಿ ಕೆತ್ತನೆ ಮಾಡಿದ ಶಿಲ್ಪಿ ಅರುಣ್ ಯೋಗಿರಾಜ್ ನಮ್ಮ ಸಂಸ್ಥೆಯ ಬಾಲಜಗತ್ತು ಶಾಲೆಯಲ್ಲಿ ಎಲ್‌ಕೆಜಿಯಿಂದ 10ನೇ ತರಗತಿಯವರೆಗೂ ಓದಿದ್ದಾರೆ ಎಂಬುದೇ ಸಂತೋಷದ ಸಂಗತಿ ಹಾಗೂ ವೈಯಕ್ತಿಕವಾಗಿಯೂ ಸಂತೋಷ ತರಿಸಿದೆ. ಇವರು ವಾಸಿಸುವ ಮನೆ ಜೆಎಸ್‌ಎಸ್ ವಿದ್ಯಾಪೀಠದಿಂದ ಅನತಿ ದೂರದಲ್ಲಿದೆ ಎಂದರು.



ಅಯೋಧ್ಯೆಯಲ್ಲಿ ಸುತ್ತೂರು ಶ್ರೀಗಳೊಂದಿಗೆ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಬಾಬಾ ರಾಮ್‌ದೇವ್.

ಯುವಕನ ಹತ್ಯೆ ಆರೋಪಿಗಳ ಬಂಧನ

ಅಕ್ರಮ ಸಂಬಂಧಕ್ಕೆ ಒತ್ತಾಯದ ಹಿನ್ನೆಲೆಯಲ್ಲಿ ನಡೆದ ಕೊಲೆ

ಮೈಸೂರು, ಜ.22(ಎಂಕೆ)– ತಾಲೂಕಿನ ಬಸಳ್ಳಿಹುಂಡಿ ಯುವಕ ರಮೇಶ್(22) ಹತ್ಯೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಮೈಸೂರು ದಕ್ಷಿಣ ಪೊಲೀಸರು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜ.17 ರಂದು ನಾಪತ್ತೆಯಾಗಿದ್ದ ರಮೇಶ್ ಮೃತದೇಹ ಜ.21 ರಂದು ಕೂಡನಹಳ್ಳಿ–ಕಡಕೊಳ ನಡುವೆ ಹರಿಯುವ ಎಣ್ಣೆಹೊಳೆ ಕಟ್ಟೆಯಲ್ಲಿ ಪತ್ತೆಯಾಗಿತ್ತು. ಈ ಸಂಬಂಧ ರಮೇಶ್ ತಂದೆ ವೀರಭದ್ರಪ್ಪ ನೀಡಿದ ದೂರು ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಮೈಸೂರು ದಕ್ಷಿಣ ಪೊಲೀಸರು, ಸೋಮವಾರ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಕೊಲೆಯಾದ ರಮೇಶ್, ವಿವಾಹಿತ ಮಹಿಳೆಯೊಂದಿಗೆ ಅಕ್ರಮ ಸಂಬಂಧಕ್ಕೆ ಒತ್ತಾಯಿಸುತ್ತಿದ್ದರಿಂದ ಕೊಲೆ ಮಾಡಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೈಸೂರು ದಕ್ಷಿಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಡಾ.ಎಂ.ಎಲ್.ಶೇಖರ್, ಪಿಎಸ್‌ಐಗಳಾದ ಬಸಪ್ಪ ಕೊರವಿ, ಸುರೇಂದ್ರ, ಶಾಂತಲಿಂಗಯ್ಯ, ಸಿಬ್ಬಂದಿಗಳಾದ ಮೋಹನ್, ಪ್ರಸನ್ನ ಕುಮಾರ್, ಸಿ.ಕೆ.ಮಹೇಶ, ನಾರಾಯಣ್, ಮಹದೇವಪ್ಪ ಜಾಲಿಗಿಡ, ನಾಗರಾಜು. ಶಿಲ್ಪಾ, ಸಂಜಯ್, ಕೃಷ್ಣಮೂರ್ತಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮಂಗಳವಾರ 23 ಜನವರಿ 2024

ಅಯೋಧ್ಯೆ ಬಾಲರಾಮನ ಶಿಲಾ ಸ್ಥಾನದಲ್ಲಿ ರಾಮಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ

ಮೈಸೂರು ತಾಲೂಕಿನ ಹಾರೋಹಳ್ಳಿಯಲ್ಲಿನ ರಾಮದಾಸರ ಜಮೀನಿನಲ್ಲಿ ಅಯೋಧ್ಯೆ ಮಾದರಿ ರಾಮಮಂದಿರಕ್ಕೆ ಶಾಸಕ ಜಿ.ಟಿ.ದೇವೇಗೌಡರಿಂದ ಭೂಮಿಪೂಜೆ

● ಮುಂಜಾನೆಯಿಂದಲೇ ಧಾರ್ಮಿಕ ಕಾರ್ಯ ● ಅಯೋಧ್ಯೆಯಿಂದ ತಂದಿದ್ದ ಮೃತ್ತಿಕೆ; ಸರಯೂ ನದಿಯಿಂದ ತಂದಿದ್ದ ತೀರ್ಥ, ಪಂಚಗವ್ಯ ಸಮರ್ಪಣೆ ● ನೂರಾರು ಗ್ರಾಮೀಣ ಜನರಲ್ಲಿ ಭಕ್ತಿ ಭಾವ

ಮೈಸೂರು, ಜ.22(ಬಿಎಲ್‌ಯು)– ಉತ್ತರಪ್ರದೇಶದ ಅಯೋಧ್ಯೆಯ ನೂತನ ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ಮೂರ್ತಿಯ ಕೃಷ್ಣಶಿಲೆ ದೊರೆತ ಮೈಸೂರಿನ ಹಾರೋಹಳ್ಳಿಯ ಜಮೀನಿನಲ್ಲಿ ಅಯೋಧ್ಯೆ ಮಾದರಿ ರಾಮಮಂದಿರ ನಿರ್ಮಾಣ ಮಾಡಲು ಇಂದು ಶಿಲಾನ್ಯಾಸ ನೆರವೇರಿತು. ದಕ್ಷಿಣ ಭಾರತದ ಅಯೋಧ್ಯೆ ನಾಮಾಂಕಿತದೊಂದಿಗೆ ನಿರ್ಮಾಣ ಮಾಡುವ ರಾಮಮಂದಿರಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಶಂಕುಸ್ಥಾಪನೆ ನೆರವೇರಿಸಿದರು.

ಅಯೋಧ್ಯೆಯ ಭವ್ಯ ರಾಮಮಂದಿರದಲ್ಲಿ ಇಂದು ಪ್ರತಿಷ್ಠಾಪನೆಗೊಂಡಿರುವ ಹಸನ್ಮುಖಿ ಭಾವದ ಬಾಲರಾಮನ ಕೃಷ್ಣಶಿಲೆ ಮೈಸೂರಿನ ಹಾರೋಹಳ್ಳಿಯ ಜಮೀನಿನಲ್ಲಿ ದೊರಕಿತ್ತು. ಈ ಹಿನ್ನೆಲೆಯಲ್ಲಿ ಇಂದು ಮುಂಜಾನೆಯಿಂದಲೇ ಭೂಮಿ ಪೂಜೆ ನೆರವೇರಿದ ಸ್ಥಳದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು.

ಇಂದು ಬೆಳಿಗ್ಗೆ ಪುಣ್ಯಾರಾಧನೆ ನೆರವೇರಿಸುವ ಮೂಲಕ ಧಾರ್ಮಿಕ ಕಾರ್ಯವನ್ನು ಆರಂಭಿಸಲಾಯಿತು. ಶ್ರೀರಾಮನ ಫೋಟೋ ಪ್ರತಿಷ್ಠಾಪಿಸಿ ವಿಘ್ನ ನಿವಾರಕ ಗಣಪತಿಗೆ ಮೊದಲ ಪೂಜೆ ಸಲ್ಲಿಸಲಾಯಿತು. ನಂತರ ನವಗ್ರಹ ಪೂಜೆ, ಕಳಸ ಪೂಜೆ, ಶಿಲಾನ್ಯಾಸ ಪೂಜೆ, ಗಂಗೆ ಪೂಜೆ ನೆರವೇರಿತು. ನಂತರ ಗ್ರಾಮದ ವನಿತೆಯರು ತಂದ ಕಳಸಗಳನ್ನು ಪ್ರತಿಷ್ಠಾಪಿಸಿ ಪೂಜಿಸಲಾಯಿತು.

ಶಾಸಕ ಜಿ.ಟಿ.ದೇವೇಗೌಡರು, ಪತ್ನಿ ಶ್ರೀಮತಿ ಲಲಿತಾ ಅವರ ಜೊತೆಗೂಡಿ ಪುರೋಹಿತ ವೃಂದದ ವೇದ ಮಂತ್ರ ಘೋಷದೊಂದಿಗೆ ರಾಮಮಂದಿರ ನಿರ್ಮಾಣದ ಭೂಮಿ ಪೂಜೆಯ ಧಾರ್ಮಿಕ ಪೂಜಾ ಕಾರ್ಯ ನೆರವೇರಿಸಿದರು. ಈ ವೇಳೆ ಜಮೀನಿನ ಮಾಲೀಕ ರಾಮದಾಸ್ ದಂಪತಿ ಕೂಡ ಪೂಜಾ ವಿಧಿವಿಧಾನಗಳಲ್ಲಿ ಭಾಗಿಯಾದರು.

ಶಿಲೆ ರೂಪದಲ್ಲಿ ಭೂಮಿಯಲ್ಲಿದ್ದ ಮರ್ಯಾದಾ ಪುರುಷ ಶ್ರೀರಾಮ ಅಯೋಧ್ಯೆಯಲ್ಲಿ ಬಾಲರಾಮನ ರೂಪ ತಳೆದಿದ್ದಾನೆ. ಇಂತಹ ಪವಿತ್ರ ಸ್ಥಳದಲ್ಲಿ ಅಯೋಧ್ಯೆ ಮಾದರಿ ರಾಮಮಂದಿರ ನಿರ್ಮಾಣ ಮಾಡಲು ಈ ವೇಳೆ ಸಂಕಲ್ಪ ಮಾಡಲಾಯಿತು. ಅಯೋಧ್ಯೆಯಲ್ಲಿ ಬಾಲರಾಮ ಪ್ರತಿಷ್ಠಾಪನೆಗೊಂಡಿರುವ ಸ್ಥಳದಿಂದ ತಂದಿರುವ ಮೃತ್ತಿಕೆ, ಅಯೋಧ್ಯೆಯ ಸರಯೂ ನದಿಯಿಂದ ತಂದ ಪವಿತ್ರ ಜಲ, ನವರತ್ನ, ಪಂಚಗವ್ಯ ಇಟ್ಟ ಸ್ಥಳದಲ್ಲಿ ಜಿ.ಟಿ.ದೇವೇಗೌಡರು ಶಿಲಾನ್ಯಾಸ ನೆರವೇರಿಸಿದರು. ತರುವಾಯ ಅದೇ ಸ್ಥಳದಲ್ಲಿ ಪುಷ್ಪಾಲಂಕಾರದಿಂದ ಅಲಂಕೃತಗೊಂಡಿದ್ದ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿದರು.

ಯಾವುದೇ ಜಾತಿ–ಧರ್ಮದ ಭೇದ–ಭಾವವಿಲ್ಲದೆ ಸುತ್ತಮುತ್ತಲ ಹತ್ತಾರು ಹಳ್ಳಿಗಳ ನೂರಾರು ಜನರು ಭಕ್ತಿ ಭಾವದಿಂದ ರಾಮಮಂದಿರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ರಾಮಮಂದಿರ ಶಿಲಾನ್ಯಾಸ ಸ್ಥಳದಿಂದ ಹೆಚ್.ಡಿ.ಕೋಟೆ ಮುಖ್ಯ ರಸ್ತೆ ತನಕ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಎಲ್ಲೆಲ್ಲೂ ಕೇಸರಿ ಬಾವುಟಗಳು ರಾರಾಜಿಸಿದವು. ರಾಮಮಂದಿರ ಶಿಲಾನ್ಯಾಸ ಸ್ಥಳದಲ್ಲಿ ಹಬ್ಬದ ಸಡಗರ ಸಂಭ್ರಮ ನೆಲೆಗೊಂಡಿತ್ತು. ಶ್ರೀರಂಗಪಟ್ಟಣದ ಬೇಬಿ ಮಠದ ಶ್ರೀ ತ್ರಿನೇತ್ರ ಸ್ವಾಮೀಜಿ, ಬರಡನಪುರದ ಶ್ರೀ ಮಹಾಂತೇಶ್ವರ ಸ್ವಾಮೀಜಿ, ಶಾಸಕ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್ ಸೇರಿದಂತೆ ಹಲವು ಮುಖಂಡರು ಈ ಕಾರ್ಯಕ್ರಮದಲ್ಲಿ ಹಾಜರಿದ್ದು, ಧನ್ಯತಾ ಭಾವ ಮೆರೆದರು.




ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ಮೂರ್ತಿಯ ಕೃಷ್ಣಶಿಲೆ ದೊರೆತ ಮೈಸೂರಿನ ಹಾರೋಹಳ್ಳಿಯ ಜಮೀನಿನಲ್ಲಿ ಅಯೋಧ್ಯೆ ಮಾದರಿ ರಾಮಮಂದಿರ ನಿರ್ಮಾಣ ಮಾಡುವ ಭೂಮಿ ಪೂಜೆಯ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು, ಪತ್ನಿ ಶ್ರೀಮತಿ ಲಲಿತಾ ಅವರೊಂದಿಗೆ ಭಾಗಿಯಾಗಿದ್ದರು. (ಎಡಚಿತ್ರ). ಈ ವೇಳೆ ರಾಮಮಂದಿರ ನಿರ್ಮಾಣಕ್ಕೆ ಜಿ.ಟಿ.ದೇವೇಗೌಡರು ಶಿಲಾನ್ಯಾಸ ನೆರವೇರಿಸಿದರು.

ಆದರೆ ಪರಮಾತ್ಮ ಇಲ್ಲೇ ಇದ್ದ

ಬಾಲರಾಮ ಮೂರ್ತಿ ದೊರೆತ ಸ್ಥಳದಲ್ಲಿದ್ದ ಕೃಷ್ಣಶಿಲೆ ಅನುಪಯುಕ್ತ ಎಂದು ಭಾವಿಸಿದ್ದೆವು. ಆದರೆ ಪರಮಾತ್ಮ ಇದೇ ಸ್ಥಳದಲ್ಲಿ ಇದ್ದ ಎಂಬ ಸತ್ಯ ತಿಳಿದಿರಲಿಲ್ಲ ಎಂದು ಜಮೀನಿನ ಮಾಲೀಕ ರಾಮದಾಸ್ ತಿಳಿಸಿದರು. ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಬಾಲರಾಮ ಪ್ರತಿಷ್ಠಾಪನೆಗೊಂಡಿರಬಹುದು. ಆದರೆ ಬಾಲರಾಮ ಹುಟ್ಟಿದ ಪವಿತ್ರ ಸ್ಥಳ ಇದಾಗಿದೆ ಎಂದರು. ನಮ್ಮ ಜಮೀನು ಇಂತಹ ಪವಿತ್ರ ಸ್ಥಳವಾಗಿರುವುದು ನನಗೆ ಸಂತಸ ತಂದಿದೆ ಎಂದು ರಾಮದಾಸ್ ತಿಳಿಸಿದರು.

ಅಯೋಧ್ಯೆಗೂ... ಮೈಸೂರಿಗೂ ಎತ್ತಿಂದೆತ್ತ ಸಂಬಂಧ

ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ಮೂರ್ತಿಯ ಕೃಷ್ಣಶಿಲೆ ನಮ್ಮ ಮೈಸೂರಿನ ಪವಿತ್ರ ಭೂಮಿಯಲ್ಲಿ ದೊರೆತಿರುವುದು ನಮ್ಮ ಭಾಗ್ಯ ಎಂದು ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಹೇಳಿದರು. ಇಂತಹ ಪವಾಡ ನಡೆದಿರುವುದನ್ನು ನೋಡಿದರೆ ಅಯೋಧ್ಯೆಯಿಂದ ಮೈಸೂರಿಗೆ ಎತ್ತಿಂದೆತ್ತ ಸಂಬಂಧ ಎನ್ನಿಸುತ್ತದೆ ಎಂದರು. ಈ ಮೂಲಕ ಗಾಂಧೀಜಿ ಅವರು ಕಂಡ ರಾಮರಾಜ್ಯದ ಕನಸನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನನಸು ಮಾಡಿದ್ದಾರೆ ಎಂದರು.

ಮೈಸೂರಿನ ಹಾರೋಹಳ್ಳಿ ದಕ್ಷಿಣ ಭಾರತದ ಅಯೋಧ್ಯೆ!

ಶಾಸಕ ಜಿ.ಟಿ.ದೇವೇಗೌಡರ ಭವಿಷ್ಯ

ಮೈಸೂರು, ಜ.22(ಬಿಎಲ್‌ಯು)– ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮ ಮೂರ್ತಿಯ ಕೃಷ್ಣಶಿಲೆ ದೊರೆತಿರುವ ಮೈಸೂರಿನ ಹಾರೋಹಳ್ಳಿಯಲ್ಲಿ ನಿರ್ಮಾಣ ಮಾಡುತ್ತಿರುವ ರಾಮಮಂದಿರದ ಸ್ಥಳ ದಕ್ಷಿಣ ಭಾರತದ ಅಯೋಧ್ಯೆಯಾಗಲಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಭವಿಷ್ಯ ನುಡಿದರು.

ಹಾರೋಹಳ್ಳಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಾಲರಾಮ ಮೂರ್ತಿಯ ಶಿಲೆ ದೊರೆತ ಸ್ಥಳದಲ್ಲಿ ಅಯೋಧ್ಯೆ ಮಾದರಿಯಲ್ಲಿ ರಾಮಮಂದಿರ ನಿರ್ಮಾಣ ಮಾಡಲಾಗುವುದು. ಬಾಲರಾಮನ ಮೂರ್ತಿ ಕೆತ್ತನೆ ಮಾಡಿರುವ ಮೈಸೂರಿನ ಅರುಣ್ ಯೋಗಿರಾಜ್ ಅವರಿಂದಲೇ ಇಲ್ಲಿನ ಶ್ರೀರಾಮ ಮೂರ್ತಿಯ ಕೆತ್ತನೆ ಮಾಡಿಸಲಾಗುವುದು ಎಂದರು.

ಇಲ್ಲಿ ದೊರೆತಿರುವ ಬಾಲರಾಮ ಮೂರ್ತಿಯ ಕೃಷ್ಣಶಿಲೆಯಲ್ಲೆ ಇಲ್ಲಿನ ಶ್ರೀರಾಮ ಮೂರ್ತಿಯನ್ನು ಕೆತ್ತನೆ ಮಾಡಿಸಲಾಗುವುದು. ಸದ್ಯ ಅಯೋಧ್ಯೆಯಲ್ಲಿರುವ ಅರುಣ್ ಯೋಗಿರಾಜ್ ಮೈಸೂರಿಗೆ ಬಂದ ನಂತರ ಚರ್ಚೆ ಮಾಡಿ, ಅಂತಿಮ ರೂಪ ನೀಡಲಾಗುವುದು ಎಂದು ಹೇಳಿದರು.

ದೇವಸ್ಥಾನ ನಿರ್ಮಾಣ ಸಂಬಂಧ ಸಮಿತಿಯೊಂದನ್ನು ರಚನೆ ಮಾಡಲಾಗುವುದು. ಸಮಿತಿಯಲ್ಲಿ ರಾಮಮಂದಿರ ನಿರ್ಮಾಣದ ಅಂತಿಮ ರೂಪುರೇಷೆಗಳನ್ನು ನಿರ್ಧರಿಸಲಾಗುವುದು. ಈ ಎಲ್ಲಾ ಕಾರ್ಯಗಳು ಶೀಘ್ರದಲ್ಲೆ ಆರಂಭವಾಗಲಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಅಯೋಧ್ಯೆಯ ಭವ್ಯ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆ ಮಾಡುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶಕ್ಕೆ ರಾಮ ರಾಜ್ಯದ ಸಂದೇಶ ನೀಡಿದ್ದಾರೆ. ಮೈಸೂರಿನ ಚಾಮುಂಡಿಬೆಟ್ಟಕ್ಕೆ ಬಂದ ಸಂದರ್ಭದಲ್ಲಿ ಅವರು ಮಾಡಿದ್ದ ಸಂಕಲ್ಪ ಇಂದು ಈಡೇರಿದೆ ಎಂದು ಹೇಳಿದರು.

ನಾಡದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲೇ ಬಾಲರಾಮ ಮೂರ್ತಿಯ ಕೃಷ್ಣಶಿಲೆ ದೊರಕಿದೆ. ಈಗ ಇದೇ ಸ್ಥಳದಲ್ಲಿ ಅಯೋಧ್ಯೆ ಮಾದರಿ ರಾಮಮಂದಿರ ನಿರ್ಮಾಣಕ್ಕೆ ಚಾಲನೆ ದೊರಕಿದೆ ಎಂದರು.

ಉತ್ತರ ಭಾರತಕ್ಕೆ ಕಾಶಿ ಹೇಗೊ ಹಾಗೆ, ದಕ್ಷಿಣ ಭಾರತಕ್ಕೆ ಮೈಸೂರಿನ ನಂಜುಂಡೇಶ್ವರ ಸನ್ನಿಧಿಯ ನಂಜನಗೂಡು ದಕ್ಷಿಣ ಕಾಶಿಯಾಗಿದೆ. ಇಂತಹ ಪವಿತ್ರ ಸ್ಥಳದಲ್ಲಿ ಬಾಲರಾಮ ಮೂರ್ತಿಯ ಕೃಷ್ಣಶಿಲೆ ದೊರೆತಿದೆ. ಈ ಪವಿತ್ರ ಕ್ಷೇತ್ರದಲ್ಲಿ ಇಂದು ರಾಮಮಂದಿರ ನಿರ್ಮಾಣವಾಗುತ್ತಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಸಂಸದ ಪ್ರತಾಪ್ ಸಿಂಹರಿಗೆ ಕೆಲವರು ಘೇರಾವ್

ಮೈಸೂರು, ಜ.22(ಬಿಎಲ್‌ಯು)– ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ಮೂರ್ತಿಯ ಕೃಷ್ಣಶಿಲೆ ದೊರೆತ ಮೈಸೂರು ತಾಲೂಕು ಹಾರೋಹಳ್ಳಿ ಜಮೀನಿನಲ್ಲಿ ಇಂದು ರಾಮಮಂದಿರ ನಿರ್ಮಾಣಕ್ಕೆ ನಡೆದ ಭೂಮಿಪೂಜೆ ವೇಳೆ ಕೆಲವರು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರಿಗೆ ಘೇರಾವ್ ಹಾಕಿದರು.

ಪ್ರತಾಪ್ ಸಿಂಹ ರಾಮಮಂದಿರ ನಿರ್ಮಾಣ ಭೂಮಿಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕೆ ಕೆಲವರು ತೀವ್ರ ವಿರೋಧ ವ್ಯಕ್ತಪಡಿಸಿದರು. ಹೀಗೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರತಾಪ್ ಸಿಂಹ, ಇಂತಹ ಪವಿತ್ರ ಧಾರ್ಮಿಕ ಕಾರ್ಯಕ್ರಮದ ವಾತಾವರಣ ಹಾಳು ಮಾಡಲು ನಾನು ಕಾರಣನಾಗಲು ಇಷ್ಟವಿಲ್ಲವೆಂದು ಸ್ಥಳದಿಂದ ನಿರ್ಗಮಿಸಿದರು.

ನಂತರ ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಶಿಲೆ ದೊರೆತ ಜಮೀನಿನ ಮಾಲೀಕ ರಾಮದಾಸ್ ಅವರ ಪುತ್ರನಿಂದ ರಾಮಮಂದಿರ ಶಂಕುಸ್ಥಾಪನಾ ಕಾರ್ಯಕ್ರಮಕ್ಕೆ ಆಹ್ವಾನ ಬಂದಿತ್ತು. ಈ ಹಿನ್ನೆಲೆಯಲ್ಲಿ ಅಲ್ಲಿಗೆ ಹೋಗಿದ್ದೆ. ಈ ವೇಳೆ ಜಮೀನಿನ ಮಾಲೀಕ ರಾಮದಾಸ್ ಪುತ್ರ ಖುದ್ದು ನನ್ನನ್ನು ಸ್ವಾಗತಿಸಿದರು. ಆದರೆ ಅಲ್ಲಿದ್ದ ಕೆಲವು 'ಮಹಿಷ ಅನುಯಾಯಿಗಳು' ನಾನು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕೆ ತಡೆಯೊಡ್ಡಿದರು. ಇದರಲ್ಲಿ 'ಕಾಂಗ್ರೆಸ್' ಕೈವಾಡವಿದೆ. ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಿಂದ ಕಾಂಗ್ರೆಸ್‌ನವರು ಹೀಗೆಲ್ಲಾ ಮಾಡಿದ್ದಾರೆಂದು ಆರೋಪಿಸಿದರು.

ನಾಳೆ 'ಅಭಿನವ ಸಾಮ್ರಾಟ ಡಾ.ಪುನೀತ್ ಚುಟುಕುಗಳು' ಲೋಕಾರ್ಪಣೆ



ಮೈಸೂರು,ಜ.22– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಘಟಕದ ಸಂಯುಕ್ತಾಶ್ರಯದಲ್ಲಿ ಜ.24ರಂದು ಬೆಳಗ್ಗೆ 10.30ಕ್ಕೆ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ 'ಅಭಿನವ ಸಾಮ್ರಾಟ ಡಾ.ಪುನೀತ್ ಚುಟುಕುಗಳು' ಲೋಕಾರ್ಪಣೆ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕೃತಿ ಲೋಕಾರ್ಪಣೆ ಮಾಡುವರು. ಮಾಜಿ ಗೃಹ ಸಚಿವ ಪಿ.ಜಿ.ಆರ್.ಸಿಂಧ್ಯಾ ಕಾರ್ಯಕ್ರಮ ಉದ್ಘಾಟಿಸುವರು. ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಪುನೀತ್ ಭಾವಚಿತ್ರ ಲೋಕಾರ್ಪಣೆ ಮಾಡುವರು. ಚುಟುಕು ಸಿರಿ ಡಾ.ರತ್ನ ಹಾಲಪ್ಪಗೌಡ ಮತ್ತು ಮಾನ್ಯ ಕಾರ್ಯಪ್ಪ ಪುನೀತ್ ರಾಜ್‌ಕುಮಾರ್ ಸಿದ್ಧಿ ಸಾಧನೆ ಕುರಿತು ಮಾತನಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಿತ್ರ ನಿರ್ಮಾಪಕ ಶ್ರೀನಿವಾಸ್, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ.ಹೆಚ್.ಎನ್.ಲೋಕೇಶಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ದಸರಾ ವಸ್ತುಪ್ರದರ್ಶನದಲ್ಲಿಟ್ಟಿದ್ದ ಕಲಾಕೃತಿ ಹಿಂಪಡೆಯಲು ಸೂಚನೆ



ಮೈಸೂರು,ಜ.22(ಪಿಎಂ)– ದಸರಾ ವಸ್ತುಪ್ರದರ್ಶನವು ಜ.12ರಂದು ಮುಕ್ತಾಯವಾಗಿರುವ ಹಿನ್ನೆಲೆಯಲ್ಲಿ ಕಲಾವಿದರು ಹಾಗೂ ಸಾರ್ವಜನಿಕರು ಪ್ರದರ್ಶನಕ್ಕಾಗಿ ಇಟ್ಟಿದ್ದ ತಮ್ಮ ಎಲ್ಲಾ ಕಲಾಕೃತಿ, ಛಾಯಾಚಿತ್ರ ಹಾಗೂ ಇತ್ಯಾದಿಗಳನ್ನು ಜ.25ರೊಳಗೆ ಕಚೇರಿ ವೇಳೆಯಲ್ಲಿ ಹಿಂಪಡೆಯಬೇಕೆಂದು ವಸ್ತುಪ್ರದರ್ಶನ ಪ್ರಾಧಿಕಾರದ ಪ್ರಕಟಣೆಯಲ್ಲಿ ಕೋರಲಾಗಿದೆ.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ನಂ.22ರ ಪಡುವಾರಹಳ್ಳಿ 6ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆಯ ಅಭಿವೃದ್ಧಿ ಕಾಮಗಾರಿ(ಅಂದಾಜು ಮೊತ್ತ 10 ಲಕ್ಷ ರೂ.)ಗೆ ಸೋಮವಾರ ಶಾಸಕ ಕೆ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶ, ರಾಮಚಂದ್ರಪ್ಪ, ಬಿ.ಕುಮಾರ್, ಶಿವಣ್ಣ, ರಾಮಣ್ಣ, ಜೆ.ಯೋಗೇಶ್, ಕೃಷ್ಣ, ಪಾಪಣ್ಣ, ಕೃಪಾನಂದ, ಸ್ವಾಮಿ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಜ.28, ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ

ಮೈಸೂರು: ಪೊಲೀಸ್ ಇಲಾಖೆ ವತಿಯಿಂದ ಜ.28ರಂದು ಬೆಳಗ್ಗೆ 11ರಿಂದ 12.30ರವರೆಗೆ ರಾಜ್ಯಾದ್ಯಂತ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ಡಿಎಆರ್) (ಪುರುಷ) (ತೃತೀಯ ಲಿಂಗ ಪುರುಷ) 3064 ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಕರೆ ಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕರೆ ಪತ್ರದ ಲಿಂಕ್ ಅನ್ನು ಸಹ ಕಳುಹಿಸಲಾಗುವುದು. ಅಭ್ಯರ್ಥಿಗಳು ಕರೆ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ದಕ್ಷಯಜ್ಞ ನಾಟಕ ಪ್ರದರ್ಶನ



ಮೈಸೂರು,ಜ.22–ಶ್ರೀ ಮನೆ ಮಂಚಮ್ಮ ಕೃಪಾ ಪೋಷಿತ ನಾಟಕ ಮಂಡಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಜ.23 ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರಿನ ಪುರಭವನದಲ್ಲಿ ದಕ್ಷಯಜ್ಞ ಅಥವಾ ಬೃಗು ಮುನಿಯ ಗರ್ವಭಂಗ ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಚಾ.ನಗರ ತಾಲೂಕು ಮಂಗಲ ಶಿವಣ್ಣ ಅವರ ನಿರ್ದೇಶನದಲ್ಲಿ ಸೂತ್ರಧಾರಿ ಪಾತ್ರದಲ್ಲಿ ಬೆಳವಾಡಿ ಮಹೇಶ್, 1ನೇ ದಕ್ಷಬ್ರಹ್ಮನಾಗಿ ಹುಯಿಲಾಳು ರಾಮಸ್ವಾಮಿ, 2ನೇ ದಕ್ಷಬ್ರಹ್ಮನಾಗಿ ಲೋಕೇಶ್, ಈಶ್ವರನ ಪಾತ್ರದಲ್ಲಿ ಗೋಕುಲಂ ಲೋಕೇಶ್, ಚಂದ್ರಮನಾಗಿ ಶೆಟ್ಟನಾಯಕನಹಳ್ಳಿ ಸಿದ್ಧಾರ್ಥ, ವಸಂದರನಾಗಿ ಲಗ್ಗೆರೆ ರಾಮಕೃಷ್ಣ, ನಾರದನಾಗಿ ಕ್ಯಾತಮಾರನಹಳ್ಳಿ ಸಾಗರ್, ಬೃಗುಮುನಿಯ ಪಾತ್ರದಲ್ಲಿ ಮಾರ್ಬಳ್ಳಿ ಗಿರೀಶ್, ಜಾಲಬ್ರಹ್ಮನಾಗಿ ಹೊಸರಾಮನಹಳ್ಳಿ ರವಿಕುಮಾರ್, ದದೀಚಿ ಪಾತ್ರದಲ್ಲಿ ಹೆಚ್.ಡಿ.ಕೋಟೆ ಪುಟ್ಟರಾಜು, ಸತಿ ಆದಿಶಕ್ತಿ ಪಾತ್ರದಲ್ಲಿ ದೀಪಿಕ, ರೋಹಿಣಿಯಾಗಿ ಶ್ವೇತ, ವೇದಾವತಿ ಪದ್ಮನ ಪಾತ್ರದಲ್ಲಿ ಚೈತ್ರ, ಪುಷ್ಯವತಿ ರೇವತಿ ಪಾತ್ರದಲ್ಲಿ ರೂಪ ಮತ್ತು ಜ್ಯೋತಿ ಅಭಿನಯಿಸಲಿದ್ದಾರೆ ಎಂದು ನಾಟಕ ಮಂಡಳಿ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಯುವ ಬಳಗದ ಆಶ್ರಯದಲ್ಲಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ವೇಳೆ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಮಾಜಿ ಉಪಮೇಯರ್ ಪುಷ್ಪವಲ್ಲಿ, ಮಹದೇವ, ಧರ್ಮೇಂದ್ರ, ಮಂಜುನಾಥ, ಬಸವರಾಜ್, ರವಿಚಂದ್ರ, ನಂಜುಂಡಸ್ವಾಮಿ, ಹೇಮಂತ ಜಗದೀಶ, ಲೋಕೇಶ, ಶ್ರೀನಿವಾಸ್, ರಾಣಿ, ಶಾಂತ, ಮಂಜುಳಾ ಮತ್ತಿತರರಿದ್ದರು.

ಕಾಳಪ್ಪ ನಿಧನ



ಮೈಸೂರು, ಜ.22–ಮೈಸೂರಿನ ಲಲಿತಾದ್ರಿಪುರ ನಿವಾಸಿ ಕಾಳಪ್ಪ (65) ಅವರು ಇಂದು ನಿಧನರಾದರು. ಅವರು ಪತ್ನಿ ಶ್ರೀಮತಿ ರುಕ್ಮಿಣಿ, ಪುತ್ರರಾದ ಪತ್ರಕರ್ತ ಪುಟ್ಟಪ್ಪ, ಪರಶಿವಮೂರ್ತಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ನಾಳೆ (ಜ.23) ಮಧ್ಯಾಹ್ನ 3 ಗಂಟೆಗೆ ಲಲಿತಾದ್ರಿಪುರದ ವೀರಶೈವ ರುದ್ರಭೂಮಿಯಲ್ಲಿ ಕಾಳಪ್ಪ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಶುಭ ವೇಳೆ

ಮೈಸೂರು ಅರಮನೆ ಮುಂದೆ 111 ಅಡಿಯ ಅಗರಬತ್ತಿ ಬೆಳಗಿದ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್ ತಾಯಿ

● ಸೈಕಲ್ ಪ್ಯೂರ್ ಅಗರಬತ್ತೀಸ್‌ನ ರಾಮ ಭಕ್ತಿ; ಅರಮನೆ ಸುತ್ತಮುತ್ತ ಸುವಾಸನೆ ಜೊತೆಗೆ ಭಕ್ತಿ ಪರಿಸರ
● 18 ನುರಿತ ಸಿಬ್ಬಂದಿ 23 ದಿನ ಶ್ರಮಿಸಿ ಸಿದ್ಧಪಡಿಸಿದ ವಿಶೇಷ ಅಗರಬತ್ತಿ 25 ದಿನ ಬೆಳಗಲಿದೆ

ಮೈಸೂರು,ಜ.22(ಎಂಟಿವೈ)–ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ಮೈಸೂರಲ್ಲಿ ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಸಂಸ್ಥೆ, ವಿಶೇಷವಾಗಿ ತಯಾರಿಸಿದ್ದ 111 ಅಡಿ ಉದ್ದದ ಗಂಧದ ಕಡ್ಡಿ ಬೆಳಗಿ ಶ್ರೀರಾಮನಿಗೆ ಭಕ್ತಿ ಸಮರ್ಪಿಸಿತು.

ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಸೋಮವಾರ ಬೆಳಗ್ಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಾಲರಾಮನ ಕೆತ್ತನೆ ಮಾಡಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ, ಅರಮನೆ ಮುಂದೆ 111 ಅಡಿ ಉದ್ದದ ಗಂಧದಕಡ್ಡಿಯನ್ನು ಬೆಳಗಿದರು. ಈ ವೇಳೆ ಮಾತನಾಡಿದ ಅವರು, ಪುತ್ರ ಅರುಣ್ ಯೋಗಿರಾಜ್ ಕೆತ್ತನೆ ಮಾಡಿರುವ ಬಾಲರಾಮನ ಮೂರ್ತಿ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗಿರುವುದು ಸಂತೋಷ ತಂದಿದೆ. ದೇಶದುದ್ದಗಲಕ್ಕೂ ಶ್ರೀರಾಮನ ಆರಾಧನೆ ನಡೆಯುತ್ತಿದೆ. ಅಪಾರ ಸಂಖ್ಯೆ ಜನ ಶುಭಾಶಯ ಕೋರುತ್ತಿದ್ದಾರೆ. ಇದರಿಂದ ಅಯೋಧ್ಯೆಯೇ ನಮ್ಮ ಮನೆಯಲ್ಲಿ ನೆಲೆಸಿದಂತಹ ಖುಷಿ ಆಗುತ್ತಿದೆ. ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಸಂಸ್ಥೆ 111 ಅಡಿ ಉದ್ದದ ಗಂಧದಕಡ್ಡಿ ಬೆಳಗುವ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು ಸಂತೋಷ ತಂದಿದೆ ಎಂದರು.

ಎನ್.ಆರ್.ಗ್ರೂಪ್ ಅಧ್ಯಕ್ಷ ಆರ್.ಗುರು ಮಾತನಾಡಿ, ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಸಂಸ್ಥೆ ಆಧ್ಯಾತ್ಮದೊಂದಿಗೆ ಬೆರೆತು ಹೋಗಿದೆ. ಅಯೋಧ್ಯೆಯಲ್ಲಿ ಬಾಲರಾಮ ಮೂರ್ತಿ (ರಾಮಲಲ್ಲಾ) ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ಸಂಸ್ಥೆಯ 18 ನುರಿತ ಸಿಬ್ಬಂದಿಯ ತಂಡ ಸತತ 23 ದಿನ ಶ್ರಮಿಸಿ 111 ಅಡಿ ಉದ್ದದ ಗಂಧದಕಡ್ಡಿ ತಯಾರಿಸಿದ್ದಾರೆ. ಮೈಸೂರು ಮಾತ್ರವಲ್ಲದೆ ಮಹಾರಾಷ್ಟ್ರ ಹಾಗೂ ಗೋವಾದಲ್ಲೂ ಬೃಹತ್ ಗಂಧದಕಡ್ಡಿ ಬೆಳಗಲಾಗುತ್ತಿದೆ. ಆ ಮೂಲಕ ಶ್ರೀರಾಮನಿಗೆ ಭಕ್ತಿ ಸಮರ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಸಂಸದ ಪ್ರತಾಪ ಸಿಂಹ ಮಾತನಾಡಿ, 2020ರಲ್ಲಿ ಕೇದಾರನಾಥ್‌ನಲ್ಲಿ ಶಂಕರಾಚಾರ್ಯರ ಪ್ರತಿಮೆ ಕೆತ್ತನೆ ಮಾಡಿದ್ದ ಅರುಣ್ ಯೋಗಿರಾಜ್ ಅವರಿಗೆ ಪ್ರತಿಮೆಯ ಕ್ರೆಡಿಟ್ ನೀಡಿರಲಿಲ್ಲ. ಆ ಪ್ರತಿಮೆ ಕೆತ್ತನೆ ಮಾಡಿಸಿಕೊಂಡ ಕಂಪನಿ ಎಲ್ಲಿಯೂ ಅರುಣ್ ಯೋಗಿರಾಜ್ ಅವರ ಹೆಸರು ಪ್ರಸ್ತಾಪಿಸಿರಲಿಲ್ಲ. ಪ್ರತಿಮೆ ಉದ್ಘಾಟನೆಗೆ ನಾನು ಕೇದಾರ್‌ನಾಥ್‌ಗೆ ಹೋಗಿದ್ದಾಗ ಡೆಹ್ರಾಡೂನ್‌ನಲ್ಲಿ ಅರುಣ್ ಯೋಗಿರಾಜ್ ಅವರು ಶಂಕರಾಚಾರ್ಯರ ಪ್ರತಿಮೆ ಕೆತ್ತಿರುವುದು ನಾನೇ ಎಂದು ಹೇಳಿದರು. ಅಲ್ಲದೆ, ಹೆಸರು ಪ್ರಸ್ತಾಪಿಸದೇ ಇದ್ದುದ್ದಕ್ಕೆ ಬೇಸರ ವ್ಯಕ್ತಪಡಿಸಿದ್ದರು. ಅಂದು ಅವರನ್ನು ಪ್ರಧಾನಿ ಮೋದಿ ಬಳಿ ಕರೆದುಕೊಂಡು ಹೋಗುವುದಾಗಿ ಭರವಸೆ ನೀಡಿದ್ದೆ ಎಂದರು.

ದೆಹಲಿಯ ಇಂಡಿಯಾ ಗೇಟ್ ಮುಂದೆ ಸುಭಾಷ್ ಚಂದ್ರ ಬೋಸ್ ಅವರ ಕಲ್ಲಿನ ಪ್ರತಿಮೆ ನಿಲ್ಲಿಸಬೇಕೆಂಬ ಪ್ರಸ್ತಾವನೆ ಬಂದಾಗ ಒರಿಸ್ಸಾದ ಲೋಹದ ಅಚ್ಚು ಹಾಕುವ ಶಿಲ್ಪಿಯೊಬ್ಬರಿಗೆ ಟೆಂಡರ್ ನೀಡಲಾಗಿತ್ತು. ಆದರೆ, ಟೆಂಡರ್ ಪಡೆದ ಶಿಲ್ಪಿ, ಅರುಣ್ ಯೋಗಿರಾಜ್ ಅವರಿಗೆ ಉಪ ಗುತ್ತಿಗೆ ನೀಡಲು ಮುಂದಾಗಿ, ಗೌರವ ಧನ ನೀಡುವುದಾಗಿ ತಿಳಿಸಿದ್ದರು. ಆದರೆ, ಪ್ರತಿಮೆ ಕೆತ್ತನೆಗೆ ಹೆಸರು ನೀಡದಿರುವ ಷರತ್ತು ಹಾಕಲಾಗಿತ್ತು. ಈ ವೇಳೆ ನಾನು ಪ್ರಧಾನಿ ಮೋದಿಯವರಿಗೆ ನೀಡಲು ಸುಭಾಷ್ ಚಂದ್ರ ಬೋಸ್ ಅವರ ಚಿಕ್ಕ ಪ್ರತಿಮೆಯೊಂದನ್ನು ಕೆತ್ತನೆ ಮಾಡುವಂತೆ ಅರುಣ್ ಯೋಗಿರಾಜ್ ಅವರಿಗೆ ಸಲಹೆ ನೀಡಿದ್ದೆ. ಪ್ರಧಾನಿ ಭೇಟಿ ಮಾಡಲು ಸಮಯ ತೆಗೆದುಕೊಂಡಿದ್ದೆ. ಆ ವೇಳೆ ವಿಮಾನದಲ್ಲಿ 30 ಕೆಜಿ ತೂಕದ ಕಲ್ಲಿನ ಸುಭಾಷ್ ಚಂದ್ರ ಬೋಸ್ ಪ್ರತಿಮೆಯನ್ನು ತೆಗೆದುಕೊಂಡು ಹೋಗಲು ಬಿಡುತ್ತಿರಲಿಲ್ಲ. ಭದ್ರತಾ ಸಿಬ್ಬಂದಿಗೆ ಸೂಚನೆ ನೀಡಿ, ವಿಮಾನದಲ್ಲಿ ಪ್ರತಿಮೆಯನ್ನು ಕೊಂಡೊಯ್ಯಲು ಅವಕಾಶ ಮಾಡಿಕೊಡಲಾಯಿತು. ಮೋದಿ ಅವರನ್ನು ಭೇಟಿ ಮಾಡಿ, ಸುಭಾಷ್ ಚಂದ್ರ ಬೋಸ್ ಪ್ರತಿಮೆ ನೀಡಿದಾಗ, ಅವರು ಮೆಚ್ಚಿಕೊಂಡರು.

ಆ ಸಂದರ್ಭವನ್ನೇ ಬಳಸಿಕೊಂಡು ಇಂಡಿಯಾ ಗೇಟ್ ಮುಂದೆ ಅಳವಡಿಸಲು ಪ್ರತಿಮೆ ನಿರ್ಮಾಣದ ಕೆತ್ತನೆಗಾಗಿ ಒರಿಸ್ಸಾದ ಅಚ್ಚು ಹಾಕುವ ಕಲಾವಿದರಿಗೆ ಟೆಂಡರ್ ನೀಡಲಾಗಿದೆ. ಅರುಣ್ ಯೋಗಿರಾಜ್ ಅವರು ಕೆತ್ತನೆ ಮಾಡುವುದರಿಂದ ಪ್ರತಿಮೆ ಚೆನ್ನಾಗಿರುತ್ತದೆ ಎಂದು ಪ್ರಧಾನಿಗಳ ಗಮನಕ್ಕೆ ತಂದಿದ್ದೆ. ಆಗ ಅಲ್ಲಿಯೇ ಇದ್ದ ಸಚಿವ ಪ್ರಹ್ಲಾದ್ ಜೋಷಿ ಅವರಿಗೆ ಪ್ರಧಾನಿ ಮೋದಿ ಸೂಚನೆ ನೀಡಿ ಅರುಣ್ ಯೋಗಿರಾಜ್ ಅವರಿಗೆ ಸುಭಾಷ್ ಚಂದ್ರಬೋಸ್ ಅವರ ಪ್ರತಿಮೆ ಕೆತ್ತನೆಯ ಜವಾಬ್ದಾರಿ ನೀಡಿದರು ಎಂದು ಸ್ಮರಿಸಿದರು.

25 ದಿನ ಉರಿಯಲಿದೆ: ಅರಮನೆ ಮುಂಭಾಗ ಹಚ್ಚಿರುವ ಬೃಹತ್ ಗಂಧದಕಡ್ಡಿ 25 ದಿನ ಉರಿಯಲಿದೆ. 6 ಅಡಿ ಉದ್ದದ 18 ಬ್ಲಾಕ್‌ಗಳನ್ನು ತಂದು ಜೋಡಣೆ ಮಾಡಲಾಗಿದೆ. ದಿನದ 24 ಗಂಟೆಯೂ ಅರಮನೆ ಸುತ್ತಮುತ್ತಲಿನ ಪ್ರದೇಶದಲ್ಲಿ ಗಂಧದಕಡ್ಡಿ ಸುವಾಸನೆ ಬೀರುವುದರೊಂದಿಗೆ ಭಕ್ತಿ ಪಸರಿಸಲಿದೆ. ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಸಂಸ್ಥೆಯ ಶ್ರುತಿ ರಂಗ, ನಂದಾ ಶ್ರೀಧರ್, ಅನಿರುದ್ಧ್ ರಂಗ, ಪೂಜಾ ರಂಗ, ಜಾನವಿ ಮೂರ್ತಿ, ಕಿರಣ್ ರಂಗ, ವಿದ್ಯಾ ಅರ್ಜುನ್ ರಂಗ, ಅಪರ್ಣ ರಂಗ, ಸವಿತಾ ರಂಗ, ವಿಷ್ಣು ರಂಗ, ನಿಖಿಲ್ ರಂಗ ಮತ್ತು ಕರ್ಣ ರಂಗ ಹಾಗೂ ಅರುಣ್ ಯೋಗಿರಾಜ್ ಪತ್ನಿ ವಿಜೇತ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಸಂಸ್ಥೆ ವತಿಯಿಂದ ತಯಾರಿಸಿದ್ದ 111 ಅಡಿ ಉದ್ದ ಗಂಧದಕಡ್ಡಿಯನ್ನು ಬಾಲರಾಮ ವಿಗ್ರಹ ಕೆತ್ತನೆ ಮಾಡಿದ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಿ ಬೆಳಗಿದರು.

"ಮೈಸೂರಿಗೂ ಅಯೋಧ್ಯೆಗೂ ಸಂಬಂಧ ಬೆಸೆದಿದೆ. ಬಾಲರಾಮ ಮೂರ್ತಿ ಕೆತ್ತನೆಗೆ ಮೈಸೂರಿನ ಹಾರೋಹಳ್ಳಿಯಲ್ಲಿ ಸಿಕ್ಕ ಕಲ್ಲು ಬಳಕೆಯಾಗಿದೆ. ಬಾಲರಾಮ ವಿಗ್ರಹ ಕೆತ್ತನೆ ಮಾಡಿದ್ದು, ಮೈಸೂರಿನ ಶಿಲ್ಪಿಯೇ ಆಗಿದ್ದಾರೆ. ಒಂದೆಡೆ ಅಯೋಧ್ಯೆಯಲ್ಲಿ ಬಾಲರಾಮ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ನಡೆಯುತ್ತಿದ್ದರೆ, ಮತ್ತೊಂದೆಡೆ ಮೂರ್ತಿ ಕೆತ್ತನೆಗಾಗಿ ಕಲ್ಲು ಸಿಕ್ಕಿದ ಸ್ಥಳದಲ್ಲಿ ರಾಮಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿದೆ. ಈ ಹಿನ್ನೆಲೆಯಲ್ಲಿ ಎಲ್ಲಿವರೆಗೂ ಅಯೋಧ್ಯೆ ಹಾಗೂ ಮೈಸೂರು ಇರುತ್ತದೋ ಅಲ್ಲಿವರೆಗೂ ಎರಡೂ ನಗರಗಳ ನಡುವೆ ಇರುವ ಬಾಂಧವ್ಯ ಮುಂದುವರೆಯುತ್ತದೆ. –ಪ್ರತಾಪ್ ಸಿಂಹ

ಸಕ್ಕರೆ ನಾಡಲ್ಲಿ ಮೊಳಗಿದ ಶ್ರೀರಾಮ ಜಪ

ಎಲ್ಲೆಲ್ಲೂ ಶ್ರೀರಾಮ ಸ್ಮರಣೆ, ಪ್ರಸಾದ ವಿತರಣೆ



ಮಂಡ್ಯ, ಜ.22– ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ದಿನವಾದ ಸೋಮವಾರ ಸಕ್ಕರೆ ನಾಡು ಮಂಡ್ಯದಲ್ಲಿ ರಾಮಜಪ ಮೊಳಗಿತು. ನಗರದ ಯಾವುದೇ ರಸ್ತೆ ನೋಡಿದರೂ ಶ್ರೀರಾಮ ಹಾಗೂ ಆಂಜನೇಯನ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು.

ನಗರದ ನೂರಡಿ ರಸ್ತೆ, ಗುತ್ತಲು ರಸ್ತೆ, ವಿ.ವಿ.ರಸ್ತೆ, ಬೆಂಗಳೂರು– ಮೈಸೂರು ರಸ್ತೆ ಸೇರಿದಂತೆ ನಗರದ ಹಲವೆಡೆ ಅಂಗಡಿ– ಮುಂಗಟ್ಟುಗಳ ಮುಂದೆ ಶಾಮಿಯಾನ ಹಾಕಿ ಶ್ರೀರಾಮ ಹಾಗೂ ಆಂಜನೇಯನ ಫ್ಲೆಕ್ಸ್‌ಗಳನ್ನು ಅಳವಡಿಸಿ, ಪೂಜೆ ನೆರವೇರಿಸುತ್ತಿದ್ದ ದೃಶ್ಯ ಕಂಡು ಬಂತು. ಬಳಿಕ ಪ್ರಸಾದ ವಿತರಣೆಯೂ ಅದ್ಧೂರಿಯಾಗಿ ನಡೆಯುತ್ತಿದ್ದ ದೃಶ್ಯಗಳು ಕಂಡು ಬಂದವು.

ನಗರದ ಬಹುತೇಕ ಅಂಗಡಿ– ಮುಂಗಟ್ಟುಗಳಲ್ಲಿ ಕೇಸರಿ ಬಾವುಟಗಳು ರಾರಾಜಿಸುತ್ತಿದ್ದವು. ರಾಮ ಪೂಜೆಯ ಬಳಿಕ ಬಹುತೇಕ ರಾಮಭಕ್ತರು ಕೇಸರಿ ಬಾವುಟ ಮೆರವಣಿಗೆ, ಕೇಸರಿ ಶಾಲುಗಳನ್ನು ಹಾಕಿಕೊಂಡು ಸಂಚರಿಸುತ್ತಿದ್ದರು. ಇನ್ನು ಬಹುತೇಕ ಶ್ರೀ ರಾಮಮಂದಿರ ಹಾಗೂ ಆಂಜನೇಯನ ದೇಗುಲಗಳಲ್ಲಿ ವಿಶೇಷ ಪೂಜೆ, ಹೋಮ, ಹವನ ದೇವರುಗಳಿಗೆ ವಿಶೇಷ ಅಲಂಕಾರಗಳನ್ನು ಮಾಡಲಾಗಿತ್ತು ಸಾವಿರಾರು ಮಂದಿ ಭಕ್ತರು ಇಂದು ಶ್ರೀರಾಮ ಹಾಗೂ ಆಂಜನೇಯನ ದರ್ಶನ ಪಡೆದು ಪುನೀತರಾದರು.

ಮಂಡ್ಯದ ನೆಹರುನಗರದಲ್ಲಿರುವ ರಾಮಮಂದಿರದ ಬಳಿ 18 ಅಡಿ ಎತ್ತರದ ಆಂಜನೇಯಸ್ವಾಮಿ ಪ್ರತಿಮೆಯನ್ನು ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಹಾಗೂ ಆದಿಚುಂಚನಗಿರಿ ಮಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ ಅನಾವರಣಗೊಳಿಸಿದರು. ಕಲ್ಲಹಳ್ಳಿಯಲ್ಲಿರುವ ಆಂಜನೇಯಸ್ವಾಮಿ ದೇಗುಲದಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಅಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶ್ರೀರಾಮನ ದರ್ಶನಕ್ಕೆ ಸಾವಿರಾರು ಮಂದಿ ಭಕ್ತರು ಆಗಮಿಸಿದ್ದರು.



ಮಂಡ್ಯದ ನೆಹರು ನಗರದ ಶ್ರೀರಾಮಮಂದಿರದ ಆವರಣದಲ್ಲಿ 18 ಅಡಿ ಎತ್ತರದ ಅಭಯ ಆಂಜನೇಯಸ್ವಾಮಿ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಲಾಯಿತು.

ಇದರ ಜೊತೆಗೆ ಕ್ಯಾತುಂಗೆರೆ ಬಳಿ ಇರುವ ಆಂಜನೇಯಸ್ವಾಮಿ ದೇಗುಲ, ಗುತ್ತಲಿನ ಆಂಜನೇಯಸ್ವಾಮಿ ದೇಗುಲ, ಕನ್ನಿಕಾಪರಮೇಶ್ವರಿ ದೇಗುಲದ ಬಳಿ ಪ್ರತಿಷ್ಠಾಪಿಸಲಾಗಿದ್ದ ಶ್ರೀರಾಮನ ದೇಗುಲದ ಬಳಿ ವಿಶೇಷ ಪೂಜೆಗಳು ಹಾಗೂ ಪ್ರಸಾದ ವಿನಿಯೋಗ ನಡೆಯಿತು.

ಕಲ್ಲಹಳ್ಳಿಯ ವಿ.ವಿ.ನಗರದ 14ನೇ ಕ್ರಾಸ್ ಬಡಾವಣೆಯಲ್ಲಿರುವ ಶ್ರೀವರಸಿದ್ಧಿ ವಿನಾಯಕ ದೇವಾಲಯದಲ್ಲಿ ಶ್ರೀವರಸಿದ್ಧಿ ವಿನಾಯಕ ಶ್ರೀಕಂಠೇಶ್ವರ ಹಿತೈಷಿ ಮಹಿಳಾ ಟ್ರಸ್ಟ್ ವತಿಯಿಂದ ಶ್ರೀರಾಮ ಸ್ಮರಣೆ, ಭಜನೆ–ಕೀರ್ತನೆ–ವಿಶೇಷಪೂಜೆ– ಪ್ರಸಾದ ವಿನಿಯೋಗ ನಡೆದರೆ, ದ್ವಾರಕ ನಗರ ನಿವಾಸಿಗಳು ಶ್ರೀರಾಮನ ಭಾವ ಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿದರು.

ಇದಲ್ಲದೇ ಜಿಲ್ಲಾ ಬಿಜೆಪಿ ಕಾರ್ಯಕರ್ತರು ದೇಗುಲಗಳಲ್ಲಿ ಅನಾಥವಾಗಿ ಬಿದ್ದಿದ್ದ ದೇವರ ಫೋಟೋಗಳನ್ನು ಸಂಗ್ರಹಿಸಿ, ಅವುಗಳನ್ನು ಒಂದು ಕಡೆ ವ್ಯವಸ್ಥಿತವಾಗಿರಿಸುವ ಕೆಲಸಗಳನ್ನು ಮಾಡಿದರು. ಮಂಡ್ಯದ ಬನ್ನೂರು ರಸ್ತೆಯಲ್ಲಿರುವ ಬೇಕ್ ಪಾಯಿಂಟ್‌ನಲ್ಲಿ ಬೇಕರಿ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ಅರವಿಂದ್ ನೇತೃತ್ವದಲ್ಲಿ ಅಯೋಧ್ಯೆಯ ಶ್ರೀರಾಮಮಂದಿರ ಹೋಲುವ ಕೇಕ್ ಅನ್ನು ಸಿದ್ಧಪಡಿಸಿ, ಪ್ರದರ್ಶನಕ್ಕಿಡಲಾಗಿತ್ತು.



ಮದ್ದೂರಲ್ಲಿ ಶ್ರೀರಾಮನಿಗೆ ವಿಶೇಷ ಪೂಜೆ



ಶಿವಪುರದಲ್ಲಿ ರಾಮೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಡಾ.ಹೊಳ್ಳ, ಸುರೇಶ್‌ಕುಮಾರ್, ಕೋಟಿ ಚಂದ್ರಶೇಖರ್, ಗುರುಮಲ್ಲೇಶ್ ಇದ್ದರು.

ಮದ್ದೂರು, ಜ.22– ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕೆಸ್ತೂರು: ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಶ್ರೀ ರಾಮನ ಮೂರ್ತಿಯನ್ನು ತೆರೆದ ವಾಹನದಲ್ಲಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಜತೆಗೆ ಎತ್ತಿನ ಗಾಡಿಯಲ್ಲಿ ಶ್ರೀ ರಾಮನ ಮೆರವಣಿಗೆ ಮಾಡುವ ಮೂಲಕ ಭಕ್ತಾದಿಗಳ ಗಮನ ಸೆಳೆಯಲಾಯಿತು. ಅನ್ನ ಸಂತರ್ಪಣೆ ಹಾಗೂ ಸಂಜೆ ದೀಪೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಿವಪುರ: ಶಿವಪುರದಲ್ಲಿ ಶ್ರೀ ರಾಮನಿಗೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಭಕ್ತಾದಿಗಳಿಗೆ ಎಲ್‌ಇಡಿ ಸ್ಕ್ರೀನ್ ಮೂಲಕ ಅಯೋಧ್ಯೆಯಲ್ಲಿ ನಡೆದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನೇರ ಪ್ರಸಾರವನ್ನು ನೋಡಲು ವ್ಯವಸ್ಥೆಯನ್ನು ಮಾಡಲಾಗಿತ್ತು.

ಭಕ್ತಾದಿಗಳಿಗೆ ಮೈಸೂರುಪಾಕ್ ವಿತರಿಸಲಾಯಿತು ಹಾಗೂ ಶ್ರೀ ರಾಮನ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅನ್ನ ಸಂತರ್ಪಣೆ, ದೀಪೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

ಹೆಮ್ಮನಹಳ್ಳಿ: ತಾಲೂಕಿನ ಹೆಮ್ಮನಹಳ್ಳಿ ಗ್ರಾಮದಲ್ಲಿ ಹಿಂದು ಸೇನೆ ಹಾಗೂ ಗ್ರಾಮಸ್ಥರ ಪರವಾಗಿ ರಾಮೋತ್ಸವವನ್ನು ಆಚರಿಸಲಾಯಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಪಟ್ಟಣದ ಗುಜರಾತಿ ಪಟೇಲ್ ಸಮುದಾಯದ ವತಿಯಿಂದ ಶಿವಪುರ ಸೋಮೇಶ್ವರ ಸಮುದಾಯ ಭವನದಲ್ಲಿ ಶ್ರೀ ರಾಮನಿಗೆ ವಿಶೇಷ ಪೂಜೆ ಸಲ್ಲಿಸುವ ಜತೆಗೆ ಶ್ರೀರಾಮ, ಲಕ್ಷ್ಮಣ ಹಾಗೂ ಸೀತೆಯ ವೇಷವನ್ನು ಹಾಕಿಕೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೂರಾರು ಮಹಿಳೆಯರು ಮೆರವಣಿಗೆ ಮಾಡುವ ಮೂಲಕ ಗಮನ ಸೆಳೆದರು.

ಮದ್ದೂರು: ಪಟ್ಟಣದ ಪೇಟೆಬೀದಿಯ (ರಾಮಮಂದಿರ ಪಾರ್ಕ್) ಉದ್ಯಾನವನದಲ್ಲಿರುವ ಶ್ರೀ ರಾಮನ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಮ್ಮಿಕೊಂಡು ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಪಟ್ಟಾಭಿರಾಮ ದೇಗುಲದಲ್ಲಿ ರಾಮೋತ್ಸವ ಅಂಗವಾಗಿ ವಿಶೇಷ ಪೂಜೆ ಹಮ್ಮಿಕೊಂಡು ಸಾವಿರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಎತ್ತಿನಗಾಡಿ, ಬೈಕ್‌ಗಳಲ್ಲಿ ಜಾಥಾ ಮಾಡುವ ಮೂಲಕ ಭಕ್ತಿ ಪ್ರದರ್ಶಿಸಲಾಯಿತು. ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಹೊಳೆ ಆಂಜನೇಯಸ್ವಾಮಿ, ಶ್ರೀ ಕಾಶಿ ವಿಶ್ವೇಶ್ವರಸ್ವಾಮಿ, ಶ್ರೀ ಉಗ್ರನರಸಿಂಹ ಸ್ವಾಮಿ ಸೇರಿದಂತೆ ತಾಲೂಕಿನ ಹಲವಾರು ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಂಡು ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿತರಣೆ ಮಾಡಲಾಯಿತು.



ಮದ್ದೂರು ಪಟ್ಟಣದಲ್ಲಿ ಗುಜರಾತಿ ಪಟೇಲ್ ಸಮುದಾಯ ವತಿಯಿಂದ ರಾಮೋತ್ಸವ ಆಚರಿಸಲಾಯಿತು.

ಮೇಲುಕೋಟೆಯಲ್ಲಿ ಪಟ್ಟಾಭಿರಾಮನಿಗೆ ವಿಶೇಷ ಪೂಜೆ

ಮೇಲುಕೋಟೆ, ಜ.22– ರಾಮಜನ್ಮಭೂಮಿ ಅಯೋಧ್ಯೆಯಲ್ಲಿ ಸೋಮವಾರ ಬಾಲರಾಮನ ಪ್ರಾಣಪ್ರತಿಷ್ಠಾಪನೆ ನಡೆದ ಹಿನ್ನೆಲೆಯಲ್ಲಿ ಮೇಲುಕೋಟೆ ಪುರಾತನ ಪಟ್ಟಾಭಿರಾಮನ ಸನ್ನಿಧಿಯಲ್ಲಿ ವಿಶೇಷ ಪೂಜಾಕೈಂಕರ್ಯಗಳು ವೈಭವದಿಂದ ನೆರವೇರಿದವು.

ಸೀತಾ, ಲಕ್ಷ್ಮಣ ಸಮೇತನಾದ ಶ್ರೀರಾಮಚಂದ್ರನಿಗೆ ಸೋಮವಾರ ಬೆಳಗ್ಗೆ ಎಣ್ಣೆಕಾಪ್ಪುಸೇವೆ 10 ಗಂಟೆಗೆ ಮಹಾಭಿಷೇಕ, ರಾಮತಾರಕ ಹೋಮ, 12 ಗಂಟೆಗೆ ಮಹಾಮಂಗಳಾರತಿ ಶಾತ್ತುಮೊರೆ. ನಂತರ ಸಾವಿರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ರಾತ್ರಿ ರಾಮನ ದೇಗುಲದಲ್ಲಿ ದೀಪೋತ್ಸವ ಸಹ ನೆರವೇರಿತು.

ಪಂಚಭಾಷಾ ಕವಿತಾವಲ್ಲಭ ವಿದ್ವಾನ್ ಅರೆಯರ್ ಶ್ರೀರಾಮಶರ್ಮ ನೇತೃತ್ವದಲ್ಲಿ ಅರ್ಚಕ ಅರೆಯರ್ ಪಾರ್ಥಸಾರಥಿ ಕೈಂಕರ್ಯ ನೆರವೇರಿಸಿದರು. ರಾಮಪ್ರಿಯ ಭಟ್ಟರ್ ಅಭಿಷೇಕ ನೆರವೇರಿಸಿದರು.

ಶ್ರೀರಾಮ ಬಾಣಬಿಟ್ಟು ಸೀತಾಮಾತೆಗೆ ನೀರು ತರಿಸಿದ ಧನುಷ್ಕೋಟಿ ಕಲ್ಯಾಣಿಯ ಬಳಿಯ ಸೀತಾರಣ್ಯ ಹಾಗೂ ಒಕ್ಕಲಿಗರ ಬೀದಿಯಲ್ಲಿರುವ ರಾಮಮಂದಿರದಲ್ಲೂ ವಿಶೇಷ ಪೂಜಾಕೈಂಕರ್ಯಗಳು ನೆರವೇರಿದವು.

ಬನ್ನಿಮಂಟಪದ ಬಳಿಯಿರುವ ಕಾರ್ಯಸಿದ್ಧಿ ವೀರಾಂಜನೇಯಸ್ವಾಮಿ ದೇವಾಲಯ ಹಾಗೂ ಪೇಟೆ ಆಂಜನೇಯಸ್ವಾಮಿ ದೇವಾಲಯಗಳಲ್ಲೂ ಸಹ



ಅಭಿಷೇಕ ಹಾಗೂ ವಿಶೇಷ ಪೂಜೆಗಳು ನಡೆದವು ನೂರಾರು ಭಕ್ತರಿಗೆ ಪಾನಕ, ಕೋಸಂಬರಿ ವಿತರಿಸಲಾಯಿತು.

ಕಿಕ್ಕೇರಿಯಲ್ಲಿ ಬಾಲರಾಮನಿಗೆ ಶಂಖನಾದದ ಜೈಕಾರ

ಕಿಕ್ಕೇರಿ, ಜ.22– ಹೋಬಳಿಯಾದ್ಯಂತ ಜಾತಿ ಮತ ಮರೆತು ಕೇಸರಿ ವಸ್ತ್ರ, ತಿಲಕ ಧರಿಸಿ ರಾಮದೇವರಿಗೆ ಜೈಕಾರ ಹಾಕಿ, ಪೂಜಿಸಿ ಸಂಭ್ರಮಿಸಿದರು. ಮನೆ ಮನೆಗಳಲ್ಲಿ ಶಂಖ ಊದಿ, ಜಾಗಟೆ ಬಡಿದು ರಾಮಭಜನೆ ಮಾಡುತ್ತಾ ಭಕ್ತಿ ಮೆರೆದರು. ಹಿರಿಯರು ರಾಮ... ಜಯರಾಮ... ಎಂದು ಭಜನೆ ಮಾಡಿದರೆ, ಯುವಕರು ಜೈ ಶ್ರೀರಾಮ್ ಎಂದು ಕೇಸರಿ ವಸ್ತ್ರ, ತಿಲಕ ಧಾರಣೆ ಮಾಡಿಕೊಂಡು ಭಕ್ತಿ ಮೆರೆದರು.

ಪಟ್ಟಣದ ಚನ್ನನಕೊಪ್ಪಲುವಿನಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿದರೆ, ಬಹುತೇಕ ಎಲ್ಲ ಗ್ರಾಮಗಳಲ್ಲಿಯೂ ತಳಿರು ತೋರಣ, ಕೇಸರಿ ಬಾವುಟ ಕಟ್ಟಿ, ಪ್ರತಿ ಮನೆಗಳ ಮುಂದೆ ವರ್ಣರಂಜಿತ ರಂಗೋಲಿ ಬಿಡಿಸಿ, ರಾಮದೇವರ ಚಿತ್ರ ಬಿಡಿಸಿ ಖುಷಿಪಟ್ಟರು.

ಪಟ್ಟಣದ ಬ್ರಹ್ಮೇಶ್ವರ ದೇಗುಲದಲ್ಲಿ ರಾಮತಾರಕ ಹೋಮ ನಡೆಯಿತು. ಕೆಂಪೇಗೌಡ ಒಕ್ಕಲಿಗ ರಾಮಮಂದಿರ, ಕುರುಹಿನಶೆಟ್ಟಿ ಅಂಗಡಿಬೀದಿ, ಹಳೆ ಭಜನೆಮನೆ, ಒಕ್ಕಲಿಗ ರಾಮಮಂದಿರ, ಮಾದಾಪುರ ವಿಪ್ರ ರಾಮಮಂದಿರ, ಕೋಟಹಳ್ಳಿ, ಮಂದಗೆರೆ, ಸಾಸಲು, ಅಂಕನಹಳ್ಳಿ, ರಾಮನಹಳ್ಳಿ, ಕೋಟಹಳ್ಳಿ, ಗೋವಿಂದನಹಳ್ಳಿ, ಗೂಡೆಹೊಸಹಳ್ಳಿ, ಕಡಹೆಮ್ಮಿಗೆ, ಸೊಳ್ಳೇಪುರ, ಡಾಣನಹಳ್ಳಿ ಗ್ರಾಮದ ಹನುಮ ದೇವರು, ಮತ್ತಿತರ ದೇಗುಲಗಳಲ್ಲಿ ರಾಮದೇವರ ಪ್ರತಿಷ್ಠಾಪನೆ ವೇಳೆ ವಿಶೇಷ ಪೂಜೆ ಸಲ್ಲಿಸಲಾಯಿತು. ಪ್ರತಿ ಗ್ರಾಮಗಳಲ್ಲಿ ಅನ್ನದಾಸೋಹ, ನೀರು ಮಜ್ಜಿಗೆ, ಪಾನಕ, ಪುಳಿಯೋಗರೆ, ಕೋಸಂಬರಿ, ರಸಾಯನ, ಸಿಹಿ ಬೂಂದಿ, ಲಡ್ಡು ಮತ್ತಿತರ ಪ್ರಸಾದಗಳನ್ನು ವಿತರಿಸಲಾಯಿತು.

ಬಾಲರಾಮ ಶಿಲ್ಪಿ ಕುಟುಂಬ, ಶಿಲೆ ನೀಡಿದ ಹಾರೋಹಳ್ಳಿ ರಾಮದಾಸರ ಅಭಿನಂದಿಸಿದ ಮಾಜಿ ಸಚಿವ ರಾಮದಾಸ್

ಮೈಸೂರು, ಜ.22(ಎಂಕೆ)– ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡ 'ಬಾಲರಾಮ' ಮೂರ್ತಿಯನ್ನು ರೂಪುಗೊಳಿಸಿದ ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಕುಟುಂಬಸ್ಥರು ಹಾಗೂ ವಿಗ್ರಹಕ್ಕೆ ಶಿಲೆ ನೀಡಿದ ಹಾರೋಹಳ್ಳಿ ರಾಮದಾಸ ಅವರನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಅತ್ಯಂತ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರಿನ ವಿದ್ಯಾರಣ್ಯಪುರಂನ 2ನೇ ಮುಖ್ಯರಸ್ತೆಯಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಎದುರಿನ ಉದ್ಯಾನವನದಲ್ಲಿ ಸೋಮವಾರ ಆಯೋಜಿಸಿದ್ದ ಬಾಲರಾಮ ದರ್ಶನ ಹಾಗೂ ಅಭಿನಂದನಾ ಸಮಾರಂಭದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಿ ಯೋಗಿರಾಜ್, ಪತ್ನಿ ವಿಜೇತ ಅರುಣ್ ಹಾಗೂ ಬಾಲರಾಮ ವಿಗ್ರಹಕ್ಕೆ ಶಿಲೆ ನೀಡಿದ ಹಾರೋಹಳ್ಳಿ ರಾಮದಾಸ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.



ಮಾಜಿ ಸಚಿವ ಎಸ್.ಎ.ರಾಮದಾಸ್, ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಕುಟುಂಬಸ್ಥರು ಹಾಗೂ ಅಯೋಧ್ಯೆ ಬಾಲರಾಮ ವಿಗ್ರಹಕ್ಕೆ ಶಿಲೆ ನೀಡಿದ ಹಾರೋಹಳ್ಳಿ ರಾಮದಾಸ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಇದಕ್ಕೂ ಮುನ್ನ ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿ, ಇಂದು ನಮ್ಮೆಲ್ಲರ ಕನಸು ಸಾಕಾರಗೊಂಡಿದೆ ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆ ನೆರವೇರಿದ್ದು, ನಮ್ಮನ್ನು ಸಹ ಅಯೋಧ್ಯೆಗೆ ಕರೆಸಿಕೊಳ್ಳುವಂತೆ ಬಾಲರಾಮನಲ್ಲಿ ಸಂಕಲ್ಪ ಮಾಡಿಕೊಳ್ಳುವಂತೆ ಕೋರಿದರು. ಶ್ರೀರಾಮನಿಗೂ ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ ಎನ್ನುವುದಕ್ಕೆ ಅಯೋಧ್ಯೆ ಶ್ರೀರಾಮಮಂದಿರ ಪ್ರತ್ಯಕ್ಷ ಸಾಕ್ಷಿಯಾಗಿದೆ ಎಂದರು.


ನಮ್ಮ ನಡುವೆ ಇದ್ದಂತಹ ಶಿಲ್ಪಿ ಅರುಣ್ ಯೋಗಿರಾಜ್, ವಿಶ್ವವೇ ಮೆಚ್ಚುವಂತಹ ಕಾರ್ಯ ಮಾಡಿದ್ದಾರೆ. ಅವರ ಕುಟುಂಬಕ್ಕೆ ನಾವೆಲ್ಲರೂ ಋಣಿಯಾಗಿರುತ್ತೇವೆ. ಇದಕ್ಕೂ ಮುನ್ನ ಆದಿ ಶಂಕರಾಚಾರ್ಯರು, ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ರೂಪಿಸುವ ಮೂಲಕ ಎಲ್ಲರ ಗೆದ್ದಿದ್ದಾರೆ ಎಂದು ಶ್ಲಾಘಿಸಿದರಲ್ಲದೆ 'ಬಾಲರಾಮ' ಮೂರ್ತಿ ರೂಪುಗೊಳ್ಳಲು ಶಿಲೆ ನೀಡಿದ ಹಾರೋಹಳ್ಳಿ ರಾಮದಾಸ ಅವರ ಭಕ್ತಿ ಆದರ್ಶನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧಿಕಾರ, ಸಂಪತ್ತು ಇಲ್ಲವೆಂದು ಚಿಂತೆ ಮಾಡಬೇಡಿ. ಮನಸ್ಸಿನಲ್ಲಿ ಪರಮಾತ್ಮ 'ಬಾಲರಾಮ'ನ ಸ್ಮರಣೆ ಮಾಡಿ. ನಿಮ್ಮೆಲ್ಲರ ಕಷ್ಟಗಳು ದೂರಾಗಲಿವೆ ಎಂದರು. ನಂತರ ವೇದಿಕೆಯಲ್ಲಿ ಇರಿಸಲಾಗಿದ್ದ 'ಬಾಲರಾಮ'ನ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗ ಮಾಡಲಾಯಿತು.



ತಿ.ನರಸೀಪುರ ವರುಣ ವಿಧಾನಸಭಾ ಕ್ಷೇತ್ರದ ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ ಅವರ ಬೆಂಬಲಿಗರು ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ ಅವರನ್ನು ಸನ್ಮಾನಿಸಿದರು. ಜಿಲ್ಲಾ ಕಾರ್ಯದರ್ಶಿ ವೆಂಕಟರಮಣಶೆಟ್ಟಿ ಡಾ. ಮಲ್ಲಿಕಾರ್ಜುನ ಸ್ವಾಮಿ ಇದ್ದಾರೆ.

ಬಜೆಟ್: 14 ಇಲಾಖೆಗಳ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು: ಮುಂದಿನ ಆರ್ಥಿಕ ವರ್ಷದ ಬಜೆಟ್ ತಯಾರಿಯನ್ನು ಚುರುಕುಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸೋಮವಾರ 14 ಇಲಾಖೆಗಳ ಅಧಿಕಾರಿಗಳ ಜತೆ ಸಭೆ ನಡೆಸಿದರು.

ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಕ್ರೀಡೆ ಮತ್ತು ಯುವ ಸಬಲೀಕರಣ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ, ಕೃಷಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಸತಿ ಇಲಾಖೆಗಳೊಂದಿಗೆ ಸರಣಿ ಸಭೆ ನಡೆಸಿದ ಮುಖ್ಯಮಂತ್ರಿ, ಬಜೆಟ್ ಬೇಡಿಕೆಗಳ ಪ್ರಸ್ತಾವಗಳನ್ನು ಸ್ವೀಕರಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದ ಮುಸ್ಲಿಂ ಜನಪ್ರತಿನಿಧಿಗಳ ನಿಯೋಗ, ಅಲ್ಪಸಂಖ್ಯಾತರಿಗೆ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸುವಂತೆ ಮನವಿ ಸಲ್ಲಿಸಿತು.

ಎರಡು ದಿನದ ಹಿಂದೆ ನಾಪತ್ತೆಯಾಗಿದ್ದ ಖಾಸಗಿ ಶಾಲೆ ಶಿಕ್ಷಕಿ ಶವ ಪತ್ತೆ

- ಮಣ್ಣಿನಲ್ಲಿ ಹೂತಿದ್ದ ಸ್ಥಿತಿಯಲ್ಲಿ ಕುಟುಂಬ ಸದಸ್ಯರ ಕಣ್ಣಿಗೆ ಬಿತ್ತು
- ಮೇಲುಕೋಟೆ ಯೋಗಾನರಸಿಂಹಸ್ವಾಮಿ ಬೆಟ್ಟದ ತಪ್ಪಲಲ್ಲಿ ಘಟನೆ
- ಕೆಲವರು ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಶಿಕ್ಷಕಿ ತಡೆದು ಎಳೆದಾಡುತ್ತಿರುವ ದೃಶ್ಯ ಸೆರೆ ಹಿಡಿದಿದ್ದ ಪ್ರವಾಸಿಗ: ಪೊಲೀಸರ ವಶಕ್ಕೆ ವಿಡಿಯೋ

ಮೇಲುಕೋಟೆ, ಜ.22– ಎರಡು ದಿನದ ಹಿಂದೆ ನಾಪತ್ತೆಯಾಗಿದ್ದ ಖಾಸಗಿ ಶಾಲೆ ಶಿಕ್ಷಕಿಯ ಶವ ಮಣ್ಣಿನಲ್ಲಿ ಹೂತಿದ್ದ ಸ್ಥಿತಿಯಲ್ಲಿ ಮೇಲುಕೋಟೆಯ ಯೋಗಾನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಪತ್ತೆಯಾಗಿದ್ದು, ಇವರನ್ನು ದುಷ್ಕರ್ಮಿಗಳು ಹತ್ಯೆಗೈದು ಹೂತು ಹಾಕಿದ್ದಾರೆ ಎಂದು ಶಂಕಿಸಿರುವ ಪೊಲೀಸರು, ನಾಪತ್ತೆ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಮಾಣಿಕ್ಯನಹಳ್ಳಿ ಗ್ರಾಮದ ಸಮಾಜ ಸೇವಕ ವೆಂಕಟೇಶ್ ಅವರ ಪುತ್ರಿ ದೀಪಿಕಾ (28) ಹತ್ಯೆಗೀಡಾದವರಾಗಿದ್ದು, ಅದೇ ಗ್ರಾಮದ ಲೋಕೇಶ್ ಎಂಬುವರನ್ನು ವಿವಾಹವಾಗಿದ್ದ ಈಕೆ ಮೇಲುಕೋಟೆಯ ಎಸ್‌ಇಟಿ ಪಬ್ಲಿಕ್ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು.

ಪ್ರತಿದಿನ ಇವರು ಮಾಣಿಕ್ಯನಹಳ್ಳಿಯಿಂದ ಮೇಲುಕೋಟೆಗೆ ಡಿಯೋ ಸ್ಕೂಟರ್‌ನಲ್ಲಿ ಬಂದು ಹೋಗುತ್ತಿದ್ದರು. ಶನಿವಾರ ಮಧ್ಯಾಹ್ನ ಶಾಲೆ ಮುಗಿದ ನಂತರ ತಮ್ಮ ಸ್ಕೂಟರ್‌ನಲ್ಲಿ ತೆರಳಿದ ಅವರು ಮನೆ ತಲುಪಿರಲಿಲ್ಲ. ದೀಪಿಕಾ ಅವರು ಯಾವುದೋ ಫೋನ್ ಕರೆ ಬಂದ ನಂತರ ಶಾಲೆಯಿಂದ ತೆರಳಿದರು ಎಂದು ಹೇಳಲಾಗುತ್ತಿದೆ. ಅದೇ ವೇಳೆ ಯೋಗಾನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ದೀಪಿಕಾ ಅವರ ಸ್ಕೂಟರ್ ಪತ್ತೆಯಾಗಿದ್ದು, ಕೆಲ ಗಂಟೆಗಳ ಕಾಲ ಸುತ್ತಮುತ್ತ ಹುಡುಕಾಡಿದರೂ ಅವರು ಪತ್ತೆಯಾಗದ ಕಾರಣ ತಂದೆ ವೆಂಕಟೇಶ್ ಅವರು ಮೇಲುಕೋಟೆ ಠಾಣೆಯಲ್ಲಿ ತಮ್ಮ ಮಗಳು ನಾಪತ್ತೆಯಾಗಿರುವ ಬಗ್ಗೆ ಶನಿವಾರದಂದೇ ದೂರು ದಾಖಲಿಸಿದ್ದರು.



ಮೃತೆ ದೀಪಿಕಾ



ಶವ ಪತ್ತೆಯಾದ ಜಾಗದಲ್ಲಿ ಪರಿಶೀಲನೆ ನಡೆಸುತ್ತಿರುವ ಪೊಲೀಸರು

ದೀಪಿಕಾ ಅವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿರಬಹುದು ಎಂದು ಶಂಕಿಸಿದ್ದ ಅವರ ಸಂಬಂಧಿಕರು ಸ್ಕೂಟರ್ ದೊರೆತ ಸ್ಥಳದ ಸುತ್ತಮುತ್ತ ಅಂದಿನಿಂದಲೇ ಹುಡುಕಾಟ ನಡೆಸುತ್ತಿದ್ದರು. ಈ ನಡುವೆ ಸ್ಕೂಟರ್ ದೊರೆತ ಸ್ಥಳದಿಂದ ಸುಮಾರು 500 ಮೀಟರ್ ಅಂತರದಲ್ಲಿ ಮಣ್ಣಿನ ಮೇಲೆ ನೊಣಗಳು ಮುತ್ತಿರುವುದನ್ನು ಕಂಡ ದೀಪಿಕಾ ಸಂಬಂಧಿಕರು ಆ ಸ್ಥಳದಲ್ಲಿ ಮಣ್ಣನ್ನು ಕೈಯಿಂದ ಅಗೆದಾಗ ದೀಪಿಕಾ ಶವ ಪತ್ತೆಯಾಗಿದೆ.

ಇವರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಮೇಲುಕೋಟೆ ಠಾಣೆ ಇನ್ಸ್‌ಪೆಕ್ಟರ್ ಸಿದ್ದಪ್ಪ ನೇತೃತ್ವದ ಪೊಲೀಸರ ತಂಡ, ಪಾಂಡವಪುರ ಉಪವಿಭಾಗಾಧಿಕಾರಿ ನಂದೀಶ್ ಮತ್ತು ತಹಸೀಲ್ದಾರ್ ಶ್ರೇಯಸ್ ಸಮ್ಮುಖದಲ್ಲಿ ಶವವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಎನ್.ಯತೀಶ್, ಶ್ರೀರಂಗಪಟ್ಟಣ ಡಿವೈಎಸ್ಪಿ ಮುರಳಿ, ಮೇಲುಕೋಟೆ ಠಾಣೆ ಸಿಪಿಐ ಸಿದ್ದಪ್ಪ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದರು.

ವಿಡಿಯೋ ತುಣುಕು: ಶನಿವಾರ ಮಧ್ಯಾಹ್ನ ಶಿಕ್ಷಕಿ ದೀಪಿಕಾ ಅವರು ಯೋಗಾನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಅವರನ್ನು ಕೆಲವರು ಅಡ್ಡಗಟ್ಟಿ ಎಳೆದಾಡುತ್ತಿರುವುದನ್ನು ಬೆಟ್ಟದ ಮೇಲಿಂದ ಕಂಡ ಪ್ರವಾಸಿಗರೊಬ್ಬರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿ, ಅದನ್ನು ಪೊಲೀಸರಿಗೆ ತಲುಪಿಸಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ. ಕೆಲ ಮಾಹಿತಿಗಳಂತೆ ದೀಪಿಕಾ ಅವರನ್ನು ಮೂರರಿಂದ ನಾಲ್ಕು ಮಂದಿ ಸೇರಿ ಹತ್ಯೆಗೈದಿದ್ದಾರೆ ಎನ್ನಲಾಗಿದೆ. ಸದರಿ ಸ್ಥಳದಲ್ಲಿ ಅಸ್ವಾಭಾವಿಕವಾದ ಘಟನೆ ನಡೆಯುತ್ತಿದ್ದರಿಂದಲೇ ಪ್ರವಾಸಿಗರು ದೃಶ್ಯವನ್ನು ಮೊಬೈಲ್‌ನಲ್ಲಿ ವಿಡಿಯೋ ರೆಕಾರ್ಡ್ ಮಾಡಿ ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಹೇಳಲಾಗಿದೆ. ಪ್ರವಾಸಿಗರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಪೊಲೀಸರು ತೆರಳಿದಾಗ ದೀಪಿಕಾ ಅವರ ಸ್ಕೂಟರ್ ಪತ್ತೆಯಾಗಿದ್ದು, ಈ ಹಿನ್ನೆಲೆಯಲ್ಲಿಯೇ ಆಕೆಯ ತಂದೆ ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ ವಿಡಿಯೋ ತುಣುಕಿನಲ್ಲಿ ಕಂಡು ಬಂದ ದೃಶ್ಯಾವಳಿಗಳಿಂದ ಅನುಮಾನಗೊಂಡು ಆಕೆ ಹತ್ಯೆಗೀಡಾಗಿರಬಹುದು ಎಂಬ ಶಂಕೆಯಿಂದ ಸಂಬಂಧಿಕರು ಸುತ್ತಮುತ್ತಲ ಪ್ರದೇಶದಲ್ಲಿ ಶವಕ್ಕಾಗಿ ಹುಡುಕಾಡಿದರು ಎಂದು ತಿಳಿದು ಬಂದಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ದಪ್ಪ ಕೇವಲ 10 ಸೆಕೆಂಡ್‌ಗಳ ವಿಡಿಯೋ ಲಭ್ಯವಾಗಿದೆ. ಆದರೆ ಅದರಲ್ಲಿ ದೃಶ್ಯಗಳು ಅಸ್ಪಷ್ಟವಾಗಿದೆ ಎಂದು ತಿಳಿಸಿದರು.

ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಅರ್ಜಿ ಆಹ್ವಾನ

ಮೈಸೂರು.ಜ.22– ಕೃಷಿ ಇಲಾಖೆಯ ವತಿಯಿಂದ 2023–24ನೇ ಸಾಲಿನ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸುವಂತೆ ಹೈಟೆಕ್ ಹಾರ್ವೆಸ್ಟರ್ ಹಬ್‌ನ್ನು ಸ್ಥಾಪಿಸಲು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ವೈಯಕ್ತಿಕ ಫಲಾನುಭವಿ, ಸಂಘಸಂಸ್ಥೆಗಳು (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಹಾಗೂ ನೋಂದಾಯಿತ ಸಂಘ–ಸಂಸ್ಥೆಗಳು.) ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಂಬೈನ್ಡ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಕಡ್ಡಾಯವಾಗಿ ಕಂಬೈನ್ಡ್ ಹಾರ್ವೆಸ್ಟರ್, ಟ್ರಾಕ್ಟರ್ ಚಾಲಿತ ಬೇಲರ್ ಕಡ್ಡಾಯವಾಗಿದ್ದು, ಇತರೆ ಕೃಷಿ ಯಂತ್ರೋಪಕರಣಗಳನ್ನು ಹಬ್‌ನಲ್ಲಿ ಪಡೆಯಲು ಅವಕಾಶವಿರುತ್ತದೆ. ಸಹಾಯಧನವು "Credited Linked Back Ended Subsidy" ಮುಖಾಂತರ ಪಾವತಿಯಾಗುತ್ತದೆ ವೈಯಕ್ತಿಕ ಫಲಾನುಭವಿ (ಸಾಮಾನ್ಯ–ಶೇ.50 ರ ಸಹಾಯಧನ), ಸಂಘ–ಸಂಸ್ಥೆಗಳು (ಸಾಮಾನ್ಯ –ಶೇ.70ರ ಸಹಾಯಧನ), ವೈಯಕ್ತಿಕ ಫಲಾನುಭವಿ (ವಿಶೇಷ ಘಟಕ ಯೋಜನೆ– ಶೇ.70ರ ಸಹಾಯಧನ) ವೈಯಕ್ತಿಕ ಫಲಾನುಭವಿ (ಸಾಮಾನ್ಯ– 40.00 ಲಕ್ಷರೂ. ಗರಿಷ್ಟ ಸಹಾಯಧನ), ಸಂಘಸಂಸ್ಥೆಗಳು (ಸಾಮಾನ್ಯ– 50.00 ಲಕ್ಷರೂ. ಗರಿಷ್ಟ ಸಹಾಯಧನ) ಹಾಗೂ ವೈಯಕ್ತಿಕ ಫಲಾನುಭವಿ (ವಿಶೇಷ ಘಟಕ ಯೋಜನೆ– 50.00 ಲಕ್ಷರೂ. ಗರಿಷ್ಟ ಸಹಾಯಧನ) ಪಡೆಯಲು ಸದರಿ ಯೋಜನೆಯಡಿ ಅವಕಾಶವಿರುತದೆ. ಆಸಕ್ತರು ಹತ್ತಿರದ ರೈತ ಸಂಪರ್ಕ ಕೇಂದ್ರ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಭೇಟಿ ನೀಡಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೆನ್ನೇಗೌಡ ನಿಧನ



ಮಂಡ್ಯ, ಜ.22– ಮಜ್ಜಿಗೆಪುರ ಗ್ರಾಮದ ನಿವಾಸಿ ನಿವೃತ್ತ ಮುಖ್ಯಶಿಕ್ಷಕ ಹಾಗೂ ಕನ್ನಡ ವಿದ್ವಾಂಸರಾಗಿದ್ದ ಚೆನ್ನೇಗೌಡ (92) ಸೋಮವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ. ಮೃತರು ಕೆಆರ್. ಸಾಗರ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕರಾಗಿದ್ದರು. ಈ ಭಾಗದಲ್ಲಿ ಎಂ.ಕೆ.ಸಿ ಎಂದು ಪ್ರಸಿದ್ಧರಾಗಿದ್ದು, ಕನ್ನಡ ಭಾಷೆ ವಿದ್ವಾಂಸರೆಂದು ಪ್ರಸಿದ್ಧಿಯಾಗಿದ್ದರು. ಮೃತರು ಪತ್ನಿ ಜಯಲಕ್ಷಮ್ಮ, ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಶಿಷ್ಯ ವೃಂದ, ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಜ್ಜಿಗೆಪುರ ಗ್ರಾಮ ಮೃತರ ತೋಟದಲ್ಲಿ ನಡೆಯಲಿದೆ.

ಅಯೋಧ್ಯೆ ಶ್ರೀ ರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ

ಮೈಸೂರು ರಾಮಮಯ; ದೀಪ ಬೆಳಗಿಸಿ ಶ್ರೀರಾಮಚಂದ್ರನ ಆರಾಧನೆ

● ಲಕ್ಷಾಂತರ ದೀಪಗಳ ಬೆಳಕಲ್ಲಿ ರಾಮನ ಸ್ಮರಣೆ ● ವೀರನಗೆರೆ ಶ್ರೀ ವೀರಗಣಪತಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ



ವೀರನಗೆರೆ ವೀರಗಣಪತಿ ದೇವಸ್ಥಾನದ ಎದುರು ಲಕ್ಷ ದೀಪೋತ್ಸವಕ್ಕೆ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ ದೀಪ ಬೆಳಗಿಸಿ ಚಾಲನೆ ನೀಡಿದರು.



ಅಯೋಧ್ಯೆ ಶ್ರೀರಾಮ ಮಂದಿರದ ಮಾದರಿ



ದೀಪಗಳಲ್ಲಿ ಮೂಡಿರುವ ಜೈ ಶ್ರೀರಾಮ್

ಮೈಸೂರು,ಜ.22(ಪಿಎಂ)– ಅಯೋಧ್ಯೆ ಶ್ರೀ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಸೋಮವಾರ ಇಡೀ ಮೈಸೂರು ನಗರ ರಾಮಮಯಗೊಂಡಿತ್ತು. ಬೆಳಗ್ಗೆಯಿಂದಲೇ ರಾಮನ ಕಟೌಟ್‌ಗಳು ರಸ್ತೆ-ವೃತ್ತಗಳಲ್ಲಿ ರಾರಾಜಿಸಿದವು. ಸಂಜೆಯಾಗುತ್ತಿದ್ದಂತೆ ದೀಪ ಬೆಳಗಿಸಿ ಶ್ರೀರಾಮ ಚಂದ್ರನ ಆರಾಧನೆ ಮಾಡಲಾಯಿತು.

ಮೈಸೂರಿನ ರಸ್ತೆ, ವೃತ್ತ, ಮಂದಿರ, ಗುಡಿ ಗೋಪುರ, ಮನೆ-ಮಳಿಗೆಗಳಲ್ಲೂ ಬೆಳಗಿದ ಸಾಲು ಸಾಲು ದೀಪಗಳು ರಾಮನಲ್ಲಿ ಸಮಸ್ತ ಹಿಂದೂ ಸಮಾಜ ಹೊಂದಿರುವ ಭಕ್ತಿಭಾವ ಅನಾವರಣಗೊಳಿಸಿತು. ನಗರದ ದೇವಾಲಯಗಳು, ರಾಮ ಮಂದಿರಗಳು ರಾಮಧ್ವಜ, ಕೇಸರಿ ಬಾವುಟ ಹಾಗೂ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಕಂಗೊಳಿಸಿದವು.

ವೀರನಗೆರೆಯ ಅಶೋಕ ರಸ್ತೆಯ ಶ್ರೀ ವೀರಗಣಪತಿ ದೇವಸ್ಥಾನದ ಶ್ರೀ ರಾಮ ಜ್ಯೋತಿ ಸೇವಾ ಸಮಿತಿ ವತಿಯಿಂದ ದೇವಸ್ಥಾನದ ಎದುರು ಲಕ್ಷ ದೀಪೋತ್ಸವದ ಮೂಲಕ ಸೀತಾವಲ್ಲಭನಿಗೆ ಭಕ್ತಿ ಸಮರ್ಪಿಸಲಾಯಿತು. ಅಯೋಧ್ಯೆ ಬಾಲರಾಮ ಮೂರ್ತಿಯ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ ದೀಪ ಬೆಳಕಿಸುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಿದರು. ನಂತರ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಲಕ್ಷಾಂತರ ದೀಪಗಳನ್ನು ಹಚ್ಚುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು. ಇದೇ ವೇಳೆ ಅರುಣ್ ಯೋಗಿರಾಜ್ ಅವರ ಪತ್ನಿ ವಿಜೇತ ಅವರೂ ದೀಪಗಳನ್ನು ಹಚ್ಚಿದರು. ಇದಕ್ಕೂ ಮುನ್ನ ಅಯೋಧ್ಯೆ ಬಾಲರಾಮನ ಮೂರ್ತಿಯ ಶಿಲೆ ದೊರೆತ ಜಮೀನಿನ ಮಾಲೀಕ ರಾಮದಾಸ್ ಹಾಗೂ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ ಅವರನ್ನು ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಅತಿಥಿಯಾಗಿ ಪಾಲ್ಗೊಂಡಿದ್ದ 'ಮೈಸೂರು ಮಿತ್ರ' ಅಂಕಣಕಾರರೂ ಆದ ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಮಾತನಾಡಿ, ಈ ದಿನ ನಮ್ಮ ದೇಶದ ಇತಿಹಾಸದಲ್ಲಿ ಅತ್ಯಂತ ಮುಖ್ಯ ದಿನ. 500 ವರ್ಷಗಳು ಕಾದಿದ್ದ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಇಂದು ನೆರವೇರಿದೆ ಎಂದು ಸಂತಸ ವ್ಯಕ್ತಪಡಿಸಿದರು. ಅಯೋಧ್ಯೆಯ ಇಂದಿನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರೂ ಭಾಗವಹಿಸಿದ್ದರು. ಇಡೀ ದೇಶ ಇಂದು ಸಂಭ್ರಮದಲ್ಲಿದೆ. ದೇಶದ ಪ್ರತಿಯೊಂದು ಊರಿನ ಬೀದಿ ಬೀದಿಗಳಲ್ಲಿ ರಾಮನ ಆರಾಧನೆ ನಡೆಯುತ್ತಿದೆ. ಇದು ಇಡೀ ದೇಶ ಒಂದಾಗುವ ಸಂದರ್ಭ. ಭಾರತ ಇಂದು ಮತ್ತೆ ವಿಶ್ವಗುರು ಸ್ಥಾನಕ್ಕೇರುವ ಹಂತದತ್ತ ಸಾಗುತ್ತಿದೆ. ಅಯೋಧ್ಯೆ ಶ್ರೀರಾಮ ಮಂದಿರ ನಮ್ಮ ಹೆಮ್ಮೆ ಎಂದು ಹೇಳಿದರು. ಇದಕ್ಕೂ ಮುನ್ನ ದೇವಸ್ಥಾನದಲ್ಲಿ ರಾಮ ತಾರಕ ಹೋಮ ಮತ್ತು ಗಣಪತಿ ಹೋಮ ನೆರವೇರಿಸಲಾಯಿತು. ದೇವಸ್ಥಾನದ ಪ್ರಧಾನ ಅರ್ಚಕ ಪ್ರಹ್ಲಾದ ರಾವ್ ಸೇರಿದಂತೆ ವೀರನಗೆರೆಯ ಮುಖಂಡರು ಹಾಗೂ ಸಾರ್ವಜನಿಕರು ಹಾಜರಿದ್ದರು.

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀರಾಮ ಜ್ಯೋತಿ ದೀಪೋತ್ಸವ

ಮೈಸೂರು,ಜ.22(ಪಿಎಂ)– ಮೈಸೂರಿನ ಅಶೋಕ ರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಸೋಮವಾರ ಸಂಜೆ ಶ್ರೀರಾಮ ಜ್ಯೋತಿ ದೀಪೋತ್ಸವ ಆಚರಿಸಲಾಯಿತು. ದೇವಸ್ಥಾನದ ಆವರಣದಲ್ಲಿ ಸಾಲು ಸಾಲು ದೀಪಗಳನ್ನು ಹಚ್ಚುವ ಮೂಲಕ ಶ್ರೀರಾಮ ಚಂದ್ರನಿಗೆ ಭಕ್ತಿ ಸಮರ್ಪಿಸಲಾಯಿತು.

ಮೈಸೂರಿನ ಆರ್ಯ ವೈಶ್ಯ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ದೀಪಗಳನ್ನು ಬೆಳಗಿಸಿ ರಾಮನ ಸ್ಮರಣೆ ಮಾಡಲಾಯಿತು. ಇದೇ ವೇಳೆ 30ಕ್ಕೂ ಹೆಚ್ಚು ಮಕ್ಕಳು ಸಾಮೂಹಿಕ ವೇದ ಶ್ಲೋಕ ಪಠಣ ಮಾಡಿದರು. ಅಲ್ಲದೆ, ಬೆಳಗ್ಗೆ ಶ್ರೀರಾಮ ತಾರಕ ಹೋಮ ಹಾಗೂ ಪೂರ್ಣಾಹುತಿ ನೆರವೇರಿಸಲಾಯಿತು. ಜೊತೆಗೆ ಅಯೋಧ್ಯೆ ಶ್ರೀರಾಮ ದೇವರ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ನೇರ ಪ್ರಸಾರವನ್ನು ಎಲ್‌ಇಡಿ ಪರದೆ ಮೂಲಕ ಬಿತ್ತರಿಸಲಾಯಿತು. ದೇವಸ್ಥಾನದ ಅಧ್ಯಕ್ಷ ಎಸ್.ಕೆ.ದಿನೇಶ್, ಕಾರ್ಯದರ್ಶಿಗಳಾದ ಅಮರ್‌ನಾಥ್, ದಿನೇಶ್ ಬಾಬು ಸೇರಿದಂತೆ ನಿರ್ದೇಶಕರು ಹಾಗೂ ಸದಸ್ಯರು ಹಾಜರಿದ್ದರು.



ಅಶೋಕ ರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀರಾಮ ಜ್ಯೋತಿ ದೀಪೋತ್ಸವ ಆಚರಿಸಲಾಯಿತು.

ದೀಪಗಳ ಬೆಳಕಲ್ಲಿ ಕಂಗೊಳಿಸಿದ 'ಜೈ ಶ್ರೀರಾಮ್' ಅಕ್ಷರ ರೂಪ



ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸೋಮವಾರ ಸಂಜೆ ಶ್ರೀರಾಮ ಜ್ಯೋತಿ ದೀಪೋತ್ಸವ ಹಮ್ಮಿಕೊಳ್ಳಲಾಗಿತ್ತು.

ಮೈಸೂರು,ಜ.22(ಪಿಎಂ)– 'ಜೈ ಶ್ರೀರಾಮ್' ಅಕ್ಷರ ರೂಪವನ್ನು ದೀಪಗಳ ಸಾಲಿನಲ್ಲಿ ಮೂಡಿಸಿ ವಿಶೇಷ ರೀತಿಯಲ್ಲಿ ಶ್ರೀರಾಮಚಂದ್ರನ ಸ್ಮರಣೆ ಮಾಡಲಾಯಿತು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸೋಮವಾರ ಸಂಜೆ ಮೈಸೂರು ಹನುಮಂತೋತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಶ್ರೀರಾಮ ಜ್ಯೋತಿ ದೀಪೋತ್ಸವದಲ್ಲಿ ಇಂತಹ ವಿಶಿಷ್ಟತೆ ಮೂಡಿಬಂದಿತ್ತು. ಅಲ್ಲದೆ, ಇದೇ ರೀತಿಯಲ್ಲಿ ಓಂಕಾರವೂ ಅನಾವರಣಗೊಂಡಿತ್ತು. ಜೊತೆಗೆ ಶ್ರೀರಾಮ, ಸೀತೆ ಹಾಗೂ ಆಂಜನೇಯಸ್ವಾಮಿ ಚಿತ್ರಗಳು ರಂಗೋಲಿ ಮಾದರಿಯಲ್ಲಿ ಮೂಡಿ ಬಂದು ದೀಪಗಳ ಹಿನ್ನೆಲೆಯೊಂದಿಗೆ ಕಂಗೊಳಿಸಿದವು.

ಅಯೋಧ್ಯೆ ಶ್ರೀ ರಾಮಮಂದಿರ ಮಾದರಿ: ಇದರೊಂದಿಗೆ ಇಲ್ಲಿ ಪ್ರದರ್ಶನಕ್ಕಿಟ್ಟಿದ್ದ ಅಯೋಧ್ಯೆ ಶ್ರೀ ರಾಮಮಂದಿರದ ಮಾದರಿ ನೆರೆದಿದ್ದ ಅಪಾರ ಸಂಖ್ಯೆಯ ಭಕ್ತರ ಗಮನ ಸೆಳೆಯಿತು. ಪ್ರತಿಯೊಬ್ಬರು ಅದರೊಂದಿಗೆ ತಮ್ಮ ಮೊಬೈಲ್‌ನಲ್ಲಿ ಫೋಟೋ ತೆಗೆದುಕೊಂಡು ಸಂಭ್ರಮಿಸಿದರು. ಥರ್ಮೋಕೋಲ್‌ನಲ್ಲಿ ಸಿದ್ಧಪಡಿಸಿರುವ ಈ ಅಯೋಧ್ಯೆ ರಾಮ ಮಂದಿರ ಮಾದರಿಯು 17 ಅಡಿ ಉದ್ದ, 8 ಅಡಿ ಅಗಲ ಹಾಗೂ 8.5 ಅಡಿ ಎತ್ತರದ ವಿಸ್ತೀರ್ಣ ಹೊಂದಿದೆ. ರಾಮ ಭಕ್ತರು ಈ ರಾಮಮಂದಿರ ಮಾದರಿಗೆ ಆಕರ್ಷಿತರಾದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಮೈಸೂರು ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅತಿಥಿಗಳಾಗಿ ಭಾಗವಹಿಸಿ ದೀಪಗಳನ್ನು ಬೆಳಗಿಸಿದರು. ಸಮಿತಿ ಸಂಚಾಲಕರಾದ ಸಂಯಜ್, ಜೀವನ್, ಮಾರ್ಬಳ್ಳಿ ಕುಮಾರ್, ಸಂತೋಷ್ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.



ಮಾಜಿ ಪ್ರಧಾನಿ ದೇವೇಗೌಡರ ಪರಿವಾರದೊಂದಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್.

ಬಾಲರಾಮನಿಗೆ 'ವಿಶ್ವ ದೀಪೋತ್ಸವ'ದ ಮೂಲಕ ಭಕ್ತಿ ಸಮರ್ಪಣೆ

ಮೈಸೂರು, ಜ.22(ಎಂಕೆ)–ದೀಪಗಳ ಅಮೃತ ಬೆಳಕಿನಲ್ಲಿ ಚಿಮ್ಮಿತು ಶ್ರೀರಾಮ ಭಕ್ತಿಧಾರೆ... ಸಹಸ್ರಾರು ಭಕ್ತರ ಮನಸ್ಸುಗಳಲ್ಲಿ ಒಂದೇ ಜಪ ರಾಮ ರಾಮ ಜೈ ಶ್ರೀ ರಾಮ...!


ಮೈಸೂರಿನ ವಿದ್ಯಾರಣ್ಯಪುರಂನ 2ನೇ ಮುಖ್ಯರಸ್ತೆಯಲ್ಲಿ ಶ್ರೀ ರಾಮ ಗೆಳೆಯರ ಬಳಗ ಸೋಮವಾರ ಸಂಜೆ ಏರ್ಪಡಿಸಿದ್ದ 'ವಿಶ್ವ ದೀಪೋತ್ಸವ'ದಲ್ಲಿ ಭಕ್ತಿ ದೀಪಗಳ ಸಾಲು ಅಯೋಧ್ಯೆ 'ಬಾಲರಾಮ'ನ ದಿವ್ಯ ದರ್ಶನ ನೀಡಿದವು. ಚಾಮುಂಡಿಪುರಂ ವೃತ್ತದಿಂದ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದವರೆಗಿನ ರಸ್ತೆಯುದ್ದಕ್ಕೂ ರಂಗೋಲಿಯಿಂದ ಸಿಂಗಾರಗೊಂಡು ಆಕರ್ಷಣೀಯವಾಗಿದ್ದ ಶ್ರೀ ರಾಮನ ಪಾದ, ವಾಹನ ನವಿಲು, ಧನಸ್ಸು ಕಲಾಕೃತಿಯಲ್ಲಿ ಸಾವಿರಾರು ದೀಪಗಳನ್ನು ಬೆಳಗಿಸಿ ಭಕ್ತಿಯ ಪರಾಕಾಷ್ಠೆ ಮೆರೆಯಲಾಯಿತು.

ವಿದ್ಯಾರಣ್ಯಪುರಂ ಸೇರಿದಂತೆ ನಗರದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು, ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೀಪಗಳನ್ನು ಬೆಳಗಿಸಿ ಶ್ರೀ ರಾಮನ ಜಪ ಮಾಡಿದರು. ಮಹಿಳೆಯರು, ಮಕ್ಕಳು ಸಂಭ್ರಮಿಸಿದರು. ಹಾಗೆಯೇ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸಿದ್ದ ಭಜನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ರಾಮನ ಭಕ್ತಿಯಲ್ಲಿ ಪರವಶರಾದರು. ಇದೇ ವೇಳೆ ದೀಪಗಳನ್ನು ಬೆಳಗಿಸಿ ದೀಪೋತ್ಸವಕ್ಕೆ ಚಾಲನೆ ನೀಡಿದ ಸಂಸದ ಪ್ರತಾಪ್ ಸಿಂಹ, ಜೈ ಶ್ರೀರಾಮ್ ಘೋಷಣೆಯೊಂದಿಗೆ ಅಯೋಧ್ಯೆ ಬಾಲರಾಮ ಪ್ರತಿಷ್ಠಾಪನೆಯ ಶುಭಾಷಯ ತಿಳಿಸಿದರು. ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಶ್ರೀ ರಾಮ ಗೆಳೆಯರ ಬಳಗದ ಸಂದೀಪ್, ಅಜಯ್ ಶಾಸ್ತ್ರಿ, ಬಿಜೆಪಿ ಹಾಗೂ ಸ್ಥಳೀಯ ಮುಖಂಡರು ದೀಪೋತ್ಸವದಲ್ಲಿ ಭಾಗವಹಿಸಿ ಶ್ರೀ ರಾಮನ ಮೇಲಿನ ಭಕ್ತಿ ತೋರಿದರು.

ಹಬ್ಬದ ಸಂಭ್ರಮ: ಅಯೋಧ್ಯೆ 'ಬಾಲರಾಮ'ನ ಪ್ರತಿಷ್ಠಾಪನೆ ಹಿನ್ನೆಲೆ ವಿದ್ಯಾರಣ್ಯಪುರಂನಲ್ಲಿ ಹಬ್ಬದ ವಾತಾರಣ ಸೃಷ್ಟಿಯಾಗಿತ್ತು.



ವಿದ್ಯಾರಣ್ಯಪುರಂನ 2ನೇ ಮುಖ್ಯರಸ್ತೆಯಲ್ಲಿ ಶ್ರೀ ರಾಮ ಗೆಳೆಯರ ಬಳಗ ಸೋಮವಾರ ಸಂಜೆ ಏರ್ಪಡಿಸಿದ್ದ 'ವಿಶ್ವ ದೀಪೋತ್ಸವ'ಕ್ಕೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ಸಂದೀಪ್ ಮತ್ತಿತರರಿದ್ದರು.



ಮೈಸೂರು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪತ್ನಿ ತೃಷಿಕಾ ಕುಮಾರಿ ಅಯೋಧ್ಯೆಯ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ದೇಶದ ನಟ-ನಟಿಯರ ಉಪಸ್ಥಿತಿ

ಅಯೋಧ್ಯೆ, ಜ. 22– ಅಯೋಧ್ಯೆಯ ರಾಮ ಮಂದಿರದಲ್ಲಿ ಇಂದು ನಡೆದ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಬಾಲಿವುಡ್ ನಟ ಬಿಗ್‌ಬಿ ಅಮಿತಾಬ್ ಬಚ್ಚನ್, ರಣಧೀರ್ ಕಪೂರ್, ಅಲಿಯಾ ಭಟ್, ಆಯುಷ್ಮಾನ್ ಕುರಾನಾ, ಕನ್ನಡದ ಹೆಸರಾಂತ ನಟ, ನಿರ್ದೇಶಕ ರಿಷಬ್ ಶೆಟ್ಟಿ, ತೆಲುಗು ನಟರಾದ ಚಿರಂಜೀವಿ, ರಾಮ್‌ಚರಣ್, ಪವನ್ ಕಲ್ಯಾಣ್, ಬಾಲಿವುಡ್ ಖ್ಯಾತ ನಟಿ ಕಂಗನಾ ರಣಾವತ್, ಕತ್ರಿನಾ ಕೈಫ್ ಸೇರಿದಂತೆ ಅನೇಕ ನಟ ನಟಿಯರು ಭಾಗವಹಿಸಿದ್ದರು. ಕ್ರೀಡಾ ತಾರೆ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ವೆಂಕಟೇಶ್ ಪ್ರಸಾದ್, ಆರ್.ಅಶ್ವಿನ್, ಸೈನಾ ನೆಹ್ವಾಲ್ ಸೇರಿದಂತೆ ಅನೇಕರು ಅಯೋಧ್ಯೆಗೆ ಆಗಮಿಸಿದ್ದು, ಪ್ರಾಣಪ್ರತಿಷ್ಠಾಪನಾ ಸಮಾರಂಭಕ್ಕೆ ಸಾಕ್ಷಿಯಾಗಲಿದ್ದಾರೆ.

ಮೈಸೂರು ಜಿಲ್ಲೆ ಪರಿಷ್ಕೃತ ಮತದಾರರ ಪಟ್ಟಿ ಪ್ರಕಟ

● ಸುಮಾರು 12 ಸಾವಿರ ಮತದಾರ ಸಂಖ್ಯೆ ಹೆಚ್ಚಳ ● ಒಟ್ಟು ಮತದಾರರು 26,99,835; 13,31,772 ಪುರುಷ, 13,67,843 ಮಹಿಳಾ, 220 ಇತರರು

ಮೈಸೂರು, ಜ.22(ಎಸ್‌ಬಿಡಿ)– ಲೋಕಸಭಾ ಸಾರ್ವತ್ರಿಕ ಚುನಾವಣೆ ಸನ್ನಿಹಿತವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಪರಿಷ್ಕೃತ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಕರಡು ಪಟ್ಟಿಗಿಂತ ಸುಮಾರು 12 ಸಾವಿರ ಮತದಾರರ ಸಂಖ್ಯೆ ಹೆಚ್ಚಾಗಿದೆ.

ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 13,31,772 ಪುರುಷರು, 13,67,843 ಮಹಿಳೆಯರು, 220 ತೃತೀಯ ಲಿಂಗ ಮತದಾರರು ಸೇರಿ ಒಟ್ಟು 26,99,835 ಮತದಾರರನ್ನೊಳಗೊಂಡ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಈ ಸಂಬಂಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಪಟ್ಟಿ ನೀಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸೋಮವಾರ ಹಳೇ ಡಿಸಿ ಆಫೀಸ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರಣೆ ನೀಡಿದರು.

ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 26,87,773 ಮತದಾರರಿದ್ದರು. ಇದರ ಪರಿಷ್ಕರಣೆ ಸಂದರ್ಭದಲ್ಲಿ ಪಿರಿಯಾಪಟ್ಟಣ ಕ್ಷೇತ್ರದಲ್ಲಿ 1,023, ಕೆ.ಆರ್.ನಗರದಲ್ಲಿ 762, ಹೆಚ್.ಡಿ.ಕೋಟೆಯಲ್ಲಿ 777 ಹಾಗೂ ನಂಜನಗೂಡಿನಲ್ಲಿ 1371 ಮತದಾರರ ಸಂಖ್ಯೆ ಇಳಿಕೆಯಾಗಿದ್ದು, ಹುಣಸೂರಿನಲ್ಲಿ 731, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 5,439, ಕೃಷ್ಣರಾಜ ಕ್ಷೇತ್ರದಲ್ಲಿ 554, ಚಾಮರಾಜ ಕ್ಷೇತ್ರದಲ್ಲಿ 2056, ನರಸಿಂಹರಾಜ ಕ್ಷೇತ್ರದಲ್ಲಿ 5614, ವರುಣಾದಲ್ಲಿ 816 ಹಾಗೂ ತಿ.ನರಸೀಪುರದಲ್ಲಿ 786 ಸಂಖ್ಯೆ ಹೆಚ್ಚಾಗಿದೆ. ಒಟ್ಟಾರೆ ಕರಡು ಪಟ್ಟಿಗಿಂತ ಒಟ್ಟು 12,062 ಹೆಚ್ಚು ಮತದಾರರ ಸೇರ್ಪಡೆಯಾಗಿದೆ ಎಂದರು.

ಯುವ ಮತದಾರರು: ಅಂತಿಮ ಮತದಾರರ ಪಟ್ಟಿಯಲ್ಲಿ 27,195 ಪುರುಷರು, 23,770 ಮಹಿಳೆಯರು, ನಾಲ್ವರು ತೃತೀಯ ಲಿಂಗಿಗಳು ಸೇರಿ ಒಟ್ಟು 50,969 ಯುವ ಮತದಾರರಿದ್ದಾರೆ. ಕರಡು ಮತದಾರರ ಪಟ್ಟಿ ಪರಿಷ್ಕರಣೆ ನಂತರ 16,899 ಯುವ ಮತದಾರರ ಸಂಖ್ಯೆ ಹೆಚ್ಚಾಗಿದೆ. ಇನ್ನೂ 25 ಸಾವಿರ ಅರ್ಹ ಯುವಕ-ಯುವತಿಯರಿದ್ದಾರೆ. ಮುಂದಿನ ಏಪ್ರಿಲ್ 1ಕ್ಕೆ 18 ವರ್ಷ ಪೂರೈಸುವ ಎಲ್ಲರೂ ಮತದಾರರಾಗಲು ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಪರಿಷ್ಕರಣೆ ಮಾಹಿತಿ: ಕರಡು ಮತದಾರರ ಪಟ್ಟಿ ಪ್ರಕಟಿಸಿದ ನಂತರ ಅಂತಿಮ ಮತದಾರರ ಪಟ್ಟಿಗಾಗಿ ನಡೆಸಲಾದ ಪರಿಷ್ಕರಣೆಯಲ್ಲಿ 54,766 ಮತದಾರರು ಸೇರ್ಪಡೆಯಾಗಿದ್ದಾರೆ. ಮರಣ ಹೊಂದಿದ 16,726 ಮಂದಿ, ಸ್ಥಳಾಂತರಗೊಂಡ 19,482 ಮಂದಿ ಹಾಗೂ ಪುನರಾವರ್ತನೆಯಾಗಿದ್ದ 6,495 ಸೇರಿದಂತೆ ಒಟ್ಟು 42,704 ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮರಣ ಕಾರಣಕ್ಕೆ ಮತದಾರರ ಪಟ್ಟಿಯಿಂದ ಕೈಬಿಡಲು ಮರಣ ಪ್ರಮಾಣ ಪತ್ರ ಅಥವಾ ಮಹಜರು ನಂತರವೇ ಕ್ರಮ ವಹಿಸಲಾಗಿದೆ. ಇನ್ನು 25,769 ಮತದಾರರ ವಿವರ ತಿದ್ದುಪಡಿಯಾಗಿವೆ ಎಂದರು.

ಅಂತಿಮ ಮತದಾರರ ಪಟ್ಟಿಯಲ್ಲಿ 31,631 ವಿಶೇಷಚೇತನ ಮತದಾರರು, 1148 ಸೇವಾ ಮತದಾರರು ಹಾಗೂ 2,862 ಗಣ್ಯ ಮತದಾರರಿದ್ದಾರೆ. ವಿಕಲಚೇತನರು ತಮ್ಮ ಅಂಗವೈಕಲ್ಯ ದಾಖಲಿಸಿಕೊಳ್ಳುವ ಮೂಲಕ ಚುನಾವಣೆಯಲ್ಲಿ ತಮ್ಮ ಮನೆಯಲ್ಲೇ ಮತದಾನದ ಹಕ್ಕು ಚಲಾಯಿಸುವ ಸೌಲಭ್ಯ ಪಡೆದುಕೊಳ್ಳಬಹುದು.

10 ಹೆಚ್ಚುವರಿ ಮತಗಟ್ಟೆ: ಪಿರಿಯಾಪಟ್ಟಣದಲ್ಲಿ 235, ಕೆ.ಆರ್.ನಗರದಲ್ಲಿ 252, ಹುಣಸೂರಿನಲ್ಲಿ 274, ಹೆಚ್.ಡಿ.ಕೋಟೆಯಲ್ಲಿ 282, ನಂಜನಗೂಡಿನಲ್ಲಿ 246, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 341, ಕೃಷ್ಣರಾಜದಲ್ಲಿ 265, ಚಾಮರಾಜದಲ್ಲಿ 248, ನರಸಿಂಹರಾಜದಲ್ಲಿ 283, ವರುಣಾದಲ್ಲಿ 261 ಹಾಗೂ ತಿ.ನರಸೀಪುರದಲ್ಲಿ 228 ಸೇರಿ ಜಿಲ್ಲೆಯಲ್ಲಿ ಒಟ್ಟು 2,915 ಮತಗಟ್ಟೆಗಳಿದ್ದು, ಕಳೆದ ವಿಧಾನಸಭಾ ಚುನಾವಣೆಗಿಂತ 10 ಮತಗಟ್ಟೆಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸಲಾಗುತ್ತಿದೆ ಎಂದು ತಿಳಿಸಿದರು.

ನಿರಂತರ ಪರಿಷ್ಕರಣೆ: ಮತದಾರರ ಪಟ್ಟಿ ನಿರಂತರ ಪರಿಷ್ಕರಣೆಯಡಿ ಮತದಾರರ ಸೇರ್ಪಡೆಗೆ ಈಗಲೂ ಅವಕಾಶವಿದೆ. ಹೊಸದಾಗಿ ಸೇರ್ಪಡೆಗೆ ನಮೂನೆ-6, ಅನಿವಾಸಿ ಭಾರತೀಯರ ಹೆಸರು ನೋಂದಾಯಿಸಲು ನಮೂನೆ-6ಎ, ಮತದಾರರ ಪಟ್ಟಿಯೊಂದಿಗೆ ಆಧಾರ್ ಜೋಡಣೆಗೆ ನಮೂನೆ-6ಬಿ, ಪಟ್ಟಿಯಿಂದ ಹೆಸರು ತೆಗೆಸಲು ನಮೂನೆ-7, ಮತದಾರರ ಹೆಸರು, ವಿಳಾಸ, ಭಾವಚಿತ್ರ ಸಂಬಂಧ ತಿದ್ದುಪಡಿ, ವಿಧಾನಸಭಾ ಕ್ಷೇತ್ರದಿಂದ ಸ್ಥಳಾಂತರ, ಬದಲಿ ಎಪಿಕ್ ಪಡೆಯಲು, ಅಂಗವೈಕಲ್ಯ ದಾಖಲಿಸಲು ನಮೂನೆ-8ರಲ್ಲಿ ಅರ್ಜಿ ಸಲ್ಲಿಸಬೇಕು. ವೋಟರ್ ಸರ್ವೀಸ್ ಪೋರ್ಟಲ್, ವೋಟರ್ ಹೆಲ್ಪ್‌ಲೈನ್ ಆಪ್ (ವಿಹೆಚ್‌ಎ), ಬಿಎಲ್‌ಓಗಳ ಮೂಲಕ ಗರುಡಾ ಆಪ್‌ನಲ್ಲೂ ಅರ್ಜಿ ಸಲ್ಲಿಸಬಹುದು. ಜಿಲ್ಲಾ ಕಂಟ್ರೋಲ್ ರೂಂ 1077 ಹಾಗೂ ಸಹಾಯವಾಣಿ 1950 ಕರೆ ಮಾಡಿ, ಮಾಹಿತಿ ಪಡೆಯಬಹುದು. ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ಎಪಿಕ್ ಕಾರ್ಡ್ ಪಡೆಯಬಹುದು. ಇ-ಎಪಿಕ್ ಸೇವೆಯೂ ಲಭ್ಯವಿದೆ ಎಂದರು.

ಲೋಕಸಭಾ ಚುನಾವಣೆಗೆ ಪೂರ್ವಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಸೆಕ್ಟರ್ ಅಧಿಕಾರಿಗಳು, ಫ್ಲೈಯಿಂಗ್ ಸ್ಕ್ವಾಡ್, ಸ್ಟಾಟಿಕ್ ಸರ್ವೆಯಲೆನ್ಸ್ ತಂಡ, ವಿಡಿಯೋ ಸರ್ವೆಯಲೆನ್ಸ್ ಹಾಗೂ ಲೆಕ್ಕ ತಂಡಗಳನ್ನು ಮಾಡಲಾಗಿದೆ. ಪ್ರಥಮ ಹಂತದ ಪರಿಶೀಲನೆ ಆಗಿರುವ ವಿದ್ಯುನ್ಮಾನ ಮತಯಂತ್ರಗಳಲ್ಲಿ ಶೇ.10ರಷ್ಟನ್ನು ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ತರಬೇತಿ ನೀಡುವ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಡಿಸಿ ಕಚೇರಿಯಲ್ಲೇ ಇವಿಎಂ ಪ್ರಾತ್ಯಕ್ಷಿಕೆ ಕೇಂದ್ರದ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಇಪಿ ರೇಷಿಯೋ: ಜಿಲ್ಲೆಯಲ್ಲಿ ಸುಮಾರು 36 ಲಕ್ಷ ಜನಸಂಖ್ಯೆ ಇರಬಹುದು. ಒಟ್ಟು ಜನಸಂಖ್ಯೆ ಹಾಗೂ ಮತದಾರರ ನಡುವಿನ ಅನುಪಾತ(ಎಲೆಕ್ಟ್ರೋಲ್ ರೇಷಿಯೋ) ಶೇ.75ರಷ್ಟಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅತೀಹೆಚ್ಚು ಶೇ.95ರಷ್ಟಿದ್ದು, ನರಸಿಂಹರಾಜದಲ್ಲಿ ಶೇ.84ರಷ್ಟಿದೆ ಎಂದರು.

ಮಹಿಳಾ ಮತದಾರರೇ ಹೆಚ್ಚು...

ಜಿಲ್ಲೆಯ ಅಂತಿಮ ಮತದಾರರ ಪಟ್ಟಿಯಲ್ಲಿ ಪಿರಿಯಾಪಟ್ಟಣ ಕ್ಷೇತ್ರದ 196036, ಕೆ.ಆರ್.ನಗರ 217319, ಹುಣಸೂರು 245312, ಹೆಚ್.ಡಿ.ಕೋಟೆ 226716, ನಂಜನಗೂಡು 220057, ಚಾಮುಂಡೇಶ್ವರಿ 341116, ಕೃಷ್ಣರಾಜ 254013, ಚಾಮರಾಜ 253019, ನರಸಿಂಹರಾಜ 301628, ವರುಣ 237176, ತಿ.ನರಸೀಪುರ ಕ್ಷೇತ್ರದ 207443 ಸೇರಿ ಒಟ್ಟು 26,99,835 ಮತದಾರರಿದ್ದು, ಇವರಲ್ಲಿ ಪುರುಷರಿಗಿಂತ(1331772) ಮಹಿಳಾ ಮತದಾರರ(1367843) ಸಂಖ್ಯೆಯೇ ಹೆಚ್ಚಾಗಿದೆ.



ಮೈಸೂರಿನ ಹಳೇ ಡಿಸಿ ಆಫೀಸ್ ಕಟ್ಟಡದಲ್ಲಿ ಸೋಮವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುದ್ದಿಗೋಷ್ಠಿ ನಡೆಸಿ, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಂತಿಮ ಮತದಾರರ ಪಟ್ಟಿಯ ಬಗ್ಗೆ ವಿವರಣೆ ನೀಡಿದರು.

ಸದ್ಯಕ್ಕೆ ನೀರು-ಮೇವಿಗೆ ಸಮಸ್ಯೆಯಿಲ್ಲ...

ಮೈಸೂರು ಜಿಲ್ಲೆಯಲ್ಲಿ ಮುಂದಿನ ಸೆಪ್ಟೆಂಬರ್‌ವರೆಗೆ ಕುಡಿಯುವ ನೀರಿಗೆ ಸಮಸ್ಯೆಯಾಗುವುದಿಲ್ಲ. ಹಾಗೆಯೇ 38 ವಾರಗಳ ಕಾಲ ಜಾನುವಾರುಗಳಿಗೆ ಮೇವಿನ ಕೊರತೆಯೂ ಉಂಟಾಗುವುದಿಲ್ಲ ಎಂದು ಡಿಸಿ ಡಾ.ಕೆ.ವಿ. ರಾಜೇಂದ್ರ ಅವರು ಸ್ಪಷ್ಟಪಡಿಸಿದರು.

ಹೆಸರಿದೆಯೇ ಖಚಿತಪಡಿಸಿಕೊಳ್ಳಿ...

ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಅಧಿಕೃತ ಜಾಲತಾಣ https://ceo.karnataka.gov.in ನಲ್ಲಿ ಲಭ್ಯವಿದ್ದು, ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿದೆಯೇ? ವಿವರ ಸರಿಯಾಗಿದೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಮತಗಟ್ಟೆ ಹಂತದ ಅಧಿಕಾರಿಗಳನ್ನು ಸಂಪರ್ಕಿಸುವ ಮೂಲಕವೂ ಖಾತರಿಪಡಿಸಿಕೊಳ್ಳಬಹುದು.

ಕೊಡಗಿನ ದೇವಸ್ಥಾನಗಳಲ್ಲಿ ರಾಮ ಭಜನೆ

ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ವಿಶೇಷ ಪೂಜೆ



ಮಡಿಕೇರಿಯ ಇತಿಹಾಸ ಪ್ರಸಿದ್ಧ ಶ್ರೀ ಆಂಜನೇಯ ದೇಗುಲದಲ್ಲಿ ಅಳವಡಿಸಿದ್ದ ಎಲ್ ಇಡಿ ಪರದೆಯಲ್ಲಿ ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರವನ್ನು ಭಕ್ತರು ವೀಕ್ಷಿಸಿದರು.

ಮಡಿಕೇರಿ, ಜ.22–ಶತ ಶತಮಾನಗಳ ಹಿಂದೂ ಸಮಾಜದ ನಿರೀಕ್ಷೆಗಳು ಸೋಮವಾರ ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಮೂಲಕ ಸಾಕಾರಗೊಂಡಿದ್ದು, ಇದೇ ವೇಳೆ ಕೊಡಗು ಜಿಲ್ಲೆಯ ಬಹುತೇಕ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯೊಂದಿಗೆ ಶ್ರೀ ರಾಮನ ಭಜನೆ ಮೊಳಗಿದವು.

ಅಯೋಧ್ಯೆಯ ಶ್ರೀರಾಮ ಪ್ರತಿಷ್ಠಾಪನೆಯ ನೇರ ಪ್ರಸಾರದ ವೀಕ್ಷಣೆಗೆ ಬಹುತೇಕ ದೇವಸ್ಥಾನಗಳಲ್ಲಿ ಅನುವಾಗುವಂತೆ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿತ್ತು. ಭಕ್ತಿ ಭಾವದಿಂದ ಪೂಜಾ ಕಾರ್ಯಗಳಲ್ಲಿ ಪಾಲ್ಗೊಂಡ ಭಕ್ತರು ಆಸಕ್ತಿಯಿಂದ ಪ್ರಾಣ ಪ್ರತಿಷ್ಠಾಪನೆ ವೀಕ್ಷಿಸಿದರು.

ಅಯೋಧ್ಯೆ ಮಂತ್ರಾಕ್ಷತೆ: ಮಡಿಕೇರಿಯ ಇತಿಹಾಸ ಪ್ರಸಿದ್ಧ ಶ್ರೀ ಆಂಜನೇಯ ದೇಗುಲದಲ್ಲಿ ಅಳವಡಿಸಿದ್ದ ಎಲ್ ಇಡಿ ಪರದೆಯ ಮೂಲಕ ನೂರಾರು ಭಕ್ತರು ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ವೀಕ್ಷಿಸಿದರು. ಹಿಂದೂ ಪರ ಸಂಘಟನೆಗಳಿಂದ ವಿತರಿಸಿದ್ದ ಅಯೋಧ್ಯೆ ಮಂತ್ರಾಕ್ಷತೆಯನ್ನು ಶಿರಕ್ಕೆ ಹಾಕಿಕೊಂಡು ಶ್ರೀರಾಮನಿಗೆ ನಮಿಸಿದರು.

ಬೆಳಗ್ಗಿನಿಂದಲೇ ಶ್ರೀ ಆಂಜನೇಯ ದೇಗುಲದಲ್ಲಿ ವಿಶೇಷ ಪೂಜೆಯೊಂದಿಗೆ ಶ್ರೀರಾಮ ತಾರಕ ಹೋಮ ನೆರವೇರಿತು. ಇದೇ ವೇಳೆ ದೇಗುಲದ ಆವರಣದಲ್ಲಿ ಗಾಯಕ ರವಿ ಭೂತನಕಾಡು ನೇತೃತ್ವದ ತಂಡದಿಂದ ಶ್ರೀರಾಮನ ಭಜನೆ ಗೀತೆಗಳ ಗಾಯನ ಕಾರ್ಯಕ್ರಮ ಕೇಳುಗರ ಮನದಲ್ಲಿ ಭಕ್ತಿಭಾವದ ಸಂಚಾರವನ್ನುಂಟು ಮಾಡಿತು.

ಕರಸೇವಕರಿಗೆ ಗೌರವಾರ್ಪಣೆ: ಅಯೋಧ್ಯೆಯಲ್ಲಿ 1992ರ ಡಿಸೆಂಬರ್ 6ರಂದು ನಡೆದ ಕರಸೇವೆಯಲ್ಲಿ ಪಾಲ್ಗೊಂಡಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೆ.ಕೆ.ಮಹೇಶ್ ಕುಮಾರ್ ನೇತೃತ್ವದ ತಂಡದ ಸದಸ್ಯರನ್ನು ಕೇಸರಿ ಶಾಲು ಹೊದಿಸಿ ಗೌರವಿಸಲಾಯಿತು. ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಸುನಿಲ್ ಸುಬ್ರಮಣಿ, ಡಾ.ಎಂ.ಜಿ.ಪಾಟ್ಕರ್, ನಗರಸಭಾ ಸದಸ್ಯ ಚಂದ್ರ, ಕರಸೇವಕರು ಗೌರವ ಸ್ವೀಕರಿಸಿದರು. ಇದೇ ವೇಳೆ ಅಂದಿನ ಕರಸೇವೆಯಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡು ಇಂದು ನಮ್ಮೊಡನೆ ಇಲ್ಲದ ಹಿರಿಯ ಕರಸೇವಕರನ್ನು ಸ್ಮರಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರಾಣ ಪ್ರತಿಷ್ಠಾಪನೆ ಕಾರ್ಯ ಪೂರ್ಣಗೊಂಡ ಬಳಿಕ ಶ್ರೀ ಆಂಜನೇಯನಿಗೆ ಮಹಾಪೂಜೆ, ಮಂಗಳಾರತಿ ಹಾಗೂ ಅನ್ನಸಂತರ್ಪಣೆ ನಡೆಯಿತು.

ವಿಶೇಷ ಪೂಜೆ: ನಗರದ ಶ್ರೀ ಕೋದಂಡರಾಮ ದೇಗುಲದಲ್ಲಿ ಬೆಳಗ್ಗಿನಿಂದಲೇ ಶ್ರೀರಾಮನಿಗೆ ವಿಶೇಷ ಪೂಜೆಯೊಂದಿಗೆ ಭಕ್ತಗಣದಿಂದ ಭಜನಾ ಕಾರ್ಯಕ್ರಮ ನಡೆಯಿತು. ನಗರದ ಐತಿಹಾಸಿಕ ಹಿನ್ನೆಲೆಯ ಪೇಟೆ ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ, 1008 ದೀಪಗಳನ್ನು ಹಚ್ಚುವ ಮೂಲಕ ಮರ್ಯಾದಾ ಪುರುಷೋತ್ತಮನನ್ನು ಆರಾಧಿಸಲಾಯಿತು.

ಅನ್ನ ಸಂತರ್ಪಣೆ: ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ವಿವಿಧ ಹಿಂದೂಪರ ಸಂಘಟನೆಗಳು ಒಗ್ಗೂಡಿ ಅನ್ನ ಸಂತರ್ಪಣೆ ಏರ್ಪಡಿಸಿದವು. ಶ್ರೀರಾಮನ ಹಾಡಿಗೆ ಕುಣಿದು ಕುಪ್ಪಳಿಸಿದ ಹಿಂದೂ ಕಾರ್ಯಕರ್ತರು, ಬಳಿಕ ಪಟಾಕಿ ಸಿಡಿತದ ಕಸವನ್ನು ಗುಡಿಸಿ ತೆರವು ಮಾಡುವ ಮೂಲಕ ಸ್ವಚ್ಛ ಭಾರತ್ ಅಭಿಯಾನ ನಡೆಸಿ, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು.

ಕುಶಾಲನಗರದಲ್ಲಿ ಕಾವೇರಿ ನದಿಗೆ ಆರತಿ



ಕುಶಾಲನಗರದಲ್ಲಿ ಕಾವೇರಿ ನದಿಗೆ ವಿಶೇಷ ಮಹಾ ಆರತಿ ಬೆಳಗಿಸಲಾಯಿತು.

ಕುಶಾಲನಗರ, ಜ.22– ಅಯೋಧ್ಯೆಯ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸೋಮವಾರ ಇಲ್ಲಿನ ಕಾವೇರಿ ನದಿಗೆ ವಿಶೇಷ ಮಹಾ ಆರತಿ ಹಾಗೂ ಕರಸೇವಕರಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಪಟ್ಟಣದ ಗಣಪತಿ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಬೆಳಗ್ಗಿನಿಂದಲೇ ಹೋಮ ಮತ್ತಿತರ ಪೂಜಾ ಕಾರ್ಯ ನಡೆದವು. ಅಯ್ಯಪ್ಪಸ್ವಾಮಿ ದೇವಾಲಯ ಬಳಿಯ ಕಾವೇರಿ ನದಿಗೆ ಆರತಿ, ಕರಸೇವಕರು ಹಾಗೂ ಪಟ್ಟಣದ ವಿವಿಧ ದೇವಾಲಯಗಳ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಕಾವೇರಿ ಮಹಾ ಆರತಿ ಬಳಗ ಆಶ್ರಯದಲ್ಲಿ ಕುಶಾಲನಗರ ದೇವಾಲಯಗಳ ಒಕ್ಕೂಟ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶರಾದ ಶ್ರೀ ಸದಾಶಿವ ಸ್ವಾಮೀಜಿ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತ ಮಾತಾ ಪಾದ ಕಾಲೇಜಿನ ಪ್ರಾಂಶುಪಾಲ ಫಾ.ಅಭಿನ್ ಮತ್ತು ಬೈಲಕುಪ್ಪೆ ಕರ್ಮಪ ಟಿಬೇಟಿಯನ್ ದೇವಾಲಯದ ಗುರುಗಳು ಪಾಲ್ಗೊಂಡು ನದಿಗೆ ಸಾಮೂಹಿಕವಾಗಿ ಮಹಾ ಆರತಿ ಬೆಳಗಿದರು.

ರಾಮಜಪ: ಕುಶಾಲನಗರ ರಥ ಬೀದಿಯ ಶ್ರೀ ಆಂಜನೇಯ ದೇವಾಲಯದಲ್ಲಿ ರಾಮ ತಾರಕ ಹೋಮ ನಡೆಯಿತು. ಬಳಿಕ ಪಂಚಮುಖಿ ಭಜನಾ ಮಂಡಳಿಯಿಂದ ರಾಮ್ ಧ್ಯಾನ್ ಮತ್ತು ಭಜನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆಂಜನೇಯ ದೇವಾಲಯ ಸಮಿತಿಯಿಂದ ಅನ್ನಸಂತರ್ಪಣೆ ನಡೆಯಿತು. ಪೂಜೋತ್ಸವದಲ್ಲಿ ಕಲ್ಲಹಳ್ಳ ಶ್ರೀ ಮಹಾಂತ ಸ್ವಾಮೀಜಿ, ಅಮೃತ್ತ ಕಣ್ವ ಮಠದ ಶ್ರೀ ಚನ್ನಬಸವದೇಶೀಕೇಂದ್ರ ಸ್ವಾಮೀಜಿ, ಪ್ರಮುಖರಾದ ಎಂ.ಕೆ.ದಿನೇಶ್, ಪುಂಡರೀಕ, ಜನಾರ್ದನ್, ಬಿ.ಅಮೃತ್ ರಾಜ್, ವೈಶಾಖ್, ಪ್ರವೀಣ್, ಚಂದ್ರು ಮತ್ತು ಪದಾಧಿಕಾರಿಗಳು, ಸದಸ್ಯರು ಇದ್ದರು.

ವಿರಾಜಪೇಟೆಯಲ್ಲಿ ಶ್ರೀರಾಮನಾಮ ತಾರಕ ಯಜ್ಞ



ವಿರಾಜಪೇಟೆಯ ಚಿಕ್ಕಪೇಟೆ ಬಳಿಯ ದೇವರಕಾಡು ರಸ್ತೆಯ ಮಹಾವಿಷ್ಣು ದೇವಾಲಯದಲ್ಲಿ ಶ್ರೀರಾಮ ನಾಮತಾರಕ ಯಜ್ಞ ನಡೆಸಲಾಯಿತು.

ವಿರಾಜಪೇಟೆ, ಜ.22–ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಹಾಗೂ ಲೋಕ ಕಲ್ಯಾಣಾರ್ಥವಾಗಿ ಸೋಮವಾರ ವಿರಾಜಪೇಟೆ ಸುತ್ತಮುತ್ತಲಿನ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜಾ ಕಾರ್ಯ ನಡೆಸಲಾಯಿತು.

ನಗರದ ಚಿಕ್ಕಪೇಟೆ ಬಳಿಯ ದೇವರ ಕಾಡು ರಸ್ತೆಯ ಶ್ರೀ ಮಹಾವಿಷ್ಣು ದೇವಾಲಯದಲ್ಲಿ ಪ್ರಮೋದ್ ಭಟ್ ನೇತೃತ್ವದಲ್ಲಿ ಶ್ರೀರಾಮ ನಾಮತಾರಕ ಯಜ್ಞ ನಡೆಸಲಾಯಿತು. ನಂತರ ಮಹಾವಿಷ್ಣುಗೆ ಪಂಚಾಮೃತ ಅಭಿಷೇಕ, ಪೂಜೆ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ದೇವಾಲಯದಲ್ಲಿ ದೀಪೋತ್ಸವ ನಡೆಸಲಾಯಿತು.

ನಗರದ ಮುಖ್ಯರಸ್ತೆಯ ಗಡಿಯಾರ ಕಂಬದ ಬಳಿಯ ಶ್ರೀ ಗಣಪತಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಧಾರ್ಮಿಕ ಪೂಜಾ ಕಾರ್ಯ ಕೈಗೊಳ್ಳಲಾಗಿತ್ತು. ಈ ಸಂದರ್ಭ ವಿಶ್ವಹಿಂದೂ ಪರಿಷತ್, ಭಜರಂಗ ದಳ, ವಿವಿಧ ಸಂಘಟನೆಗಳಿಂದ ಪಟ್ಟಣದ ಕಾರು ನಿಲ್ದಾಣದ ಬಳಿ ಎಲ್‌ಇಡಿ ಪರದೆ ಅಳವಡಿಸಿ, ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ವೀಕ್ಷಣೆಗೆ ಅನುಕೂಲ ಕಲ್ಪಿಸಲಾಗಿತ್ತು.

ಅಪ್ಪಯ್ಯಸ್ವಾಮಿ ರಸ್ತೆಯ ಶ್ರೀ ಬಾಲಾಂಜನೇಯ ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯ ನಡೆಸಲಾಯಿತು. ಕೋಸಂಬರಿ, ಪಾನಕ, ಪ್ರಸಾದ ವಿತರಿಸಲಾಯಿತು. ದೀಪೋತ್ಸವ ಬಳಿಕ ರಾಮಾಯಣ ಕಥಾವಸ್ತು ಒಳಗೊಂಡ ಚಲನಚಿತ್ರ ಪ್ರದರ್ಶಿಸಲಾಯಿತು.

ಛತ್ರಕೆರೆ ಬಳಿಯ ಶ್ರೀ ವಿರಾಜನೇಯ ಹಾಗೂ ಶಿವಕೇರಿಯ ಶ್ರೀ ವಿಷ್ಣುದುರ್ಗಿ, ಜೈನರ ಬೀದಿಯ ಶ್ರೀ ಬಸವೇಶ್ವರ, ತೆಲುಗರ ಬೀದಿಯ ಶ್ರೀ ಅಂಗಾಳಪರಮೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಾಲಯ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆದವು.

ಕುರ್ಚಿ ರಾಮೇಶ್ವರದಲ್ಲಿ ರುದ್ರಾಭಿಷೇಕ



ಕೆ.ಬಾಡಗ ಗ್ರಾಮದ ಪೇರ್ಮಾಡು ಈಶ್ವರ ದೇವಸ್ಥಾನದಲ್ಲಿ ಶಿವರುದ್ರಯಾಗ ನೆರವೇರಿತು.

ಗೋಣಿಕೊಪ್ಪ, ಜ.22– ಅಯೋಧ್ಯೆಯ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸೋಮವಾರ ಕುರ್ಚಿ ಗ್ರಾಮದ ರಾಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ಏಕೋದಶ ರುದ್ರಾಭಿಷೇಕ, ಶ್ರೀರಾಮನ ಭಜನೆ, ವಿವಿಧ ಅಭಿಷೇಕ, ಪೂಜೆ ನೆರವೇರಿದವು. ಸುಮಾರು 350ಕ್ಕೂ ಹೆಚ್ಚು ಭಕ್ತರು ರಾಮ ಸ್ಮರಣೆಯಲ್ಲಿ ಪುನೀತರಾದರು. ಶ್ರೀಮಂಗಲ ವಿಶ್ವಹಿಂದು ಪರಿಷತ್ ಕಾರ್ಯಕರ್ತರು ದೇವಸ್ಥಾನಕ್ಕೆ ಜಾಥಾದಲ್ಲಿ ಆಗಮಿಸಿ ರಾಮನನ್ನು ಪ್ರಾರ್ಥಿಸಿದರು.

ಪೂಜಾ ಕಾರ್ಯದಲ್ಲಿ ಇರ್ಪು ರಾಮೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಮದ್ರೀರ ಪಿ.ವಿಷ್ಣು, ಆಡಳಿತ ಮಂಡಳಿ ಸದಸ್ಯರು, ಗ್ರಾಮಸ್ಥರು ಭಾಗವಹಿಸಿದ್ದರು.

ಕೆ.ಬಾಡಗ: ಕೆ.ಬಾಡಗ ಗ್ರಾಮದ ಪೇರ್ಮಾಡು ಈಶ್ವರ ದೇವಸ್ಥಾನದಲ್ಲಿ ಶಿವರುದ್ರಯಾಗ ನೆರವೇರಿತು.

ಬೆಳಗ್ಗೆ 8 ಗಂಟೆಯಿಂದ ಯಾಗ ಕಾರ್ಯ ನಡೆದವು. ಶಿವರುದ್ರಯಾಗ, ದೀಪೋತ್ಸವ, ಪೂರ್ಣಾಹುತಿ, ಪುಣ್ಯಾಹುತಿ, ಅನ್ನಸಂತರ್ಪಣೆ ನಡೆಸಲಾಯಿತು.

ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ

ಸಿದ್ದಾಪುರ, ಜ.22– ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸೋಮವಾರ ಇಲ್ಲಿನ ಮಾಲ್ದಾರೆ, ಸಿದ್ದಾಪುರ ಕರಡಿಗೋಡು, ಪಾಲಿಬೆಟ್ಟದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಶ್ರೀರಾಮನ ಬೃಹತ್ ಕಟೌಟ್‌ಗಳನ್ನು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಳವಡಿಸಲಾಗಿತ್ತು. ಕೇಸರಿ ಧ್ವಜಗಳೊಂದಿಗೆ ದೇವಸ್ಥಾನ, ಪಟ್ಟಣ ಪ್ರಮುಖ ಬೀದಿಗಳು ತಳಿರು ತೋರಣಗಳೊಂದಿಗೆ ಕಂಗೊಳಿಸುತ್ತಿತ್ತು.

ಪಾಲಿಬೆಟ್ಟದ ಗಣಪತಿ ದೇವಸ್ಥಾನ ಹಾಗೂ ಮಾಲ್ದಾರೆಯ ಮುತ್ತಪ್ಪ ದೇವಾಲಯದಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಿ ಅಯೋಧ್ಯೆಯಲ್ಲಿ ನಡೆದ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರಕ್ಕೆ ಅನುವು ಮಾಡಿಕೊಡಲಾಗಿತ್ತು. ರಾಮನ ಜಯ ಘೋಷದೊಂದಿಗೆ ಪ್ರಸಾದ ಹಾಗೂ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಇದೇ ಸಂದರ್ಭ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಮಾಲ್ದಾರೆಯ ಮುತ್ತಪ್ಪ ದೇವಾಲಯದಲ್ಲಿ ನಡೆದ ಬಾಲರಾಮ ಪೂಜಾ ಕಾರ್ಯಕ್ರಮದಲ್ಲಿ ಭಕ್ತರು ಭಾಗವಹಿಸಿದ್ದರು.

ಜ.26ರಂದು ಡಿಸಿ ಕಚೇರಿ ಎದುರು ಧರಣಿ ಸತ್ಯಾಗ್ರಹ



ಮಡಿಕೇರಿ, ಜ.22–ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತೆಗಾಗಿ ಒತ್ತಾಯಿಸಿ ಗಣರಾಜ್ಯೋತ್ಸವದ ದಿನವಾದ ಜ.26ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರ್ಧರಿಸಿದೆ.

ಅತ್ಯಂತ ಸೂಕ್ಷ್ಮ ಜನಾಂಗವಾಗಿರುವ ಕೊಡವರಿಗೆ ಕೊಡವ ಲ್ಯಾಂಡ್ ಮೂಲಕ ಸಾಂವಿಧಾನಿಕ ಭದ್ರತೆ ನೀಡಿದಾಗ ಮಾತ್ರ ಗಣರಾಜ್ಯೋತ್ಸವ ದಿನ ಪರಿಪೂರ್ಣವಾಗಲು ಸಾಧ್ಯ. ಆಂತರಿಕ ಸ್ವನಿರ್ಣಯದ ಹಕ್ಕುಗಳಿಗಾಗಿ 34 ವರ್ಷಗಳಿಂದ ಸಿಎನ್‌ಸಿ ಸಂಘಟನೆ ಹೋರಾಟ ನಡೆಸುತ್ತಾ ಬಂದಿದೆ. ಬೇಡಿಕೆಗಳು ಈಡೇರದ ಕಾರಣ ಈ ಬಾರಿಯ ಗಣರಾಜ್ಯೋತ್ಸವದಂದು ಕೂಡ ಕೊಡವ ಆತ್ಮಸಾಕ್ಷಿ, ಕೊಡವ ಒಮ್ಮತ ಮತ್ತು ಕೊಡವ ಪ್ರಜ್ಞೆಯ ಅಭಿವ್ಯಕ್ತಿಯನ್ನು ದೃಢೀಕರಿಸಲಾಗುವುದು. ಜ.26ರಂದು ಬೆಳಗ್ಗೆ 10.30 ರಿಂದ 11.30 ಗಂಟೆ ವರೆಗೆ ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು.

ಕೊಡವಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತೆ, ಸ್ಥಳೀಯ ಕೊಡವರಿಗೆ ವಿಶ್ವರಾಷ್ಟ್ರ ಸಂಸ್ಥೆ ಮಾನ್ಯತೆ ಮತ್ತು ಮಿನಿಸ್ಕ್ಯೂಲ್ ಮೈಕ್ರೋ ಕೊಡವ ರೇಸ್ ಹಾಗೂ ಎಸ್‌ಟಿ ಟ್ಯಾಗ್ ನೀಡಬೇಕು ಸೇರಿದಂತೆ ಕಾನೂನುಬದ್ಧ ಬೇಡಿಕೆಗಳನ್ನು ಮುಂದಿಡಲಾಗುವುದು ಎಂದು ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಸರ್ಕಾರಿ ಶಾಲೆಗೆ ಬೀಗ ಹಾಕಿ ಪ್ರತಿಭಟನೆ



ಚಾಮರಾಜನಗರ ತಾಲೂಕಿನ ಹೆಬ್ಬಸೂರು ಸರ್ಕಾರಿ ಶಾಲೆಯ ಅಡುಗೆ ಸಹಾಯಕಿಯನ್ನು ವಜಾಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಶಾಲೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ದಡದಹಳ್ಳಿ, ಜ.22–ಅಡುಗೆ ಸಹಾಯಕಿಯನ್ನು ವಜಾಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಸೋಮವಾರ ಚಾಮರಾಜನಗರ ತಾಲೂಕಿನ ಹೆಬ್ಬಸೂರು ಸರ್ಕಾರಿ ಶಾಲೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳಗ್ಗೆ ಆರಂಭವಾಗುತ್ತಿದ್ದಂತೆ ಗ್ರಾಮಸ್ಥರು, ಮಕ್ಕಳು ಮತ್ತು ಶಿಕ್ಷಕರನ್ನು ಹೊರಗೆ ಕಳುಹಿಸಿ ಗೇಟ್‌ಗೆ ಬೀಗ ಹಾಕಿ ಪ್ರತಿಭಟಿಸಿದರು. ಪ್ರತಿಭಟನೆಯಿಂದ ಮಕ್ಕಳು ಮತ್ತು ಶಿಕ್ಷಕರು ಕೆಲಕಾಲ ಬಿಸಿಲಿನಲ್ಲೇ ರಸ್ತೆ ಬದಿಯಲ್ಲಿ ಕೂರಬೇಕಾಯಿತು.

ಶಾಲೆಯ ಅಡುಗೆ ಸಹಾಯಕಿ ಪುಷ್ಪಾ ದುರ್ವತನೆಯಿಂದ ನಡೆದುಕೊಳ್ಳುತ್ತಿದ್ದು, ಈಕೆ ವಾಮಾಚಾರ ಭೂದಿಯನ್ನು ಅಡುಗೆಯಲ್ಲಿ ಹಾಕುತ್ತಿದ್ದಾಳೆ. ಇದರಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆ. ಜೊತೆಗೆ ಮಕ್ಕಳು, ಶಿಕ್ಷಕರು ಹಾಗೂ ಪೋಷಕರೊಂದಿಗೆ ಸರಿಯಾಗಿ ವರ್ತಿಸುವುದಿಲ್ಲ ಎಂದು ಆರೋಪಿಸಿದರು.

ನಂತರ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವೆಂಕಟೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ, ಗುರುಲಿಂಗಯ್ಯ ಶಾಲೆಗೆ ಆಗಮಿಸಿ, ಬೀಗ ತೆರವುಗೊಳಿಸಿ ಮಕ್ಕಳನ್ನು ಶಾಲೆಗೆ ಕಳುಹಿಸಿದರು.

ಸಭೆ: ಇದೇ ವೇಳೆ ಬಿಇಓ ಈ ಸಂಬಂಧ ಗ್ರಾಪಂ ಅಧ್ಯಕ್ಷರು, ಸದಸ್ಯರು, ಪಿಡಿಓ, ಎಸ್‌ಡಿಎಂಸಿ ಪದಾಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ, ಮುಖ್ಯ ಶಿಕ್ಷಕರು ಸರಿಯಾಗಿ ಕರ್ತವ್ಯ ನಿರ್ವಹಿಸಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ನಂತರ ಬಿಇಓ ಗ್ರಾಮಸ್ಥರ ಸಮಸ್ಯೆ ಆಲಿಸಿದರು. ದಾಸೋಹ ಅಧಿಕಾರಿ ಗುರುಲಿಂಗಯ್ಯ ಮಾತನಾಡಿ, ಶಾಲೆಗೆ ಬೀಗ ಹಾಕಬೇಡಿ. ಇದರಿಂದ ಮಕ್ಕಳಿಗೆ ತೊಂದರೆಯಾಗುತ್ತದೆ. ಸಮಸ್ಯೆಗಳನ್ನು ಬಗೆಹರಿಸೋಣ ಎಂದು ಮನವಿ ಮಾಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಪದ್ಮಾ, ಸದಸ್ಯರಾದ ಸಾಧೀಕ್, ಮಧು, ಪಿಡಿಓ ರಂಜಿತಾ, ಬಸವಣ್ಣ, ಸಿಆರ್‌ಪಿ ಬಸವಣ್ಣ, ಶಿಕ್ಷಕರ ಸಂಘದ ಅಧ್ಯಕ್ಷ ರಾಮಸ್ವಾಮಿ, ನಯೀಮ್ ಇದ್ದರು.

ಪ್ರಾಣ ಪ್ರತಿಷ್ಠಾಪನೆ ನೇರ ಪ್ರಸಾರ ವೀಕ್ಷಣೆ

ಗುಂಡ್ಲುಪೇಟೆ, ಜ.22– ಅಯೋಧ್ಯೆಯ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಅಂಗವಾಗಿ ಸೋಮವಾರ ಪಟ್ಟಣದ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಕಾರ್ಯ ನೆರವೇರಿಸಲಾಯಿತು.

ತಾಲೂಕಿನ ಮುಜರಾಯಿ ಇಲಾಖೆಯ 39 ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆದರೆ, ಪಟ್ಟಣದ ಶ್ರೀ ಕೋಟೆ ಕೋದಂಡರಾಮ, ರಾಮೇಶ್ವರ, ಬ್ರಾಹ್ಮಣರ ರಾಮಮಂದಿರ, ಬಣಜಿಗ ಹಾಗೂ ನಾಯಕರ ಬೀದಿಗಳ ರಾಮಮಂದಿರ, ಆಂಜನೇಯ ದೇವಾಲಯಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿ, ವಿಶೇಷ ಪೂಜೆ ನಡೆಸಲಾಯಿತು.

ಕಿತ್ತೂರು ರಾಣಿಚೆನ್ನಮ್ಮ ರಸ್ತೆಯ ರಾಮೇಶ್ವರ ದೇವಾಲಯದ ಮುಂಭಾಗ ಮತ್ತು ರಾಮಮಂದಿರದಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಿ ಬಾಲ ರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರ ಕಾರ್ಯಕ್ರಮವನ್ನು ವೀಕ್ಷಣೆಗೆ ಅನುಕೂಲ ಮಾಡಲಾಗಿತ್ತು.

ರಾಮೇಶ್ವರ ದೇವಾಲಯದಲ್ಲಿ ರಾಜಾಸ್ತನಿ ಸಮಾಜದಿಂದ ಭಕ್ತರಿಗೆ ಲಾಡು ವಿತರಿಸಲಾಯಿತು. ಬ್ರಾಹ್ಮಣರ ರಾಮ ಮಂದಿರದಲ್ಲಿ ಶ್ರೀ ರಾಮತಾರಕ ಹೋಮ, ಪ್ರಸಾದ ವಿನಿಯೋಗ ಮಾಡಲಾಯಿತು. ಇದೇ ವೇಳೆ ರಾಮಮಂದಿರಗಳಿಗೆ ಶಾಸಕ ಹೆಚ್.ಎಂ.ಗಣೇಶಪ್ರಸಾದ್, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್, ಮುಖಂಡ ಎನ್.ಮಲ್ಲೇಶ್ ಮತ್ತಿತರರು ಭೇಟಿ ನೀಡಿ ದೇವರ ದರ್ಶನ ಪಡೆದರು. ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಮಲ್ಲೇಶ್ ಮತ್ತಿತರರು ಇದ್ದರು.



ಗುಂಡ್ಲುಪೇಟೆಯ ರಾಮೇಶ್ವರ ದೇವಾಲಯದಲ್ಲಿ ಎಲ್‌ಇಡಿ ಪರದೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರನ್ನು ಭಕ್ತರು ವೀಕ್ಷಿಸಿದರು.

ಚಾಮರಾಜನಗರ ಎಲ್ಲೆಡೆ ರಾಮನಾಮ ಸ್ಮರಣೆ

ಮಹದೇಶ್ವರಬೆಟ್ಟ, ಗೋಪಾಲಸ್ವಾಮಿಬೆಟ್ಟ, ಬಿಳಿಗಿರಿರಂಗನಾಥಬೆಟ್ಟದಲ್ಲಿ ವಿಶೇಷ ಪೂಜೆ



ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಚಾಮರಾಜನಗರ ತಾಲೂಕಿನ ಪಣ್ಯದಹುಂಡಿ ಗ್ರಾಮದ ಶ್ರೀರಾಮಮಂದಿರ ಆವರಣದಲ್ಲಿ ಗ್ರಾಮಸ್ಥರು ಹೋಮ ಮತ್ತು ಪೂಜೆ ಸಲ್ಲಿಸಿದರು.

ಚಾಮರಾಜನಗರ, ಜ.22– ಅಯ್ಯೋಧೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ ಸೋಮವಾರ ಜಿಲ್ಲಾದ್ಯಂತ ಸಂಭ್ರಮ ಮನೆ ಮಾಡಿತು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಶ್ರೀರಾಮನ ನಾಮ ಸ್ಮರಣೆ ಮೊಳಗಿತ್ತು. ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ, ಮಹದೇಶ್ವರಬೆಟ್ಟ, ಹಿಮವದ್ ಗೋಪಾಲಸ್ವಾಮಿಬೆಟ್ಟ, ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟ ಸೇರಿದಂತೆ ಜಿಲ್ಲೆಯ ಪ್ರಮುಖ ಧಾರ್ಮಿಕ ಸ್ಥಳಗಳು ಸೇರಿದಂತೆ ಶ್ರೀ ರಾಮನ ಮಂದಿರಗಳು, ಎಲ್ಲಾ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಕಂರ್ಯ ನೆರವೇರಿತು.

ಜಿಲ್ಲೆಯಲ್ಲಿ ರಾಮನ ಹಬ್ಬದ ವಾತಾವರಣ ಮನೆ ಮಾಡಿತ್ತು. ಜನರು ಮನೆಯಲ್ಲಿ ಪೂಜೆ ಪುನಸ್ಕಾರ ಮಾಡಿ ಹಬ್ಬದಡುಗೆ ಮಾಡಿ ಸೇವಿಸಿದರು. ಅಲ್ಲದೇ, ಸಮೀಪದ ರಾಮನ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ, ಇಷ್ಟಾರ್ಥ ಈಡೇರಿಸುವಂತೆ ಪ್ರಾರ್ಥಿಸಿದರು.

ಶ್ರೀರಾಮ ಭಾವಚಿತ್ರಕ್ಕೆ ಪೂಜೆ: ಜಿಲ್ಲೆಯ ಪ್ರಮುಖ ರಸ್ತೆಗಳು, ವೃತ್ತದಲ್ಲಿ ವಿವಿಧ ಸಂಘ–ಸಂಸ್ಥೆಗಳಿಂದ ಶ್ರೀರಾಮನ ಭಾವಚಿತ್ರ ಇಟ್ಟು ಪೂಜೆ ಸಲ್ಲಿಸಲಾಯಿತು. ನಂತರ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ, ಕೋಸಂಬರಿ, ಬಾತ್, ಮೊಸರನ್ನ, ಸಿಹಿ ಪಂಗಲ್, ಕೇಸರಿ ಬಾತ್, ಲಾಡು, ಮೈಸೂರು ಪಾಕ್ ಸೇರಿದಂತೆ ವಿವಿಧ ಅಡುಗೆ ತಯಾರಿಸಿ ವಿತರಿಸಿದರು.

ಜೈ ಶ್ರೀರಾಮ್... ಜೈ ಶ್ರೀರಾಮ್ ಎಂಬ ಘೋಷಣೆ ಕೂಗುವ ಮೂಲಕ ಶ್ರೀರಾಮನ ಸ್ಮರಣೆ ಮಾಡಿದರು. ಅಲ್ಲದೇ ಪ್ರಮುಖ ಸ್ಥಳಗಳಲ್ಲಿ ದೊಡ್ಡ ಎಲ್‌ಇಡಿ ಪರದೆ ಅಳವಡಿಸಿ, ಅಯ್ಯೋಧೆಯಲ್ಲಿ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರವನ್ನು ವೀಕ್ಷಣೆ ಮಾಡಿದರು.

ಹೋಮ: ಚಾಮರಾಜನಗರದ ಶಂಕರಪುರ ಬಡಾವಣೆಯಲ್ಲಿ ಶ್ರೀರಾಮತಾರಕ ಹೋಮ ಸೋಮವಾರ ಬೆಳಗ್ಗೆಯಿಂದಲೇ ನಡೆಯಿತು. ಈ ವೇಳೆ ನೂರಾರು ಭಕ್ತರು ಭಾಗಿಯಾಗಿದ್ದರು. ಅಗ್ರಹಾರ ಬೀದಿಯ ಪಟ್ಟಾಭಿ ರಾಮಮಂದಿರದಲ್ಲೂ ಹೋಮ ಪೂಜೆ ನಡೆಯಿತು. ಅಯೋಧ್ಯೆಯಲ್ಲಿ ನಡೆಯುತ್ತಿರುವ ರಾಮ ಪ್ರಾಣ ಪ್ರತಿಷ್ಠೆಯ ಅಂಗವಾಗಿ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಮಾರಮ್ಮನ ದೇವಸ್ಥಾನದ ಎದುರಿನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದವು.

ಶತಮಾನಗಳ ಕನಸು ಈಡೇರಿದ ಪವಿತ್ರ ದಿನ



ಚಾಮರಾಜನಗರದದ ಹಳೇ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮುಖಂಡ ಎಂ.ರಾಮಚಂದ್ರ ಶ್ರೀರಾಮ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಚಾಮರಾಜನಗರ, ಜ.22– ಶತಮಾನಗಳ ಹೋರಾಟ ಮತ್ತು ತ್ಯಾಗದ ಕನಸು ಈಡೇರಿದ ಬಾಲರಾಮನ ಪ್ರತಿಷ್ಠಾಪನೆಯ ಈ ಪವಿತ್ರ ದಿನ ಎಂದು ಹಿಂದೂ ಮುಖಂಡ ಎಂ.ರಾಮಚಂದ್ರ ಹೇಳಿದರು.

ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಸೋಮವಾರ ನಗರದ ಹಿಂದೂ ಮುಖಂಡರಾದ ಶ್ರೀಕಂಠಸ್ವಾಮಿ ಮತ್ತು ಕೃಷ್ಣಕುಮಾರ್ ಏರ್ಪಡಿಸಿದ್ದ ರಾಮೋತ್ಸವ, ಶ್ರೀರಾಮ ಕ್ಯಾಲೆಂಡರ್ ಬಿಡುಗಡೆ ಮತ್ತು ಪ್ರಸಾದ ವಿತರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಕರಸೇವರ ತ್ಯಾಗದ ಹೋರಾಟಕ್ಕೆ ಇಂದು ಫಲ ಸಿಕ್ಕಿದೆ. ರಾಮನ ಜನ್ಮ ಸ್ಥಳಕ್ಕೆ ಮುಕ್ತಿ ಸಿಕ್ಕಿ ಇಂದು ಭವ್ಯರಾಮ ಮಂದಿರ ನಿರ್ಮಾಣವಾಗಿದೆ ಎಂದರು. ಶ್ರೀಕಂಠಸ್ವಾಮಿ ಮತ್ತು ಕೃಷ್ಣಕುಮಾರ್ ಕರಸೇವಕರಾಗಿ ತೆರಳಿದ್ದರು. ಇಂದು ಅವರ ಕನಸು ಈಡೇರಿದ ದಿನ, ಅದಕೋಸ್ಕರ ಅಖಂಡ ಭಾರತದ ನಕ್ಷೆಯುಳ್ಳ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸುವ ಜೊತೆಗೆ ರಾಮಭಕ್ತರಿಗೆ ಪ್ರಸಾದ, ಸಿಹಿ ವಿತರಿಸಲಾಗಿದೆ. ಶ್ರೀರಾಮ ಒಳ್ಳೆಯದನ್ನು ಮಾಡಲಿ ಎಂದರು.

ಮುಖಂಡ ನಿಜಗುಣರಾಜು, ಹಿಂದೂ ಮುಖಂಡ ಶ್ರೀಕಂಠಸ್ವಾಮಿ ಮಾತನಾಡಿದರು. ಕೃಷ್ಣಕುಮಾರ್, ನಗರಸಭಾ ಸದಸ್ಯರಾದ ಚಂದ್ರಶೇಖರ್, ಮಂಜು, ಬಸವಣ್ಣ, ಮಹೋಜ್‌ಪಟೇಲ್, ಮುಖಂಡರಾದ ಸುರೇಶ್‌ನಾಯಕ, ಪರಮೇಶ್ವರಪ್ಪ, ನಾಗರಾಜು ಇತರರು ಭಾಗವಹಿಸಿದ್ದರು.



ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ರಾಮಮಂದಿರದಿಂದ ಹೂವಿನ ಪಲ್ಲಕಿಯಲ್ಲಿ ಶ್ರೀರಾಮನ ಭಾವಚಿತ್ರವನ್ನು ಉಪ್ಪಾರ ಸಮಾಜದಿಂದ ಮೆರವಣಿಗೆ ಮಾಡಲಾಯಿತು.

ಇಂದು ಯಳಂದೂರಿನಲ್ಲಿ ಕಾರ್ಮಿಕ ಪದ್ಧತಿ ನಿಷೇಧ ಕಾರ್ಯಾಗಾರ

ಚಾಮರಾಜನಗರ, ಜ.22–ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಯಳಂದೂರು ತಾಲೂಕು ಆಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಯ ಸಹಯೋಗದಲ್ಲಿ ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ ಪದ್ಧತಿ ನಿಷೇಧ ಕುರಿತ ತರಬೇತಿ ಕಾರ್ಯಾಗಾರವನ್ನು ಜ.23ರಂದು ಬೆಳಗ್ಗೆ 10.30 ಗಂಟೆಗೆ ಯಳಂದೂರಿನ ಕೆಡಿಪಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮಿ ಕಾರ್ಯಾಗಾರ ಉದ್ಘಾಟಿಸಲಿದ್ದು, ನ್ಯಾಯಾಧೀಶ ಎಂ.ಶ್ರೀಧರ ಅಧ್ಯಕ್ಷತೆ ವಹಿಸಲಿದ್ದಾರೆ. ಯಳಂದೂರು ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಎಂ.ಆಕರ್ಷ, ತಹಶೀಲ್ದಾರ್ ಆರ್.ಜಯಪ್ರಕಾಶ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಸರಸ್ವತಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ಸವಿತಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಚಲುಮಾಜ್ ಇತರರು ಭಾಗವಹಿಸಲಿದ್ದಾರೆ.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಆಂಜನೇಯಸ್ವಾಮಿ ದೇವಾಲಯ ಆವರಣದಲ್ಲಿ ಶ್ರೀರಾಮ ದೇವರಿಗೆ ಪೂಜೆ ಸಲ್ಲಿಸಿ ಪ್ರಸಾದ ವಿತರಿಸಲಾಯಿತು.

ಒಂದನೇ ಪುಟದಿಂದ

ಅಯೋಧ್ಯೆಯಲ್ಲಿ ಬಾಲರಾಮ ವಿರಾಜಮಾನ

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಅವರ ಕುಟುಂಬ, ಆಹ್ವಾನಿತ ಸಾಧು-ಸಂತರು, ಚಿತ್ರತಾರೆಯರು. ಉದ್ಯಮಿಗಳು ಸೇರಿದಂತೆ ಸುಮಾರು 7,000 ಗಣ್ಯರು ಉಪಸ್ಥಿತರಿದ್ದು, ಶ್ರೀ ರಾಮ ಘೋಷಣೆ ಮೂಲಕ ಸಂಭ್ರಮಿಸಿದರು. ಇದಕ್ಕೂ ಮುನ್ನ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಬಾಲರಾಮನ ವಿಗ್ರಹಕ್ಕೆ ಮುಂಜಾನೆ ಮೊದಲ ಮಹಾ ಮಜ್ಜನ ನೆರವೇರಿಸಲಾಯಿತು. 114 ಪುಣ್ಯ ಕ್ಷೇತ್ರಗಳಿಂದ ತಂದಿದ್ದ ತೀರ್ಥಗಳನ್ನು ಮಹಾ ಮಜ್ಜನಕ್ಕೆ ಬಳಸಲಾಯಿತು. ಪ್ರಾಣ ಪ್ರತಿಷ್ಠಾಪನೆಗೂ ಮುನ್ನ ನಾಡಿನ ಹೆಸರಾಂತ ಸಂಗೀತಗಾರರು ರಾಮ ಗೀತೆ ಗಳನ್ನು ಹಾಡುವ ಮೂಲಕ ಭಕ್ತಿ ಮೆರೆದರು. ನಂತರ ಪ್ರಧಾನಿ ಮೋದಿ ಆಹ್ವಾನಿತ ಗಣ್ಯರನ್ನುದ್ದೇಶಿಸಿ, ಸುಮಾರು 35 ನಿಮಿಷ ಭಾಷಣ ಮಾಡಿದರು. ರಾಮ ಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆಯಾಗುತ್ತಿದ್ದಂತೆಯೇ ಇಡೀ ಅಯೋಧ್ಯೆ ನಗರದಲ್ಲಿ ಜೈ ಶ್ರೀರಾಮ್ ಘೋಷಣೆ ಮುಗಿಲು ಮುಟ್ಟಿತು. ಸಂಜೆ ಅಯೋಧ್ಯೆಯಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ರಾತ್ರಿ ಇಡೀ ಅಯೋಧ್ಯೆ ದೀಪಗಳಿಂದ ಕಂಗೊಳಿಸಿತು. ನಗರದ ಮನೆ ಮನೆ ಯಲ್ಲೂ, ಅಂಗಡಿಗಳಲ್ಲಿ ಹಾಗೂ ಎಲ್ಲಾ ರಸ್ತೆಗಳಲ್ಲೂ ದೀಪ ಬೆಳಗಿಸುವ ಮೂಲಕ ದೀಪೋತ್ಸವ ಆಚರಿಸಲಾಯಿತು. ಡ್ರೋಣ್‌ಗಳ ಮೂಲಕ ಆಗಸದಲ್ಲಿ ವರ್ಣರಂಜಿತವಾಗಿ ರಾಮಾಯಣ ದೃಶ್ಯಗಳ ಚಿತ್ತಾರವನ್ನೂ ಮೂಡಿಸಲಾಯಿತು. ನೆರೆದಿದ್ದ ಭಕ್ತರು ಈ ದೃಶ್ಯಗಳನ್ನು ಕಂಡು ಪುಳಕಿತರಾದರು.

ರಾಮ ನಮ್ಮವನಲ್ಲ; ಅವನು ಎಲ್ಲರಿಗೂ ಸೇರಿದವನು; ರಾಮ ಸಮಸ್ಯೆಯಲ್ಲ; ಪರಿಹಾರ



ಪ್ರಧಾನಿ ಮೋದಿ ಜಪ

ಅಯೋಧ್ಯೆ, ಜ. 22- ಅಯೋಧ್ಯೆಯ ರಾಮ ಮಂದಿರವು ರಾಮನ ರೂಪದಲ್ಲಿರುವ ರಾಷ್ಟ್ರೀಯ ಪ್ರಜ್ಞೆಯ ದೇವಾಲಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನಂತರ ರಾಮ ಮಂದಿರದ ಆವರಣದಲ್ಲಿ ನೆರೆದಿದ್ದ ಆಹ್ವಾನಿತ ಗಣ್ಯರನ್ನುದ್ದೇಶಿಸಿ ಮಾತನಾಡಿದ ಅವರು, ಶತ ಶತಮಾನಗಳ ಕಾಯುವಿಕೆಯ ನಂತರ ಶ್ರೀರಾಮ ಅಂತಿಮವಾಗಿ ತನ್ನ ನಿವಾಸಕ್ಕೆ ಬಂದಿದ್ದಾನೆ. ಶತಮಾನ ಕಾಲ ನಮ್ಮ ತಾಳ್ಮೆ, ನಮ್ಮ ತ್ಯಾಗಗಳ ನಂತರ ರಾಮ ಬಂದಿದ್ದಾನೆ. ಈ ಶುಭ ಸಂದರ್ಭದಲ್ಲಿ ದೇಶದ ಎಲ್ಲಾ ಜನರಿಗೆ ಅನೇಕ ಅಭಿನಂದನೆಗಳು. ಶತಮಾನಗಳ ಅಭೂತಪೂರ್ವ ತಾಳ್ಮೆ, ಅಸಂಖ್ಯಾತ ತ್ಯಾಗ ಮತ್ತು ತಪಸ್ಸಿನ ನಂತರ, ನಮ್ಮ ಪ್ರಭು ರಾಮ ಬಂದಿದ್ದಾರೆ ಎಂದರು.

ಬಾಲರಾಮ ಇನ್ನು ಮುಂದೆ ಟೆಂಟ್‌ನಲ್ಲಿ ವಾಸಿಸುವುದಿಲ್ಲ. ಭವ್ಯ ದೈವಿಕ ಮಂದಿರದಲ್ಲಿ ವಾಸಿಸುತ್ತಾನೆ. ರಾಮ ಮಂದಿರ ನಿರ್ಮಾಣದ ನಂತರ ದೇಶವಾಸಿಗಳಲ್ಲಿ ಹೊಸ ಉತ್ಸಾಹ ಮೂಡಿದೆ. ಇಂದು ನಮಗೆ ಶತಮಾನಗಳ ಪರಂಪರೆ ಸಿಕ್ಕಿದೆ. 2024ರ ಜನವರಿ 22ರ ಈ ಸೂರ್ಯ ಅದ್ಭುತವಾದ ಸೆಳೆತ ನೀಡಿದ್ದಾನೆ. ಇದು ಕ್ಯಾಲೆಂಡರ್‌ನಲ್ಲಿ ಬರೆದ ದಿನಾಂಕವಲ್ಲ ಬದಲಾಗಿ ಹೊಸ ಕಾಲ ಚಕ್ರದ ಮೂಲವಾಗಿದೆ. ಜನರು ಇದನ್ನು ಸಾವಿರಾರು ವರ್ಷಗಳವರೆಗೆ ನೆನಪಿಸಿಕೊಳ್ಳುತ್ತಾರೆ ಎಂದರು. ನಾನು ಭಗವಾನ್ ರಾಮನ ಕ್ಷಮೆ ಕೋರುತ್ತೇನೆ. ನಮ್ಮ ತಪಸ್ಸಿನಲ್ಲಿ ಕೆಲವು ನ್ಯೂನತೆಗಳು ಇದ್ದಿರಬಹುದು. ಹಾಗಾಗಿಯೇ ನಾವು ಮಂದಿರ ನಿರ್ಮಾಣದ ಕೆಲಸವನ್ನು ಇಷ್ಟು ದೀರ್ಘ ಕಾಲ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಆ ನ್ಯೂನತೆ ಈಗ ನಿವಾರಣೆಯಾಗಿದೆ. ಭಗವಾನ್ ರಾಮ ನಮ್ಮನ್ನು ಕ್ಷಮಿಸುತ್ತಾನೆ ಎಂಬ ವಿಶ್ವಾಸ ನನಗಿದೆ ಎಂದು ಹೇಳಿದ ಅವರು, ಭಗವಾನ್ ರಾಮನ ಅಸ್ತಿತ್ವದ ಬಗ್ಗೆ ಕಾನೂನು ಹೋರಾಟವು ದಶಕಗಳಿಂದ ನಡೆಯಿತು. ರಾಮನ ಅಸ್ತಿತ್ವವನ್ನು ಪ್ರಶ್ನಿಸಲಾಯಿತು. ನ್ಯಾಯವನ್ನು ನೀಡಿದ ಮತ್ತು ಭಗವಾನ್ ರಾಮನ ದೇವಾಲಯವನ್ನು ಕಾನೂನು ಬದ್ಧ ರೀತಿಯಲ್ಲಿ ನಿರ್ಮಿಸಿದ ನ್ಯಾಯಾಂಗಕ್ಕೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಭಾರತದ ಸುಪ್ರೀಂಕೋರ್ಟ್ 2019ರ ನವೆಂಬರ್ 9 ರಂದು ತೀರ್ಪು ನೀಡುವ ಮೂಲಕ ದೇವಾಲಯ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದ ಎಂದರು.

ರಾಮ ಮಂದಿರ ನಿರ್ಮಾಣವಾದರೆ ಬೆಂಕಿ ಹೊತ್ತಿಕೊಳ್ಳುತ್ತದೆ ಎಂದು ಕೆಲವರು ಹೇಳುತ್ತಿದ್ದರು. ಆದರೆ, ರಾಮ ಬೆಳಕು. ರಾಮ ಸಮಸ್ಯೆಯಲ್ಲ, ಪರಿಹಾರ. ರಾಮ ನಮ್ಮವನಲ್ಲ, ಅವನು ಎಲ್ಲರಿಗೂ ಸೇರಿದವನು. ರಾಮ ಮಂದಿರವನ್ನು ವಿರೋಧಿಸುವವರು ಅಯೋಧ್ಯೆಗೆ ಬಂದು ರಾಮನ ಶಕ್ತಿಯನ್ನು ಅನುಭವಿಸಿ, ನಿಮ್ಮ ಆಲೋಚನೆಗಳನ್ನು ಮರುಪರಿಶೀಲಿಸಿ ಎಂದು ಮೋದಿ ಹೇಳಿದರು.

ರಾಮ ಭಾರತದ ನಂಬಿಕೆ, ರಾಮ ಭಾರತದ ಅಡಿಪಾಯ. ರಾಮ ಭಾರತದ ಕಲ್ಪನೆ, ರಾಮ ಭಾರತದ ಕಾನೂನು, ರಾಮ ಭಾರತದ ಪ್ರತಿಷ್ಠೆ, ರಾಮ ಭಾರತದ ವೈಭವ, ರಾಮ ನಾಯಕ ಮತ್ತು ರಾಮ ನೀತಿ. ರಾಮ ಶಾಶ್ವತ. ರಾಮನನ್ನು ಗೌರವಿಸಿದಾಗ, ಅದರ ಪರಿಣಾಮವು ವರ್ಷಗಳು ಅಥವಾ ಶತಮಾನಗಳವರೆಗೆ ಉಳಿಯುವುದಿಲ್ಲ, ಅದರ ಪರಿಣಾಮವು ಸಾವಿರಾರು ವರ್ಷಗಳವರೆಗೆ ಇರುತ್ತದೆ ಎಂದು ಹೇಳಿದ ಪ್ರಧಾನಿ ಮೋದಿ ತಮ್ಮ 35 ನಿಮಿಷದ ಭಾಷಣದಲ್ಲಿ 114 ಬಾರಿ ರಾಮ ನಾಮ ಸ್ಮರಿಸಿದರು.

ರಾಮ ಮಂದಿರ 'ರಾಷ್ಟ್ರ ಮಂದಿರ'



ಅಯೋಧ್ಯೆ, ಜ. 22- ಐನೂರು ವರ್ಷಗಳ ಕಾಯುವಿಕೆಯ ನಂತರ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಅಯೋಧ್ಯೆಯಲ್ಲಿ ನೆರವೇರಿದೆ. ಇಡೀ ದೇಶವು ರಾಮಮಯ ಆಗಿದೆ. ತ್ರೇತಾಯುಗಕ್ಕೆ ಮತ್ತೆ ಕಾಲಿಟ್ಟಂತೆ ಭಾಸವಾಗುತ್ತಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.

ಸೋಮವಾರ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಆದ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಯೋಗಿ ಆದಿತ್ಯನಾಥ್, ರಾಮ ಮಂದಿರವನ್ನು 'ರಾಷ್ಟ್ರ ಮಂದಿರ' ಎಂದು ಕರೆದರು. ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಡೆದಿರುವುದು ಐತಿಹಾಸಿಕ ಸಂದರ್ಭ ಎಂಬುದರಲ್ಲಿ ಅನುಮಾನವೇ ಇಲ್ಲ. ಇದು ನಮ್ಮೆಲ್ಲರಿಗೂ ಭಾವನಾತ್ಮಕ ಸಂದರ್ಭ. ದೇಶದ ಬಹುಸಂಖ್ಯಾತ ಸಮುದಾಯದ ಜನ ತಮ್ಮದೇ ದೇಶದಲ್ಲಿ, ತಮ್ಮ ದೇವರ ಜನ್ಮಸ್ಥಳದಲ್ಲಿ ಮಂದಿರ ನಿರ್ಮಿಸಲು ಸರಿಸುಮಾರು 500 ವರ್ಷ ಕಾಯ್ದ ನಿದರ್ಶನ ವಿಶ್ವದಲ್ಲಿ ಇದೊಂದೇ ಇರಬೇಕು ಎಂದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿರುವುದರಿಂದ ರಾಮ ರಾಜ್ಯದ ಘೋಷಣೆ ಆದಂತಾಗಿದೆ. ಇನ್ನು ಮುಂದೆ ಅಯೋಧ್ಯೆಯ ಬೀದಿಗಳಲ್ಲಿ ಗುಂಡಿನ ಸದ್ದು ಕೇಳುವುದಿಲ್ಲ, ಕರ್ಫ್ಯೂ ಹೇರುವ ಸಂದರ್ಭ ಇರುವುದಿಲ್ಲ. ಈಗ ದೀಪೋತ್ಸವ ಮತ್ತು ರಾಮೋತ್ಸವ ನಡೆಯಲಿದೆ. ರಾಮನ ಕೀರ್ತನೆಗಳು ಗಲ್ಲಿ ಗಲ್ಲಿಗಳಲ್ಲಿ ಪ್ರತಿಧ್ವನಿಸುತ್ತದೆ. ಏಕೆಂದರೆ ಬಾಲರಾಮನ ಸ್ಥಾಪನೆಯು ರಾಮ ರಾಜ್ಯದ ಘೋಷಣೆಯನ್ನು ಸಹ ಸೂಚಿಸುತ್ತದೆ ಎಂದು ಎಂದು ಯೋಗಿ ಆದಿತ್ಯನಾಥ್ ಹೇಳಿದರು.

ಮಂದಿರ ನಿರ್ಮಾಣ ಕಾರ್ಮಿಕರಿಗೆ ಪ್ರಧಾನಿಯಿಂದ ಪುಷ್ಪವೃಷ್ಟಿ



ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಸಾಂಗವಾಗಿ ನೆರವೇರಿದ ನಂತರ ಪ್ರಧಾನಿ ಮೋದಿಯವರು ರಾಮ ಮಂದಿರ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಕಾರ್ಮಿಕರನ್ನು ಭೇಟಿ ಮಾಡಿ, ಅವರ ಮೇಲೆ ಪುಷ್ಪವೃಷ್ಟಿಗೈದು ಸಂಭ್ರಮಿಸಿದರು. ಇದೇ ವೇಳೆ ಮೋದಿ ಜಟಾಯು ಪುತ್ಥಳಿಯನ್ನೂ ಅನಾವರಣಗೊಳಿಸಿದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀರಾಮ ಪಟ್ಟಾಭಿಷೇಕ





ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸೋಮವಾರ ಶ್ರೀರಾಮ ದೇವರ ವಿಶೇಷ ಪೂಜಾ ಮಹೋತ್ಸವವನ್ನು ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೆರವೇರಿಸಿದರು. ಮತ್ತೊಂದು ಚಿತ್ರದಲ್ಲಿ ಆಶ್ರಮದ ಆವರಣದಲ್ಲಿ ನಡೆದ ಭವ್ಯ ರಥೋತ್ಸವದ ಜೊತೆ ವೇಷಧಾರಿ ಮಕ್ಕಳನ್ನು ಕಾಣಬಹುದು.

ಮೈಸೂರು,ಜ.22(ಎಂಟಿವೈ)- ಪೂರ್ವಜರು, ಅಪಾರ ಸಾಧು-ಸಂತರ ತಪಸ್ಸಿನ ಫಲವಾಗಿ ಸುದೀರ್ಘ 500 ವರ್ಷಗಳ ನಂತರ ರಾಮನ ಊರು ಅಯೋಧ್ಯೆಯಲ್ಲಿ ಇಂದು ಚರಿತ್ರಾತ್ಮಕ ಕಾರ್ಯಕ್ರಮ ಜರುಗಿದೆ ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಂತಸ ವ್ಯಕ್ತಪಡಿಸಿದ್ದಾರೆ.

ಅಯೋಧ್ಯೆಯಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸೋಮವಾರ ಆಯೋಜಿಸಿದ್ದ ರಾಮದೇವರ ಪಟ್ಟಾಭಿಷೇಕ ಕಾರ್ಯಕ್ರಮದ ನಂತರ ಆಶೀರ್ವಚನ ನೀಡಿ ಮಾತನಾಡಿದ ಶ್ರೀಗಳು, ಇಂದು ಅಯೋಧ್ಯೆ ಮಹತ್ತರ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದೆ. ಅಪಾರ ಜನರ ಅಪೇಕ್ಷೆ, ನಮ್ಮ ತಾತ-ಮುತ್ತಾತರು, ಸಾಧು ಸಂತರು 5 ಶತಮಾನಗಳಿಂದ ಮಾಡಿದ ತಪಸ್ಸು ಇಂದು ಸಾಕಾರ ಗೊಳ್ಳುತ್ತಿದೆ. ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ದತ್ತಪೀಠದಲ್ಲೂ ರಾಮೋತ್ಸವ ಹಮ್ಮಿಕೊಂಡಿದ್ದೇವೆ. ಶ್ರೀ ರಾಮ ಸಾಮ್ರಾಜ್ಯ ಪಟ್ಟಾಭಿಷೇಕ ನೆರವೇರಿಸಿದ್ದೇವೆ. ಹಿಂದೆ ನಾವು ಅಯೋಧ್ಯೆಗೆ ಹೋಗಿದ್ದಾಗ ಶತಶ್ಲೋಕ ರಾಮಾಯಣ ಪಾರಾಯಣ ಮಾಡಿ ಬಂದಿದ್ದೇವೆ. ಅಂದು ಅಯೋಧ್ಯೆಯಲ್ಲಿ ಇನ್ನು 12 ವರ್ಷದೊಳಗೆ ರಾಮನ ಆಲಯ ನೆರವೇರುತ್ತದೆ ಎಂದು ಸಂಕಲ್ಪ ಮಾಡಿದ್ದೆವು. ಅದು ಇಂದು ನೆರವೇರಿದೆ. ಇದು ನನಗೆ ಅತ್ಯಂತ ಸಂತಸ ತಂದಿದೆ ಎಂದು ತಿಳಿಸಿದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯಂತಹ ಅದ್ಭುತ ಕ್ಷಣ ನೋಡಿ ನಮಗೆ ಮೈ ಜುಮ್ ಎಂದಿದೆ. ಬಾಲರಾಮನ ಮೂರ್ತಿಯನ್ನು ನಮ್ಮ ಮೈಸೂರಿನ ಯೋಗಿರಾಜ್ ಅವರು ಕೆತ್ತಿರುವುದು ಅತ್ಯಂತ ಸಂತಸ. ಅವರಿಗೆ ಒಳ್ಳೆಯದಾಗಲಿ. ಅರುಣ್ ಯೋಗಿರಾಜ್ ಅವರ ತಂದೆ ನಮ್ಮ ಆಶ್ರಮದ ಭಕ್ತರು. ಮೈಸೂರಿನವರು ಎಂಬುದೇ ಅತಿ ಸಂತಸದ ವಿಷಯ ಎಂದರು.

ಶ್ರೀ ರಾಮರಿಗೂ ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ. ಶ್ರೀರಾಮರು ಬಂದು ಹೋದ ಅನೇಕ ಕ್ಷೇತ್ರಗಳು ಕರ್ನಾಟಕದಲ್ಲಿವೆ. ಅವರು ಸೀತೆಯನ್ನು ಹುಡುಕಿಕೊಂಡು ಬಂದಿದ್ದರು. ಆಂಜನೇಯಸ್ವಾಮಿ ಹಂಪೆಯ ಪಂಪಾ ನದಿ ತೀರದಲ್ಲಿ ಜನಿಸಿದ್ದರು ಎಂದು ಹೇಳಲಾಗುತ್ತದೆ. ಆ ಕಾರಣದಿಂದ ಕರುನಾಡು ಹನುಮನಾಡು ಆಗಿದೆ. ಆದರೆ ಕೆಲವರು ತಿರುಪತಿಯಲ್ಲಿ ಆಂಜನೇಯಸ್ವಾಮಿ ಜನನ ಎಂದು ಹೇಳುತ್ತಾರೆ. ಒಟ್ಟು ಆರು ಕಡೆ ಹನುಮ ಜಯಂತಿ ಮಾಡಲಾಗುತ್ತದೆ. ಇದರಲ್ಲಿ ತಪ್ಪೇನಿಲ್ಲ, ದೇವರು ಎಲ್ಲಾ ಕಡೆ ಇರುತ್ತಾರೆ ಎಂದು ಅಭಿಪ್ರಾಯಪಟ್ಟರು.

ಭರತ ಭೂಮಿಯಲ್ಲಿ ಜನಿಸಿದ ನಾವೆಲ್ಲ ರಾಮನ ಅನುಯಾಯಿಗಳು. ನಾವು ದತ್ತನ ಭಕ್ತರಾದರೂ ರಾಮ ಭಕ್ತರೂ ಆಗಿದ್ದೇವೆ. ಅಯೋಧ್ಯೆಗೂ ನಮ್ಮ ಆಶ್ರಮಕ್ಕೂ ನಂಟಿದೆ. ಪ್ರಧಾನಿ ನರೇಂದ್ರ ಮೋದಿ ಅಯೋಧ್ಯೆಯಲ್ಲಿ ಅದ್ಭುತವೊಂದನ್ನು ನೆರವೇರಿಸಿದ್ದಾರೆ. ಈ ಮಹೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿದ್ದರು. ಆದರೆ ನನಗೆ ಇಂದು ಹೋಗಲಾಗಲಿಲ್ಲ ಮುಂದಿನ ದಿನಗಳಲ್ಲಿ ಹೋಗುತ್ತೇನೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ರಥೋತ್ಸವ: ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ 9 ಗಂಟೆಗೆ, ದತ್ತಪೀಠದ ಶ್ರೀದತ್ತ ವೇಂಕಟೇಶ್ವರ ದೇವಸ್ಥಾನದಿಂದ ನಾದಮಂಟಪಕ್ಕೆ ಶ್ರೀರಾಮದೇವರ ರಥೋತ್ಸವ ನೆರವೇರಿತು. ಯಾಗಶಾಲೆಯಲ್ಲಿ ಶ್ರೀರಾಮ ತಾರಕ ಮಹಾಯಾಗ ನೆರವೇರಿಸಲಾಯಿತು. ನಂತರ ಶ್ರೀರಾಮದೇವರ ಮಹಾಸಾಮ್ರಾಜ್ಯ ಪಟ್ಟಾಭಿಷೇಕ ಹಾಗೂ ಶತ ಶ್ಲೋಕಿ ರಾಮಾಯಣ ಪಾರಾಯಣ ಮಾಡಲಾಯಿತು.

ಕರ್ನಾಟಕ-ಗೋವಾ ರಣಜಿ ಕ್ರಿಕೆಟ್ ಪಂದ್ಯ ಡ್ರಾ



ಡ್ರಾನಲ್ಲಿ ಅಂತ್ಯಗೊಂಡ ಕರ್ನಾಟಕ ಹಾಗೂ ಗೋವಾ ನಡುವಿನ ರಣಜಿ ಪಂದ್ಯ



ಶತಕದ ಸಂಭ್ರಮದಲ್ಲಿ ಸುಯಶ್ ಪ್ರಭುದೇಸಾಯಿ

ಮೈಸೂರು, ಜ.22(ಎಂಟಿವೈ)- ಕರ್ನಾಟಕ ಹಾಗೂ ಗೋವಾ ನಡುವಿನ ರಣಜಿ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದ್ದು, ಮೊದಲ ಇನ್ನಿಂಗ್ಸ್ ಮುನ್ನಡೆ ಆಧಾರದ ಮೇಲೆ ಕರ್ನಾಟಕ 3 ಅಂಕ ಗಳಿಸಿತು. ಇಲ್ಲಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಮೈದಾನದಲ್ಲಿ ನಡೆದ ಪಂದ್ಯದ ಅಂತಿಮ ದಿನವಾದ ಸೋಮವಾರ ಗೋವಾ ಬ್ಯಾಟ್ಸ್‌ಮನ್‌ಗಳು ಉತ್ತಮ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ಪಂದ್ಯ ಡ್ರಾ ಮಾಡಿಕೊಳ್ಳಲು ಯಶಸ್ವಿಯಾದರು.

177 ರನ್‌ಗಳ ಹಿನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಗೋವಾ 100 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 282 ರನ್ ಗಳಿಸಿತು. ತಂಡದ ಪರ ಆರಂಭಿಕ ಆಟಗಾರ ಸುಯಶ್ ಪ್ರಭುದೇಸಾಯಿ (ಅಜೇಯ 143) ಶತಕ ಬಾರಿಸಿ ತಂಡಕ್ಕೆ ಆಸರೆಯಾದರು.

ಮೂರನೇ ದಿನದಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 93 ರನ್ ಗಳಿಸಿದ್ದ ಗೋವಾ 4ನೇ ದಿನದಾಟದ ಆರಂಭದಲ್ಲೇ ಕೆ.ವಿ. ಸಿದ್ಧಾರ್ಥ್ (57) ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ವಿಕೆಟ್ ಬೀಳದಂತೆ ಎಚ್ಚರಿಕೆ ವಹಿಸಿದ ಗೋವಾ ಬ್ಯಾಟ್ಸ್‌ಮನ್‌ಗಳು ರಕ್ಷಣಾತ್ಮಕ ಆಟಕ್ಕೆ ಮೊರೆ ಹೋದರು. ಅಲ್ಲದೇ ಒಂದೊಂದೆ ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು.

ಈ ವೇಳೆ ತಂಡವನ್ನು ಸೋಲಿನ ದವಡೆಯಿಂದ ಪಾರು ಮಾಡುವ ಹೊಣೆಗಾರಿಕೆ ಹೊತ್ತ ಸುಯಶ್ ಪ್ರಭುದೇಸಾಯಿ ಅಜೇಯ 143 ರನ್ ಬಾರಿಸುವ ಮೂಲಕ ತಂಡಕ್ಕೆ ಆಸರೆಯಾದರು. 4ನೇ ವಿಕೆಟ್ ಜೊತೆಯಾಟದಲ್ಲಿ ದೀಪ್ರಾಜ್ ಗಾಂವ್ಕರ್(36) ಅವರೊಂದಿಗೆ 97 ರನ್‌ಗಳ ಕಲೆಹಾಕಿದರು.

ಆ ನಂತರದ ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದ ಸ್ನೇಹಲ್ ಕೌತಂಕರ್(8), ನಾಯಕ ದರ್ಶನ್ ಮಿಶಲ್(13) ಹಾಗೂ ಅರ್ಜುನ್ ತೆಂಡುಲ್ಕರ್(6) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲದೆ ಔಟಾದರು. ಆದರೂ, ಕರ್ನಾಟಕದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಸುಯಶ್ ಪ್ರಭುದೇಸಾಯಿ, ಭರ್ಜರಿ ಶತಕ ಬಾರಿಸಿ ಕೊನೆಯವರೆಗೂ ವಿಕೆಟ್ ಕಾಪಾಡಿಕೊಂಡರು. ಇದರಿಂದ ಪಂದ್ಯ ಡ್ರಾ ಆಯಿತು. ಕರ್ನಾಟಕದ ಪರ ವೈಶಾಖ್ ಹಾಗೂ ರೋಹಿತ್ ಕುಮಾರ್ ತಲಾ 2 ವಿಕೆಟ್ ಪಡೆದರೆ, ಶುಭಾಂಗ್ ಹೆಗಡೆ ಮತ್ತು ವೆಂಕಟೇಶ್ ತಲಾ 1 ವಿಕೆಟ್ ಪಡೆದುಕೊಂಡರು.

ಕರ್ನಾಟಕಕ್ಕೆ 3 ಅಂಕ: ಗೋವಾ ವಿರುದ್ಧದ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್ ನಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಕರ್ನಾಟಕ, ಇನ್ನಿಂಗ್ಸ್ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. ಇದರೊಂದಿಗೆ ಮಾಯಂಕ್ ಅಗರ್ವಾಲ್ ನೇತೃತ್ವದ ಕರ್ನಾಟಕ 3 ಅಂಕ ತನ್ನದಾಗಿಸಿಕೊಂಡಿತು. ಆ ಮೂಲಕ ಎಲೈಟ್ 'ಸಿ' ಗುಂಪಿನಲ್ಲಿರುವ ಕರ್ನಾಟಕ ಆಡಿರುವ 3 ಪಂದ್ಯದಲ್ಲಿ ಒಂದು ಗೆಲುವು, 1 ಸೋಲು ಮತ್ತು 1 ಪಂದ್ಯವನ್ನು ಡ್ರಾ ಮಾಡಿಕೊಂಡು 9 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದೆ.

ಸಂಕ್ಷಿಪ್ತ ಸ್ಕೋರ್

ಗೋವಾ ಮೊದಲ ಇನ್ನಿಂಗ್ಸ್ 321ಕ್ಕೆ ಆಲೌಟ್, ಎರಡನೇ ಇನ್ನಿಂಗ್ಸ್: 100 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 282 ರನ್

ಕರ್ನಾಟಕ ಮೊದಲ ಇನ್ನಿಂಗ್ಸ್: 126.4 ಓವರ್‌ನಲ್ಲಿ 9 ವಿಕೆಟ್ ನಷ್ಟಕ್ಕೆ 498 ರನ್‌ಗೆ ಡಿಕ್ಲೇರ್

ಬಾಲರಾಮ ಪ್ರತಿಷ್ಠಾಪನೆ; ಸಿದ್ದಗಂಗಾ ಡಾ.ಶಿವಕುಮಾರ ಸ್ವಾಮಿಗಳ ಸ್ಮರಣೆ



ಮೈಸೂರಿನ ರಾಮಾನುಜ ರಸ್ತೆಯಲ್ಲಿ ಅಯೋಧ್ಯೆ 'ಬಾಲರಾಮ'ನ ಪ್ರತಿಷ್ಠಾಪನೆ ಹಾಗೂ ಸಿದ್ದಗಂಗಾ ಶ್ರೀ ಡಾ.ಶಿವಕುಮಾರ ಸ್ವಾಮೀಜಿಯವರ ಸ್ಮರಣೆ ಅಂಗವಾಗಿ ಮಜ್ಜಿಗೆ, ಪಾನಕ ವಿತರಿಸಲಾಯಿತು. ಮಡಿವಾಳ ಮಠದ ಶ್ರೀ ಅಡವಿ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರಿದ್ದರು

ಮೈಸೂರು, ಜ.22(ಎಂಕೆ)- ಮೈಸೂರಿನ ರಾಮಾನುಜ ರಸ್ತೆಯಲ್ಲಿ ಅಯೋಧ್ಯೆ 'ಬಾಲರಾಮ'ನ ಪ್ರಾಣ ಪ್ರತಿಷ್ಠಾಪನೆ ಹಾಗೂ ಸಿದ್ದಗಂಗಾ ಶ್ರೀ ಶಿವಕುಮಾರ ಸ್ವಾಮೀಜಿಯವರ ಸ್ಮರಣೆ ಹಿನ್ನೆಲೆ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಸ್ಥಳೀಯ ನಿವಾಸಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಯೋಧ್ಯೆ ಬಾಲರಾಮ ಹಾಗೂ ಶ್ರೀ ಶಿವಕುಮಾರ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನೂರಾರು ಜನರಿಗೆ ಮಜ್ಜಿಗೆ ಮತ್ತು ಪಾನಕ ವಿತರಿಸಿದರು. ಈ ವೇಳೆ ಮಾತನಾಡಿದ ಅವರು ಅಯೋಧ್ಯೆ ಬಾಲರಾಮ ದಿವ್ಯ ಬೆಳಕಿನಲ್ಲಿ, ಸಿದ್ದಗಂಗಾ ಶ್ರೀ ಶಿವಕುಮಾರ ಸ್ವಾಮೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಸಹಬಾಳ್ವೆಯಿಂದ ಬದುಕಬೇಕು ಎಂದು ತಿಳಿಸಿದರು.

ಮಡಿವಾಳ ಮಠದ ಶ್ರೀ ಅಡವಿ ಸ್ವಾಮೀಜಿ ಅಯೋಧ್ಯೆ ಬಾಲರಾಮನ ಆಶೀರ್ವಾದ ಎಲ್ಲರ ಮೇಲಿದೆ ಎಂದು ತಿಳಿಸಿದರು. ನಗರಪಾಲಿಕೆ ಮಾಜಿ ಸದಸ್ಯರಾದ ಶಾಂತ ವೀರೇಂದ್ರಸ್ವಾಮಿ, ಸುನೀಲ್, ಸಮಾಜ ಸೇವಕಿ ವಿದ್ಯಾ, ಸ್ಥಳೀಯ ಮುಖಂಡರಾದ ಮಲ್ಲೇಶ್, ವಕೀಲ ವಾಮನ್, ಆಟೋ ಮಹೇಶ್, ರವಿಶಂಕರ್, ವಸಂತ್, ಮಾದೇಶ್, ಬಾಳೆಕಾಯಿ ಮಹೇಶ್, ಶ್ರೀಕಾಂತ, ಅಶೋಕ್, ಪ್ರಭು, ನಿತಿ, ಅಂಜು, ಚೇತನ್, ಚಂದ್ರು, ಶ್ರೇಯಸ್, ಯಶು, ಅಭಿಷೇಕ, ಶಿವು, ಅಭಿ, ಸಚಿ ಮತ್ತಿತರರಿದ್ದರು.



ವಿದ್ಯಾರಣ್ಯಪುರಂ ಗೆಳೆಯರ ಬಳಗದ ಆಶ್ರಯದಲ್ಲಿ 2ನೇ ಮೈನ್ 2ನೇ ಕ್ರಾಸ್‌ನಲ್ಲಿ ಶ್ರೀ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ದಿನದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ಹಾಗೂ ಪ್ರಸಾದ ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ ಸೋಮಶೇಖರ್, ಕಾಂಗ್ರೆಸ್ ಯುವ ಮುಖಂಡರಾದ ಕುಮಾರ್ (ಕುಮ್ಮಿ), ಪ್ರಕಾಶ್, ನಾರಾಯಣ್, ಸುನೀಲ್, ಆಟೋ ಕುಮಾರ್, ಮಹಾದೇವು, ರವಿ, ಕಣ್ಣನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಅರಮನೆ ಆವರಣದಲ್ಲಿ ರಾಮತಾರಕ ಹೋಮ

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಮ್ಮುಖದಲ್ಲಿ ವಿಶೇಷ ಪೂಜೆ ● ಪಟ್ಟಾಭಿಷೇಕದ ಬಳಿಕ ಶ್ರೀರಾಮನ ರಥೋತ್ಸವ



ಮೈಸೂರು ಅರಮನೆ ಆವರಣದಲ್ಲಿ ನಡೆದ ರಾಮತಾರಕ ಹೋಮದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡಿದ್ದರು.



ಅರಮನೆ ಆವರಣದಲ್ಲಿ ನಡೆದ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಂಡಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪತ್ರಕರ್ತರೊಂದಿಗೆ ಮಾತನಾಡಿ, ಅಯೋಧ್ಯೆಯ ರಾಮಮಂದಿರ ನಿರ್ಮಾಣ ಕೋಟ್ಯಾಂತರ ಜನರ ಕನಸಾಗಿತ್ತು ಬಹು ವರ್ಷಗಳ ಬಳಿಕ ಈಗ ನನಸಾಗುತ್ತಿದೆ. ಶ್ರೀರಾಮ ಮಂದಿರ ನಿರ್ಮಾಣದಿಂದ ದೇಶದಲ್ಲಿ ಸಕಾಲಕ್ಕೆ ಮಳೆ ಬೆಳೆಯಾಗಿ ರೈತರು, ಜನರಿಗೆ ಸುಖ ಮತ್ತು ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ. ರಾಮ ಕರೆಸಿಕೊಂಡಾಗ ಅಯೋಧ್ಯೆಗೆ ಹೋಗುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮೈಸೂರು,ಜ.22(ಎಂಟಿವೈ)- ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಸೋಮವಾರ ಜರುಗಿದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ರಾಮತಾರಕ ಹೋಮ ನೆರವೇರಿಸಿ, 300 ವರ್ಷದ ಪುರಾತನ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಅರಮನೆಯ ಆನೆ ಬಾಗಿಲು ಮುಂಭಾಗದ ಪ್ರಾಂಗಣದಲ್ಲಿ ಇಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ನಡೆದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಪಾಲ್ಗೊಂಡು, ಧಾರ್ಮಿಕ ವಿಧಿ ವಿಧಾನದಂತೆ ಪೂಜೆ ನೆರವೇರಿಸಿದರು.

ಅರ್ಚಕ ವಿನಯ್ ನೇತೃತ್ವದಲ್ಲಿ ಶ್ರೀಹರಿ ಅವರ ಉಪಸ್ಥಿತಿಯಲ್ಲಿ ಅರಮನೆ ಆವರಣದಲ್ಲಿರುವ ವಿವಿಧ ದೇವಾಲಯಗಳ ಅರ್ಚಕರು ಸೇರಿ ವಿಶೇಷ ಪೂಜಾ ಕಾರ್ಯ ನೆರವೇರಿಸಿದರು. ರಾಮತಾರಕ ಹೋಮ, ಮೂಲ ಮಂತ್ರ ಹೋಮ, ರಾಮಾಯಣ ಪಾರಾಯಣ ಮಾಡಲಾಯಿತು. ಬಳಿಕ ಶ್ರೀರಾಮ ದೇವರ ಪಟ್ಟಾಭಿಷೇಕ ನೆರವೇರಿಸಲಾಯಿತು. ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕ ನೆರವೇರಿಸಿದ ನಂತರ ಅಲಂಕೃತ ರಥಕ್ಕೆ ಶ್ರೀರಾಮ, ಲಕ್ಷ್ಮಣ, ಸೀತೆ ವಿಗ್ರಹವನ್ನಿಟ್ಟು ಅರಮನೆ ಆವರಣದಲ್ಲೇ ಮಂಗಳವಾದ್ಯದ ಹಿಮ್ಮೇಳದೊಂದಿಗೆ ರಥೋತ್ಸವ ನೆರವೇರಿಸಲಾಯಿತು.

ಪೂಜಾ ಕಾರ್ಯದಲ್ಲಿ ಅರಮನೆ ಆವರಣದಲ್ಲಿರುವ ಶ್ವೇತ ವರಹಾಸ್ವಾಮಿ ದೇವಾಲಯ, ತ್ರಿನಯನೇಶ್ವರ, ಕೋಡಿ ಭೈರವೇಶ್ವರ ಸ್ವಾಮಿ, ಪ್ರಸನ್ನ ಕೃಷ್ಣಸ್ವಾಮಿ, ಖಿಲ್ಲೆ ವೆಂಕಟರಮಣ ಸ್ವಾಮಿ, ಭುವನೇಶ್ವರಿ ದೇವಾಲಯ, ಗಾಯತ್ರಿ ದೇವಾಲಯ, ಲಕ್ಷ್ಮೀ ರಮಣ ಸ್ವಾಮಿ, ಆಂಜನೇಯಸ್ವಾಮಿ ಹಾಗೂ ಗಣಪತಿ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಅರಮನೆ ಪ್ರಾಂಗಣಕ್ಕೆ ತರಲಾಗಿತ್ತು. ರಥೋತ್ಸವದ ವೇಳೆ ಈ ದೇವಾಲಯಗಳ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ಭಜನೆ: ಅರಮನೆ ಪ್ರಾಂಗಣದಲ್ಲಿ ವಿಶೇಷ ಪೂಜೆ ನಡೆಯುತ್ತಿದ್ದರೆ, ಮತ್ತೊಂದೆಡೆ ಮಹಿಳೆಯರ ತಂಡವೊಂದು ಭಜನೆಯಲ್ಲಿ ನಿರತವಾಗಿತ್ತು. ಪೂಜೆ ವೇಳೆ ಶ್ರೀರಾಮನ ಘೋಷಣೆಗಳು ಮೊಳಗುತ್ತಿದ್ದವು.

ದಸರಾ ಮಹೋತ್ಸವ ಬಳಿಕ ಅರಮನೆ ಪ್ರಾಂಗಣದಲ್ಲಿ ಜರುಗಿದ ಧಾರ್ಮಿಕ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಅರಮನೆ ಸಿಬ್ಬಂದಿ ಮಾತ್ರವಲ್ಲದೆ, ಅರಮನೆ ವೀಕ್ಷಣೆಗೆ ಆಗಮಿಸಿದ್ದ ವಿದೇಶಿಗರೂ ಸೇರಿದಂತೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಆನೆ ಬಾಗಿಲು ಬಳಿ ನಡೆದ ಕಾರ್ಯಕ್ರಮದಲ್ಲಿ ರಾಮ ತಾರಕ ಹೋಮ ಸೇರಿದಂತೆ ಇನ್ನಿತರ ಧಾರ್ಮಿಕ ಕಾರ್ಯ ಜರುಗಿತು. ಪೂರ್ಣಾಹುತಿ ವೇಳೆ ನೂರಾರು ಮಂದಿ ಸಾಕ್ಷಿಯಾದರು. ನಂತರ ರಥೋತ್ಸವದಲ್ಲೂ ಪಾಲ್ಗೊಂಡಿದ್ದರು.

ಅಯೋಧ್ಯೆ ಕಾರ್ಯಕ್ರಮ ನೇರ ಪ್ರಸಾರ: ಅಯೋಧ್ಯೆಯಲ್ಲಿ ನಡೆಯುತ್ತಿದ್ದ ಬಾಲರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಅರಮನೆ ಆವರಣದಲ್ಲಿ ಬೃಹತ್ ಪರದೆ ಮೇಲೆ ನೇರ ಪ್ರಸಾರ ಮಾಡಲಾಯಿತು. ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿ, ಪ್ರಧಾನಿ ನರೇಂದ್ರ ಮೋದಿ ಪೂಜೆ ಸಲ್ಲಿಸುತ್ತಿದ್ದಂತೆಯೇ ಅರಮನೆ ಆವರಣದಲ್ಲಿ ರಾಮತಾರಕ ಹೋಮ ಮುಗಿಸಿ, ಪೂರ್ಣಾಹುತಿ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಸೇರಿದಂತೆ ಇನ್ನಿತರರು ಇದ್ದರು.



ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ನಡೆಯುತ್ತಿರುವ ಬಾಲರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಅಂಗವಾಗಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಶ್ರೀ ವೀರ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರನ್ನು ಭಕ್ತಾದಿಗಳು ಸನ್ಮಾನಿಸಿದರು. ಚಿತ್ರದಲ್ಲಿ ಸಂಸ್ಥೆಯ ಪ್ರೊ. ನರಹರಿ ಬಾಬು, ಎಂ.ಡಿ. ಗೋಪಿನಾಥ್, ಮೊಹಲ್ಲಾ ನಿವಾಸಿಗಳಾದ ಆರ್.ಪರಮೇಶ, ಶ್ರೀನಿವಾಸ್, ವಿಘ್ನೇಶ್ವರ ಭಟ್, ಲೋಹಿತ್, ನಾಗರಾಜ್, ಮುರುಗೇಶ್, ಸಂಜಯ್ ಇತರರನ್ನು ಕಾಣಬಹುದು.



ಅಯೋಧ್ಯೆಯಲ್ಲಿ ಶ್ರೀಬಾಲರಾಮ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಮಾಜಿ ಶಾಸಕ ಎಲ್ ನಾಗೇಂದ್ರ ಅಭಿಮಾನಿ ಬಳಗದ ವತಿಯಿಂದ ಮಂಡಿ ಮೊಹಲ್ಲಾದಲ್ಲಿರುವ ಶ್ರೀರಾಮ ಗರಡಿಯಲ್ಲಿ ಶ್ರೀರಾಮನಿಗೆ ಪೂಜೆ, ಪುಷ್ಪ ನಮನ, ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರವಿ ,ಕೆಂಪಣ್ಣ, ವಾರ್ಡ್ ನಂಬರ್ 24 ಅಧ್ಯಕ್ಷರಾದ ಕೇಬಲ್ ವಿಜಿ, ಕೇಬಲ್ ರಾಜು, ಕಾರ್ತಿಕ್, ಮಾದೇವ, ಸುಧೀರ್, ಚಂದ್ರು, ಸೂರಜ್, ಸದಾ, ಪ್ರತೀಕ್, ಗುರುಪಾದ, ಗಾಂಧಿ, ಜಯಸಿಂಹ, ಎಳ್ನೀರು ಕಿರಣ, ಹರೀಶ, ರೈಲ್ವೆ ಕುಮಾರ ಇನ್ನಿತರರು ಹಾಜರಿದ್ದರು.



ಅಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಬಾಲರಾಮನ ವೇಷಧಾರಿಗಳಾಗಿ ಮೈಸೂರಿನ ತಮ್ಮ ನಿವಾಸಕ್ಕೆ ಆಗಮಿಸಿದ್ದ ಮೈಸೂರು ನಗರದ ವಿವಿಧ ಶಾಲೆಯ ಮಕ್ಕಳನ್ನು ಶ್ರೀ ಅರ್ಜುನ ಅವಧೂತರು ತಮ್ಮ ಮಾತೃಶ್ರೀ ರಂಗಲಕ್ಷ್ಮಿ ಅವರೊಂದಿಗೆ ಆಶೀರ್ವದಿಸಿ, ಪ್ರಸಾದ ವಿತರಿಸಿದರು.



ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಯಶಸ್ಸಿಗೆ ಮೈಸೂರಿನ ಸಿದ್ಧಾರ್ಥನಗರದ ಬೃಂದಾವನ ಭಜನಾ ತಂಡದ ಸದಸ್ಯರು ವಿಶೇಷ ಪೂಜೆ ಹಾಗೂ ಭಜನೆ ನಡೆಸಿದರು. ಈ ವೇಳೆ ಮಂಜುಳಾ ದಿವಾಕರ ಮತ್ತು ಸದಸ್ಯರು ಹಾಜರಿದ್ದರು.



ಅಯೋಧ್ಯೆಯಲ್ಲಿ ನಡೆದ ಬಾಲರಾಮ ಪ್ರಾಣ ಪ್ರತಿಷ್ಠಾಪನಾ ಅಂಗವಾಗಿ ಸಾಲಿಗ್ರಾಮ ತಾಲೂಕಿನ ದೊಡ್ಡಕೊಪ್ಪಲು ಗ್ರಾಮದಲ್ಲಿ ಬೈರವೇಶ್ವರ ದೇವರಿಗೆ ಪೂಜೆ ಸಲ್ಲಿಸಿ ಅಯೋಧ್ಯೆಯಿಂದ ಬಂದ ಮಂತ್ರ ಅಕ್ಷತಾ, ಶ್ರೀರಾಮ ಚಂದ್ರ ಭಾವಚಿತ್ರ ಹಾಗೂ ಕರಪತ್ರ ವಿತರಣೆ ಮಾಡಲಾಯಿತು. ಈ ವೇಳೆ ಗ್ರಾಮದ ಮುಖಂಡರಾದ ಆನಂತ್ ಕೋಟೆ, ಡಿಪೋ ಪ್ರವೀಣ, ಶಂಕರೇಗೌಡ, ಅಯ್ಯನಾಗರಾಜು, ಸುರೇಶ, ವಿಜಿಯಪ್ಪ ಮಾಸ್ಟರ್, ಕುಮಾರ್, ಚಿದಾನಂದ, ಸತೀಶ, ಅರಸು, ರೈತಸಂಘ ಲೋಕೇಶ, ಬೋರೇಗೌಡ, ಶಿಕ್ಷಕ ಶಿವಣ್ಣ, ರಾಮಸ್ವಾಮಿ, ಅರ್ಚಕ ಸಿದ್ದಪ್ಪ ಇದ್ದರು

ಅಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಚಿತ್ರ ಬಿಡಿಸುವ ಸ್ಪರ್ಧೆ



ಮೈಸೂರು, ಜ.22–ಆಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಇಂದು ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯ ಅಸೋಸಿಯೇಷನ್ ಆಫ್ ಅಲ್ಲೈಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್‌ನಲ್ಲಿ ಜಿಲ್ಲೆ 255ರ ಆಶ್ರಯದಲ್ಲಿ ಸಿರಿ ವಿದ್ಯಾಲಯ, ಸುದರ್ಶನ ವಿದ್ಯಾಸಂಸ್ಥೆ ಹಾಗೂ ಗುಡ್‌ವಿಶ್ ಫೌಂಡೇಶನ್ ವಿದ್ಯಾರ್ಥಿಗಳಿಗೆ ಶ್ರೀರಾಮ ದೇವರ ಕಂಠಪಾಠ ಹಾಗೂ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸುಮಾರು 600 ಮಕ್ಕಳು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಅಲ್ಲೈಯನ್ಸ್ ಇಂಟರ್‌ನ್ಯಾಷನಲ್ ಒಂದನೇ ಉಪ ರಾಜ್ಯಪಾಲ ಅಲ್ಲೈಯನ್ ಸಿರಿಬಾಲು (ಸಿರಿ ವಿದ್ಯಾಲಯ), ಸಂಪುಟ ಕಾರ್ಯದರ್ಶಿ ಅಲ್ಲೈ ಸಂತೋಷ್ (ಶಾಂತಲಾ ವಿದ್ಯಾಕೇಂದ್ರ), ಅಲ್ಲೈ ಶೋಭಾ ಸಿರಿಬಾಲು, ಅಲ್ಲೈ ಸಿರಿಮಾ ಬಿ.ರಾಜು, ಅಲ್ಲೈ ಶಶಿ ಕುಮಾರ್, ಅಲ್ಲೈ ಶಕುಂತಲಾ ರವೀಂದ್ರ ಹಾಗೂ ಇನ್ನಿತರ ಅಲ್ಲೈಯನ್ಸ್ ಸ್ನೇಹಿತರು ಪಾಲ್ಗೊಂಡಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಲೋಕಸಭಾ ಚುನಾವಣೆಗೆ ಮತದಾರರ ಪಟ್ಟಿ ಸಿದ್ಧ

● ಒಟ್ಟು ಮತದಾರರು 5,37,85,815; 2,69,33,750 ಪುರುಷರು, 2,68,47,145 ಮಹಿಳೆಯರು, 4,920 ಇತರರು
● ಅತೀ ಹೆಚ್ಚು ಬೆಂಗಳೂರು ಉತ್ತರ ಕ್ಷೇತ್ರ 31 ಲಕ್ಷ; ಅತೀ ಕಡಿಮೆ ಉಡುಪಿ–ಚಿಕ್ಕಮಗಳೂರು 15.65 ಲಕ್ಷ ಮತದಾರರು

ಬೆಂಗಳೂರು, ಜ.22(ಕೆಎಂಶಿ)– ಲೋಕಸಭಾ ಚುನಾವಣೆಗೆ ರಾಜ್ಯ ಮತದಾರರ ಪಟ್ಟಿ ಸಿದ್ಧಗೊಂಡಿದ್ದು, ಈ ಬಾರಿ 17,937 ಶತಾಯುಷಿಗಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಇದನ್ನು ಬಹಿರಂಗಪಡಿಸಿದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಅಂತಿಮ ಮತದಾರರ ಪಟ್ಟಿ–2024 ರಲ್ಲಿನ ಒಟ್ಟು ಮತದಾರರ ಸಂಖ್ಯೆ 5,37,85,815 ಇದ್ದು, ಇದರಲ್ಲಿ 2,69,33,750 ಪುರುಷರು, 2,68,47,145 ಮಹಿಳಾ ಮತದಾರರು ಮತ್ತು 4,920 ಇತರೆ ಮತದಾರರು ಸೇರಿದ್ದಾರೆ ಎಂದರು.

ಲೋಕಸಭಾ ಕ್ಷೇತ್ರಗಳ ಪೈಕಿ 31ಲಕ್ಷಕ್ಕೂ ಹೆಚ್ಚು ಮತದಾರರೊಂದಿಗೆ ಬೆಂಗಳೂರು ಉತ್ತರ ಕ್ಷೇತ್ರ ಅತೀ ದೊಡ್ಡ ಕ್ಷೇತ್ರವಾಗಿದೆ, 15.65 ಲಕ್ಷ ಮತದಾರರೊಂದಿಗೆ ಉಡುಪಿ–ಚಿಕ್ಕಮಗಳೂರು ಅತೀ ಚಿಕ್ಕ ಕ್ಷೇತ್ರವಾಗಿದೆ. ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು 7,17,201 ಮತದಾರರಿದ್ದರೆ, ಶೃಂಗೇರಿ ಕ್ಷೇತ್ರ ಅತೀ ಕಡಿಮೆ ಅಂದರೆ, 1,67,556 ಮತದಾರರನ್ನು ಹೊಂದಿದೆ.

2024ರ ಜನವರಿ 1ಕ್ಕೆ ಅರ್ಹತೆ ಹೊಂದಿರುವ, ಅದರೆ ಇದುವರೆಗೆ ನೋಂದಣಿಯಾಗದ ಇರುವವರು ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಮತದಾರರ ಸೇವಾ ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

ಅರ್ಹತಾ ದಿನಾಂಕ 2024ರ ಏಪ್ರಿಲ್ 1, ಜುಲೈ1 ಹಾಗೂ ಅಕ್ಟೋಬರ್ 1ರಂತೆ ಅರ್ಹತೆ ಹೊಂದುವ ಹೊಸ ಮತದಾರರು ಮುಂಚಿತವಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದರು.



ಮನೋಜ್ ಕುಮಾರ್

ಶೇ.100ರಷ್ಟು ಮತದಾರರಿಗೆ ಭಾವಚಿತ್ರ ಗುರುತಿನ ಚೀಟಿ ವಿತರಿಸಲಾಗಿದೆ, ಗುರುತಿನ ಚೀಟಿಗಳನ್ನು ತ್ವರಿತ ಅಂಚೆ ಮೂಲಕ ಮತದಾರರ ವಿಳಾಸಕ್ಕೆ ತಲುಪಿಸಲಾಗುತ್ತಿದೆ.

ಕಳೆದ ನವೆಂಬರ್ ಅಂತ್ಯಕ್ಕೆ 17,47,518 ಗುರುತಿನ ಚೀಟಿಗಳನ್ನು ಮತದಾರರಿಗೆ ತಲುಪಿಸಲಾಗಿದ್ದು, ಇನ್ನೂ 10,76,506 ಗುರುತಿನ ಚೀಟಿ ಮುದ್ರಿಸಿದ್ದು, ಇದನ್ನು ಮತದಾರರಿಗೆ ತಲುಪಿಸಲಾಗುವುದೆಂದು ತಿಳಿಸಿದರು. ಅಂತಿಮ ಮತದಾರರ ಪಟ್ಟಿಯಲ್ಲಿ ಸೇವಾ ಮತದಾರರ ಸಂಖ್ಯೆ ಈ ಬಾರಿ ಇಳಿಕೆಯಾಗಿದೆ. ಕರಡು ಪಟ್ಟಿಯಲ್ಲಿ 47,172 ಇದ್ದ ಸೇವಾ ಮತದಾರರ ಸಂಖ್ಯೆ ಅಂತಿಮ ಪಟ್ಟಿಯಲ್ಲಿ 46,501ಕ್ಕೆ ಇಳಿಕೆಯಾಗಿದೆ. 18ರಿಂದ 19 ವರ್ಷದ ಮತದಾರರ ಸಂಖ್ಯೆ ಹೆಚ್ಚಾಗಿದ್ದು, ಅಂತಿಮ ಪಟ್ಟಿಯಲ್ಲಿ 10,34,018ರಷ್ಟು ಯುವ ಮತದಾರರಿದ್ದಾರೆ. 3,88,527ರಷ್ಟು ಯುವ ಮತದಾರರ ಸಂಖ್ಯೆ ಹೆಚ್ಚಳವಾಗಿದೆ. ಸಾಗರೋತ್ತರ ಮತದಾರರ ಸಂಖ್ಯೆ 3,164ರಷ್ಟಿದೆ ಎಂದು ವಿವರಿಸಿದರು.

80 ವರ್ಷ ಮೇಲ್ಪಟ್ಟ ಹಿರಿಯ ಮತದಾರರ ಸಂಖ್ಯೆ 12,71,862 ಆಗಿದ್ದು, 100 ವರ್ಷ ಮೇಲ್ಪಟ್ಟ ಮತದಾರರ ಸಂಖ್ಯೆ 17,937ರಷ್ಟಿದ್ದಾರೆ. ವಿಕಲ ಚೇತನ ಮತದಾರರ ಸಂಖ್ಯೆ 562890 ರಷ್ಟಿದೆ.



58,834 ಮತಗಟ್ಟೆಗಳಿದ್ದು, 845 ಮತಗಟ್ಟೆಗಳನ್ನು ಸೇರ್ಪಡೆಗೊಳಿಸಿದ್ದು, 293 ಮತಗಟ್ಟೆಗಳನ್ನು ವಿಲೀನಗೊಳಿಸಲಾಗಿದೆ. ಕಳೆದ 2019ಕ್ಕೆ ಹೋಲಿಸಿದರೆ ಈ ಬಾರಿ 552 ಮತಗಟ್ಟೆಗಳು ಹೆಚ್ಚಳವಾಗಿದೆ. 35,02,328 ಮತದಾರರು ಹೊಸದಾಗಿ ಸೇರ್ಪಡೆಯಾಗಿದ್ದಾರೆ. 11,14,257 ಹೆಸರುಗಳನ್ನು ತೆಗೆದು ಹಾಕಲಾಗಿದೆ ಮತ್ತು 13,43,123 ಮತದಾರರ ವಿವರಗಳನ್ನು ಮಾರ್ಪಾಡು ಮಾಡಲಾಗಿದೆಯೆಂದು ಮಾಹಿತಿ ನೀಡಿದರು.

ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ, ಅವರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ತಕ್ಷಣವೇ ನೋಂದಾಯಿಸಲು ಪ್ರೋತ್ಸಾಹಿಸಲಾಗುತ್ತದೆ. ಮತದಾನದ ದಿನದಂದು ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲಾಗುವುದಿಲ್ಲ. ಆದ್ದರಿಂದ, ಮತದಾರರು ವಿಳಂಬವಿಲ್ಲದೆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಪರಿಶೀಲಿಸಲು ಮತ್ತು ದೃಢೀಕರಿಸಲು ಸೂಚಿಸಲಾಗಿದೆ. ಅರ್ಹ ಮತದಾರರು ಅರ್ಜಿಗಳನ್ನು ಸಲ್ಲಿಸಲು ತಮ್ಮ ಮೊಬೈಲ್‌ನಲ್ಲಿ ವೋಟರ್ ಹೆಲ್ಪ್‌ಲೈನ್ ಅಪ್ಲಿಕೇಶನ್ ಆಯ್ಕೆಯನ್ನು ಹೊಂದಿದ್ದಾರೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಪರ ಮುಖ್ಯ ಚುನಾವಣಾಧಿಕಾರಿಗಳಾದ ವೆಂಕಟೇಶ್ ಕುಮಾರ್, ಕೂರ್ಮಾರಾವ್ ಉಪಸ್ಥಿತರಿದ್ದರು.

ಈ ಬಾರಿ ರಾಜ್ಯದಲ್ಲಿ 17,937 ಶತಾಯುಷಿಗಳಿದ್ದಾರೆ!



ಪುಸ್ತಕಗಳ ಲೋಕಾರ್ಪಣೆ

ಮೈಸೂರು, ಜ.22–ರಾಮ ಜನ್ಮಭೂಮಿಯಲ್ಲಿ ಬಾಲರಾಮ ಮೂರ್ತಿ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಉಪನ್ಯಾಸ ಹಾಗೂ ಎನ್.ವಿ.ರಮೇಶ್ ಅವರ 'ಬನ್ನಿ ರಾಮಾಯಣ ಯಾತ್ರೆಗೆ' ಹಾಗೂ 'ಮನಸ್ಸಿನ ಅಲೆಗಳ ಉಯ್ಯಾಲೆ' ಪುಸ್ತಕಗಳ ಲೋಕಾರ್ಪಣೆಯನ್ನು ಮೈಸೂರಿನ ಅಭಿರುಚಿ ಬಳಗದ 127ನೇ ಕಾರ್ಯಕ್ರಮವನ್ನು ಜ.27ರಂದು ಬೆಳಗ್ಗೆ 10.30 ಗಂಟೆಗೆ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಏರ್ಪಡಿಸಲಾಗಿದೆ. ಅಂದು ಎನ್.ವಿ.ರಮೇಶ್ ಅವರ 'ಬನ್ನಿ ರಾಮಾಯಣ ಯಾತ್ರೆಗೆ' ಮತ್ತು "ಮನಸ್ಸಿನ ಅಲೆಗಳ ಉಯ್ಯಾಲೆ' 2 ಪುಸ್ತಕಗಳನ್ನು ಲೋಕಾರ್ಪಣೆ ಮಾಡಿ, ಅವುಗಳ ಬಗ್ಗೆ ಎಸ್.ರಾಮಪ್ರಸಾದ್ ಹಾಗೂ ಡಾ. ಭೇರ್ಯ ರಾಮಕುಮಾರ್ ಮಾತನಾಡುತ್ತಾರೆ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸುವರು. ಮ.ನ.ಲತಾ ಮೋಹನ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಗಜಾನನ ಹೆಗಡೆ, ಪದ್ಮಿನಿ ಹೆಗಡೆ, ಮಡ್ಡೀಕೆರೆ ಗೋಪಾಲ್ ಉಪಸ್ಥಿತರಿರುವರು. ನಂತರ ಶ್ರೀರಾಮನ ಬಗ್ಗೆ ಕವಿಗೋಷ್ಠಿ ನಡೆಯಲಿದೆ. ಈ ಕವಿಗೋಷ್ಠಿಯಲ್ಲಿ ಭಾಗವಹಿಸುವವರು ಎನ್.ವಿ.ರಮೇಶ್, ಮೊ. 9845565238 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು, ಜ. 22–ಡಾ.ಎಸ್. ಮರೀಗೌಡ ಅವರ ಮಾರ್ಗದರ್ಶನದಲ್ಲಿ ಕೆ.ವಿನಯ್ ಕುಮಾರ್ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಲ್ಲರೂ ಸಮಾನತೆ, ಪ್ರೀತಿಯಿಂದ ಬಾಳಬೇಕೆಂಬುದು ಶ್ರೀರಾಮನ ಆಶಯ

● ನಾನು ನಾಸ್ತಿಕನಲ್ಲ, ಆಸ್ತಿಕ: ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
● ಬೆಂಗಳೂರು ಬಳಿ ರಾಮ, ಸೀತಾ, ಲಕ್ಷ್ಮಣ ದೇವಾಲಯ; 33 ಅಡಿ ಏಕಶಿಲಾ ಆಂಜನೇಯ ಸ್ವಾಮಿ ವಿಗ್ರಹ ಶಿಲಾ ಪ್ರತಿಷ್ಠಾಪನೆಯಲ್ಲಿ ಭಾಗಿ





ಬೆಂಗಳೂರು, ಜ.22(ಕೆಎಂಶಿ)– ಅಧರ್ಮ ಹಾಗೂ ಅಮಾನವೀಯ ಕೃತ್ಯ ಎಸಗಿ ನಾಟಕೀಯವಾಗಿ ಪೂಜೆ ಮಾಡಿದರೆ ಅದನ್ನು ದೇವರು ಒಪ್ಪುವುದಿಲ್ಲ, ಸಕಲ ಜೀವಗಳೂ ಸಮಾನತೆ, ಪ್ರೀತಿಯಿಂದ ಬಾಳಬೇಕು ಎನ್ನುವುದು ಆದರ್ಶ ಶ್ರೀರಾಮನ ಆಶಯವಾಗಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಗರದ ಹೊರ ವಲಯದಲ್ಲಿ ರಾಮ–ಸೀತ–ಲಕ್ಷ್ಮಣ ದೇವಾಲಯ ಹಾಗೂ 33 ಅಡಿ ಎತ್ತರದ ಏಕಶಿಲಾ ಆಂಜನೇಯ ಸ್ವಾಮಿ ವಿಗ್ರಹ ಶಿಲಾ ಪ್ರತಿಷ್ಠಾಪನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ನಾಸ್ತಿಕನಲ್ಲ–ಆಸ್ತಿಕ, ನಮ್ಮೂರಲ್ಲೂ ರಾಮನ ಗುಡಿ ಕಟ್ಟಿಸಿದ್ದೇನೆ. ರಾಜ್ಯದ ಹಳ್ಳಿ–ಹಳ್ಳಿಗಳಲ್ಲೂ ರಾಮನ ಗುಡಿಗಳು ಇವೆ. ಪ್ರತಿಯೊಬ್ಬರೂ ಅವರವರ ನಂಬಿಕೆಯಂತೆ ರಾಮನನ್ನು ಪೂಜಿಸುತ್ತೇವೆ, ಗುಡಿ ಕಟ್ಟುತ್ತೇವೆ ಎಂದರು.

ಯಾವುದೇ ಜಾತಿ–ಧರ್ಮ ಮನುಷ್ಯ ದ್ವೇಷವನ್ನು ಹೇಳುವುದಿಲ್ಲ. ಶ್ರೀರಾಮ ಸಮಾಜಮುಖಿಯಾಗಿದ್ದರು. ಒಬ್ಬ ಮಡಿವಾಳನ ಮಾತಿಗೂ ಬೆಲೆ ಕೊಟ್ಟರು. ಪಿತೃವಾಕ್ಯ ಪರಿಪಾಲನೆಗೆ ವನವಾಸಕ್ಕೆ ಹೋದರು, ಶ್ರೀರಾಮ, ಲಕ್ಷ್ಮಣ, ಸೀತೆ, ಆಂಜನೇಯರನ್ನು ಬೇರ್ಪಡಿಸಲು ಸಾಧ್ಯವಿಲ್ಲ, ಇವರೆಲ್ಲಾ ಸಕುಟುಂಬಸ್ಥರು.

ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯ ಶ್ರೀರಾಮನ ಆದರ್ಶ ಮತ್ತು ವ್ಯಕ್ತಿತ್ವದಲ್ಲಿದೆ, ಮನುಷ್ಯ–ಮನುಷ್ಯನನ್ನು ದ್ವೇಷಿಸಬಾರದು ಎನ್ನುವುದೇ ರಾಮಾಯಣ, ಮಹಾಭಾರತದ ಸಂದೇಶ. ಪರಿಶಿಷ್ಟ ಪಂಗಡ ಸಮುದಾಯದ ವಾಲ್ಮೀಕಿ, ರಾಮಾಯಣ ಬರೆದು ವಿಶ್ವಕ್ಕೆ ಕೊಟ್ಟರು, ದೇವರು ನಮ್ಮ ಆತ್ಮ ಮತ್ತು ಶರೀರದಲ್ಲೇ ಇದ್ದಾನೆ ಎಂದು ಬಸವಣ್ಣ ನುಡಿದರು, ದೇಹವೇ ದೇಗುಲ ಎನ್ನುವ ಸಂದೇಶವನ್ನು ಮನುಷ್ಯ ಪ್ರಪಂಚಕ್ಕೆ ನೀಡಿದ್ದಾರೆ ಎಂದು ವಚನಗಳನ್ನು ಉದಾಹರಿಸಿದರು. ಜೈ ಶ್ರೀರಾಮ್ ಎನ್ನುವುದು ಯಾರದ್ದೋ ಖಾಸಗಿ ಸ್ವತ್ತಲ್ಲ, ಅದು ಪ್ರತಿಯೊಬ್ಬ ಭಕ್ತರ ಸ್ವತ್ತು ಎನ್ನುತ್ತಾ ತಾವೂ ಜೈ ಶ್ರೀರಾಮ್ ಘೋಷಣೆ ಕೂಗಿ ನೆರೆದಿದ್ದ ಸಾರ್ವಜನಿಕರಿಂದಲೂ ಘೋಷಣೆ ಕೂಗಿಸಿದರು.

ಬಿಜೆಪಿ ಕಚೇರಿಯಲ್ಲಿ ಶ್ರೀರಾಮನಿಗೆ ವಿಶೇಷ ಪೂಜೆ

ಮೈಸೂರು, ಜ.22(ಬಿಎಲ್‌ಯು)– ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಶ್ರೀರಾಮನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಅವರು ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ನೆರವೇರಿಸಿದರು. ತರುವಾಯ ಬಾಲರಾಮನ ಪ್ರತಿಷ್ಠಾಪನೆ ಕಾರ್ಯಕ್ರಮದ ನೇರ ಪ್ರಸಾರಕ್ಕೆ ಎಲ್‌ಇಡಿ ಸ್ಕ್ರೀನ್ ಆನ್ ಮಾಡಿದರು. ಈ ವೇಳೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಿಗೆ ಲಾಡುಗಳನ್ನು ವಿತರಿಸಿ ಸಂತೋಷ ವಿನಿಮಯ ಮಾಡಿಕೊಳ್ಳಲಾಯಿತು. ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಮಹದೇವ ಸ್ವಾಮಿ, ಬಿಜೆಪಿ ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ, ಮೋರ್ಚಾದ ನಗರಾಧ್ಯಕ್ಷ ಜೋಗಿ ಮಂಜು, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ವಕ್ತಾರ ಮಹೇಶ್, ಮುಖಂಡರಾದ ಹೇಮಂತ್ ಕುಮಾರ್, ಅಶೋಕ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಮರ್ಯಾದಾ ಪುರುಷ ಶ್ರೀರಾಮನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ವಚನ ಪರಿಪಾಲನೆ ಮಾಡದ ಮೋದಿ ಯಾವ ಸೀಮೆಯ ರಾಮಭಕ್ತ?

ಬೆಂಗಳೂರು: ಪ್ರಧಾನಿ ಅವರೇ, ನೀವು ನಿಜವಾದ ರಾಮಭಕ್ತರೇ ಆಗಿದ್ದರೆ ಚುನಾವಣೆಯ ವೇಳೆ ನಿಮ್ಮ ಪ್ರಣಾಳಿಕೆಯ ಮೂಲಕ ಈ ದೇಶದ ಜನತೆಗೆ ನೀಡಿದ್ದ ವಾಗ್ದಾನದಲ್ಲಿ ಎಷ್ಟು ವಾಗ್ದಾನಗಳನ್ನು ಈಡೇರಿಸಿದ್ದೀರಿ; ಎಷ್ಟನ್ನು ಈಡೇರಿಸಬೇಕಿದೆ ಎನ್ನುವುದನ್ನು ಅಯೋಧ್ಯೆಯಲ್ಲಿ ತಾವು ಇಂದು ಉದ್ಘಾಟಿಸುತ್ತಿರುವ ರಾಮ ಮಂದಿರದಲ್ಲಿ ನಿಂತು ಪ್ರಮಾಣ ಮಾಡಿ ಹೇಳಿ ಎಂದು ಸಿಎಂ ಸಿದ್ದರಾಮಯ್ಯ ಸೋಮವಾರ ಟ್ವೀಟ್ ಮೂಲಕ ಆಗ್ರಹಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರು, ನಿಮಗೆ ಆ ಧೈರ್ಯವಿಲ್ಲ, ಅದು ಬರುವುದೂ ಇಲ್ಲ. ಏಕೆಂದರೆ ರಾಮ, ನಿಮಗೆ ಚುನಾವಣಾ ಅಸ್ತ್ರ ಮಾತ್ರ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ, ರೈತರ ಆದಾಯವನ್ನು ದ್ವಿಗುಣಗೊಳಿಸುವ ಭರವಸೆಯನ್ನು ನೀಡಿದ್ದಿರಿ. ಆದರೆ, ಇದಕ್ಕಾಗಿ ಏನು ಮಾಡಿದಿರಿ ಎಂದು ಪ್ರಶ್ನಿಸಿದ್ದಾರೆ.

ರೈತರ ಆದಾಯ ದ್ವಿಗುಣಗೊಳಿಸುವುದಿರಲಿ ಬರಗಾಲದಿಂದ ಕಂಗೆಟ್ಟಿರುವ ರೈತರಿಗೆ ಬಿಡಿಗಾಸು ಬರ ಪರಿಹಾರವನ್ನೂ ನೀವು ನೀಡಿಲ್ಲ. ಅದೇ ರೀತಿ, ಒಕ್ಕೂಟ ವ್ಯವಸ್ಥೆಯಲ್ಲಿರುವ ಎಲ್ಲ ರಾಜ್ಯಗಳ ಸಶಕ್ತೀಕರಣಕ್ಕಾಗಿ ಸಹಕಾರಿ ಒಕ್ಕೂಟ ವ್ಯವಸ್ಥೆಯ ನಿರ್ಮಾಣದ ಬಗ್ಗೆ ಭರವಸೆ ನೀಡಿದ್ದಿರಿ. ವಿಪರ್ಯಾಸವೆಂದರೆ, ಇಂದು ರಾಜ್ಯಗಳಿಗೆ ದಕ್ಕಬೇಕಾದ ಅವುಗಳ ನ್ಯಾಯಯುತ ಪಾಲನ್ನು ಕೂಡ ಕಸಿದುಕೊಂಡಿದ್ದೀರಿ. ಇದರೊಟ್ಟಿಗೆ ಕುತಂತ್ರದಿಂದ ಸೆಸ್, ಸರ್ಚಾರ್ಜ್‌ಗಳನ್ನು ಹೆಚ್ಚಿಸಿದ್ದೀರಿ.



ಪ್ರಧಾನಿ ಮೋದಿ ಅವರೇ, ದೇಶದ ಭದ್ರತೆಯ ಬಗ್ಗೆ ನಿಮ್ಮ ಪ್ರಣಾಳಿಕೆಯಲ್ಲಿ ಪುಂಖಾನುಪುಂಖ ಆಶ್ವಾಸನೆಗಳನ್ನು ಕೊಟ್ಟಿದ್ದಿರಿ. ಆದರೆ, ಗಡಿಯೊಳಗೆ ಅತಿಕ್ರಮಣ ಮಾಡಿ ಅಕ್ರಮ ಸೇನಾ ನಿರ್ಮಾಣ ಚಟುವಟಿಕೆ ಕೈಗೊಂಡಿರುವ ಚೀನಾವನ್ನು ಹಿಂದಕ್ಕೆ ಕಳುಹಿಸಲಾಗದೆ ಚೀನಾ ನಮ್ಮ ಗಡಿಯನ್ನು ಪ್ರವೇಶಿಸಿಯೇ ಇಲ್ಲ ಎನ್ನುವ ಹೇಳಿಕೆ ನೀಡಿಬಿಟ್ಟಿರಿ! ಆ ಮೂಲಕ ಮುಂದಕ್ಕೆ ಇದ್ದ ಗಡಿ ರೇಖೆಯನ್ನು ಹಿಂದಕ್ಕೆ ಎಳೆದ ಶೂರ ನೀವು! ಯಾವ ಗಡಿ ರೇಖೆಯನ್ನು ಕಾಯುವುದಕ್ಕಾಗಿ ನಮ್ಮ ಪರಾಕ್ರಮಿ ಸೈನಿಕರು ಸಂಘರ್ಷ ನಡೆಸಿ ತಮ್ಮ ಪ್ರಾಣವನ್ನೇ ಸಮರ್ಪಿಸಿದರೋ ಆ ಸೈನಿಕರಿಗೆ ನೀವು ಮರಣೋತ್ತರ ಅವಮಾನ ಮಾಡಿದಿರಿ ಎಂದು ಸಿದ್ದರಾಮಯ್ಯ ಪ್ರಧಾನಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಹೀಗೆ, ವಚನ ಪರಿಪಾಲನೆ ಎಂದರೇನು ಎಂಬುದೇ ತಿಳಿಯದ ನೀವು ಯಾವ ಸೀಮೆಯ ರಾಮಭಕ್ತ ಮತ್ತೊಮ್ಮೆ ಹೇಳುತ್ತೇನೆ, ಅಧಿಕಾರದಲ್ಲಿರುವವರಿಂದ ರಾಮ ನಿರೀಕ್ಷಿಸುವುದು ಶಾಂತಿ, ನೆಮ್ಮದಿ, ಸಹಬಾಳ್ವೆಯ ರಾಮರಾಜ್ಯದ ನಿರ್ಮಾಣವನ್ನು ಮಾತ್ರ ಎಂದು ಹೇಳಿದ್ದಾರೆ. ನನಗೆ ತಿಳಿದಿರುವ ರಾಮ, ನಾನು ಪೂಜಿಸುವ ರಾಮ ವಚನ ಪರಿಪಾಲನೆಯನ್ನೇ ತನ್ನ ಉಸಿರಾಗಿಸಿಕೊಂಡವನು. ನನಗೆ ತಿಳಿದಿರುವ ಹನುಮ, ನಾನು ಪೂಜಿಸುವ ಹನುಮ ರಾಮನಾಮಕ್ಕಿಂತ ಮಿಗಿಲಿಲ್ಲ, ರಾಮನೇ ಜಗವೆಲ್ಲಾ ಎಂದು ತಿಳಿದು ರಾಮಭಕ್ತಿಯನ್ನೇ ಎದೆಯೊಳಗೆ ಇಳಿಸಿಕೊಂಡವನು. ಹನುಮನ ನಾಡಿನವರಾದ ನಮಗೆ ರಾಮನ ಬಗ್ಗೆ, ರಾಮಭಕ್ತಿಯ ಬಗ್ಗೆ ಹೇಳಿಕೊಡುವ ಅಗತ್ಯವಿಲ್ಲ. ಅದೊಂದು ತೋರ್ಪಡಿಕೆಯ ವಿದ್ಯಮಾನವೂ ಅಲ್ಲ. ರಾಮಭಕ್ತಿ ನಿರಂತರ. ವೈಯಕ್ತಿಕವಾಗಿ ನಾನು, ರಾಮನಿಂದ ವಚನ ಪರಿಪಾಲನೆಯನ್ನು, ಭೀಮನಿಂದ (ಡಾ. ಅಂಬೇಡ್ಕರ್) ಸಮತೆ ಅನುಷ್ಠಾನವನ್ನು, ಬಸವನಿಂದ ನುಡಿ, ನಡೆಯ ನಡುವೆ ಅಂತರವಿಲ್ಲದೆ ಬದುಕುವುದನ್ನು ನನ್ನಲ್ಲಿ ಅಳವಡಿಸಿಕೊಳ್ಳುತ್ತಲೇ ಮುಂದುವರಿದಿದ್ದೇನೆ ಎಂದು ಸಿಎಂ ತಿರುಗೇಟು ನೀಡಿದ್ದಾರೆ.

ರಾಮನಿಗೆ ಹನುಮನ ಎದೆಗಿಂತ ಬೇರ್‍ಯಾವುದಾದರೂ ಶ್ರೇಷ್ಠ ಗುಡಿಯನ್ನು ಈ ಜಗತ್ತಿನಲ್ಲಿ ಯಾರಾದರೂ ಕಟ್ಟಲು ಸಾಧ್ಯವೇ? ನಿಜ ರಾಮಭಕ್ತರು ಉತ್ತರ ಹೇಳಬೇಕು. ರಾಮ ತನ್ನ ಭಕ್ತರಲ್ಲಿ ನೋಡುವುದು ಅವರ ಸತ್ಯಸಂಧತೆ, ವಚನ ಪರಿಪಾಲನೆಯನ್ನೇ ಹೊರತು ಡಾಂಭಿಕತೆಯನ್ನಲ್ಲ. ರಾಜಕಾರಣಿಗಳಿಂದ ರಾಮ ನಿರೀಕ್ಷಿಸುವುದು ಶಾಂತಿ, ನೆಮ್ಮದಿ, ಸಹಬಾಳ್ವೆಯಿಂದ ಕೂಡಿದ ರಾಮ ರಾಜ್ಯದ ನಿರ್ಮಾಣವನ್ನು ಮಾತ್ರ ಎಂದಿದ್ದಾರೆ.

ನಟ ಸೈಫ್ ಅಲಿ ಖಾನ್ ಆಸ್ಪತ್ರೆಗೆ ದಾಖಲು; ಶಸ್ತ್ರಚಿಕಿತ್ಸೆ

ಮುಂಬೈ: ನಟ ಸೈಫ್ ಅಲಿ ಖಾನ್ ಅವರನ್ನು ಮುಂಬೈನ ಕೋಕಿಲಾಬೆನ್ ಆಸ್ಪತ್ರೆಗೆ ದಾಖಲಾಗಿದ್ದು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.



ಇತ್ತೀಚಿಗೆ ಚಿತ್ರದ ಸಾಹಸ ದೃಶ್ಯಗಳನ್ನು ಚಿತ್ರೀಕರಿಸುವಾಗ ಸೈಫ್ ಸಾಕಷ್ಟು ಗಾಯದ ಸಮಸ್ಯೆ ಎದುರಿಸಿದ್ದರು. ಹೀಗಾಗಿ ಮೊಣಕಾಲು ಮತ್ತು ಟ್ರೈಸ್ಪ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಈಗ ಅವರ ಸ್ಥಿತಿ ಉತ್ತಮವಾಗಿದ್ದು, ಶೀಘ್ರ ಚೇತರಿಸಿಕೊಳ್ಳುತ್ತಿದ್ದಾರೆ. ಸದ್ಯ ನಟ ತಮ್ಮ ಎಲ್ಲಾ ಅಭಿಮಾನಿಗಳು ಮತ್ತು ಹಿತೈಷಿಗಳಿಗೆ ಧನ್ಯವಾದ ಹೇಳಿದ್ದಾರೆ.


ಜೂನಿಯರ್ ಎನ್ ಟಿಆರ್ ನಟನೆಯ 'ದೇವರ' ಚಿತ್ರೀಕರಣದ ವೇಳೆ ಸೈಫ್ ಅವರ ಮೊಣಕಾಲು ಮತ್ತು ಭುಜಕ್ಕೆ ಗಾಯವಾಗಿದ್ದರು. ಚಿತ್ರದಲ್ಲಿನ ಆಕ್ಷನ್ ಸೀಕ್ವೆನ್ಸ್‌ನ ಚಿತ್ರೀಕರಣದ ಸಮಯದಲ್ಲಿ ಅವರಿಗೆ ಹಳೆಯ ಗಾಯದ ನೋವು ಕಾಣಿಸಿಕೊಂಡಿತ್ತು ಹೀಗಾಗಿ ಟ್ರೈಸ್ಪ್ ಶಸ್ತ್ರಚಿಕಿತ್ಸೆಯಾಗಿದೆ. ಅಷ್ಟೇ ಅಲ್ಲ ವಿಶಾಲ್ ಭಾರದ್ವಾಜ್ ಅಭಿನಯದ 'ರಂಗೂನ್' ಸಿನಿಮಾದ ಶೂಟಿಂಗ್ ವೇಳೆಯೂ ಸೈಫ್ ಗಾಯಗೊಂಡಿದ್ದರು. ಅವರು ಕ್ರೇಪ್ ಬ್ಯಾಂಡೇಜ್ ಅನ್ನು ಹಲವು ಬಾರಿ ಧರಿಸಿದ್ದರು. ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯದ ಚಿತ್ರೀಕರಣದ ವೇಳೆ ಅವರ ಹೆಬ್ಬೆರಳಿಗೆ ಗಾಯವಾಗಿದೆ.

ಮೈಸೂರು ಮಿತ್ರ

ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ

ಜಿಲ್ಲೆಯ ವಿವಿಧೆಡೆ ವಿಶೇಷ ಪೂಜೆ, ಸಂಭ್ರಮಾಚರಣೆ

ಮೈಸೂರು, ಜ.22– ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಸೋಮವಾರ ಮೈಸೂರು ಜಿಲ್ಲೆಯ ತಿ.ನರಸೀಪುರ, ನಂಜನಗೂಡು, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಸರಗೂರು, ಹುಣಸೂರು, ಪಿರಿಯಾಪಟ್ಟಣ ಸೇರಿದಂತೆ ವಿವಿಧೆಡೆ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು. ಅಲ್ಲದೇ ಸಾರ್ವಜನಿಕರು ಸೇರಿದಂತೆ ವಿವಿಧ ಸಂಘಟನೆಗಳು ಸಂಭ್ರಮಾಚರಣೆ ನಡೆಸಿದವು.



- ದೇವಾಲಯಗಳಲ್ಲಿ ವಿಶೇಷ ಪೂಜೆ
- ವಿವಿಧೆಡೆ ಭಕ್ತರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಣೆ

ತಿ.ನರಸೀಪುರದಲ್ಲಿ ಸಂಭ್ರಮದ ರಾಮೋತ್ಸವ



ಸಿರವಿ ಸಮಾಜದಿಂದ ರಾಮೋತ್ಸವ ಸಂಭ್ರಮದಿಂದ ನಡೆಯಿತು

ತಿ.ನರಸೀಪುರ, ಜ.22– ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪಟ್ಟಣದ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ಅಲ್ಲದೇ ಪಟ್ಟಣದ ವಿವಿಧ ರಸ್ತೆಗಳಲ್ಲಿ ರಾಮೋತ್ಸವ ಹೆಸರಿನಲ್ಲಿ ಶ್ರೀರಾಮನಿಗೆ ಪೂಜೆ ಸಲ್ಲಿಸಿ ಪ್ರಸಾದ ಹಂಚಿ ಸ್ಮರಣೆ ಮಾಡಲಾಯಿತು.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪಟ್ಟಣದೆಲ್ಲೆಡೆ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಮಹಿಳೆಯರು ಮಕ್ಕಳು ಸೇರಿದಂತೆ ಶ್ರೀರಾಮನ ಭಕ್ತರು ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಅಲ್ಲದೇ ತಾಲೂಕಿನ ಶ್ರೀರಾಮನ ಮಂದಿರಗಳಲ್ಲಿ ವಿಶೇಷ ಪೂಜೆ, ಭಜನೆ ನಡೆಯಿತು. ಬೀದಿ ಬೀದಿಯಲ್ಲಿ ಶ್ರೀರಾಮನ ಫೋಟೋ ಇಟ್ಟು ಪೂಜಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಪಟ್ಟಣದ ಲಿಂಕ್ ರಸ್ತೆಯಲ್ಲಿ ಸಿರವಿ ಸಮಾಜದಿಂದ ಭಕ್ತರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ಹಾಗೂ ತರಕಾರಿ ಬಾತ್ ವಿತರಿಸಲಾಯಿತು. ಪಟ್ಟಣದ ಟೈಲರ್‌ಗಳ ಸಂಘದವರು ಶ್ರೀರಾಮೋತ್ಸವ ಆಚರಿಸಿ ಭಕ್ತರಿಗೆ ಪ್ರಸಾದ ವಿತರಿಸಿದರೆ, ಮಾಂಸ ಮಾರಾಟಗಾರರು ಮಾಂಸ ಮಾರಾಟ ಬಂದ್ ಮಾಡಿದ್ದರು.

ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದ ದಾಸೋಹ ಭವನದಲ್ಲಿ ಶ್ರೀ ವೀರಾಂಜನೇಯ ಧರ್ಮ ಜಾಗೃತಿ ಬಳಗದ ರಾಮ ಭಕ್ತರು ಶ್ರೀರಾಮೋತ್ಸವ ಆಚರಿಸಿ ಅಯೋಧ್ಯೆಯಲ್ಲಿ ನಡೆದ ಪ್ರಾಣ ಪ್ರತಿಷ್ಠೆಯ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಿದ್ದರು.

ಲಿಂಕ್ ರಸ್ತೆಯ ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಎಸ್.ಕೆ.ಕಿರಣ್, ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್‌ನಾಯಕ್ ಮಾತನಾಡಿ, ರಾಮಮಂದಿರ ನಿರ್ಮಾಣವಾಗಬೇಕೆಂಬ ಕೋಟ್ಯಾಂತರ ಭಾರತೀಯರ ಕನಸನ್ನು ಪ್ರಧಾನಿ ಮೋದಿ ಇಂದು ಅಯೋಧ್ಯೆಯಲ್ಲಿ ರಾಮನ ಪ್ರಾಣ ಪ್ರತಿಷ್ಠಾಪನೆ ಮಾಡುವ ಮೂಲಕ ನನಸು ಮಾಡಿದ್ದಾರೆ. ಇಂದು ದೇಶಾದ್ಯಂತ ರಾಮೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತಿದೆ. ಆ ಮೂಲಕ ದೇಶ ರಾಮ ರಾಜ್ಯವಾಗುವತ್ತ ದಾಪುಗಾಲು ಇಟ್ಟಿದೆ ಎಂದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಮಹಾತ್ಮ ಗಾಂಧೀಜಿಯವರು ದೇಶ ರಾಮ ರಾಜ್ಯವಾಗಬೇಕೆಂಬ ಕನಸು ಕಂಡಿದ್ದರು. ಅವರ ಕನಸು ಇಂದು ರಾಮ ಮಂದಿರ ಉದ್ಘಾಟನೆಯಾಗುವ ಮೂಲಕ ಈಡೇರಿದೆ ಎಂದರು.

ಈ ವೇಳೆ ಅಂಗಡಿ ನಾಗೇಶ್, ಸಿರವಿ ಸಮಾಜದ ಮುಖಂಡರಾದ ಸುಭಾಷ್ ಚೌದರಿ, ಪ್ರಭುರಾವ್, ಗಿರಿದಾರಿ, ಹೇಮರಾಂ, ಸುರೇಶ್, ಟೀಕಂ ಚಂದ್, ನೇಮಿಚಂದ್, ರಾಮ್‌ಲಾಲ್, ನಾಗರಾಜು ಸೇರಿದಂತೆ ಮತ್ತಿತರರಿದ್ದರು.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಆಲಗೂಡಲ್ಲಿ ಶ್ರೀ ರಾಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು

ದಳವಾಯಿ ಅಗ್ರಹಾರದಲ್ಲಿ ವಿಶೇಷ ಪೂಜೆ

ತಿ.ನರಸೀಪುರ: ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ತಾಲೂಕಿನ ದಳವಾಯಿ ಅಗ್ರಹಾರದ ಶ್ರೀರಾಮಮಂದಿರದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಮುಂಜಾನೆಯಿಂದಲೇ ದೇವರಿಗೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನೆರವೇರಿಸಲಾಯಿತು. ಬಳಿಕ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಸಂಜೆ ವಿಷ್ಣು ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀರಾಮದೇವರ ಭಜನೆ ಹಾಗೂ ವಿಷ್ಣು ಸಹಸ್ರನಾಮ, ದೀಪೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಿತು. ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.

ಆಲಗೂಡು ಗ್ರಾಮದಲ್ಲೂ ವಿಶೇಷ ಪೂಜೆಯೊಂದಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ವರುಣ ಬಿಜೆಪಿ ಪ್ರಾಧಾನ ಕಾರ್ಯದರ್ಶಿ ಎ.ಎನ್.ರಂಗುನಾಯಕ, ವಿನಾಯಕ ಲಾಡ್ಜ್‌ನ ಕಿರಣ್, ರಣಧೀರ ಕುಮಾರ, ದೇವಪ್ಪನ ಸುರೇಶ, ಹೋಟೆಲ್ ರಮೇಶ್, ಶಿವಬುದ್ದಿ ಶಿವಣ್ಣ, ನರಸಯ್ಯನ ಹರೀಶ, ಯಜಮಾನ್ ಎಸ್.ಮಾದೇವ, ಅಮರ್, ರಂಗು, ಮುರಾರಿ ಕೃಷ್ಣ, ಬಸ್ ಏಜೆಂಟ್ ಶಿವನಂಜಣ್ಣ ಹಾಜರಿದ್ದರು.

ನಂ.ಗೂಡಿನ ದೇವಾಲಯಗಳಲ್ಲಿ ವಿಶೇಷ ಪೂಜೆ



ನಂಜನಗೂಡಿನ ರಾಮಮಂದಿರದಲ್ಲಿ ರಾಮ, ಸೀತೆ, ಲಕ್ಷ್ಮಣ ಉತ್ಸವಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಂಜನಗೂಡು, ಜ.22– ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲಮಠ ಸೇರಿದಂತೆ ವಿವಿಧೆಡೆ ಪೂಜಾ ಕೈಂಕರ್ಯಗಳು ಜರುಗಿದವು.

ಬೆಳಗ್ಗೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ರುದ್ರಾಭಿಷೇಕ ಸೇರಿದಂತೆ ವಿಶೇಷ ಪೂಜೆ ನೆರವೇರಿತು. ಶ್ರೀರಾಘವೇಂದ್ರಸ್ವಾಮಿಗಳ ಮೂಲಮಠದಲ್ಲಿ ಮೂಲರಾಮನ ಸ್ಮರಣೆಯೊಂದಿಗೆ ಧಾರ್ಮಿಕ ಕಾರ್ಯ ಕೈಗೊಂಡು ಭಕ್ತರಿಗೆ ಪಾನಕ, ಸಿಹಿ ವಿತರಿಸಲಾಯಿತು.

ಇನ್ನು ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯಲ್ಲಿ ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ 200ಕ್ಕೂ ಹೆಚ್ಚು ಯೋಗ ಬಂಧುಗಳು ಸಾಮೂಹಿಕ ಅಗ್ನಿಹೋತ್ರ ಹಾಗೂ ರಾಮ ಮಂತ್ರ ಜಪ ಧ್ಯಾನದಲ್ಲಿ ಪಾಲ್ಗೊಂಡು ಪುನೀತರಾದರು. ಸಂಜೆ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ನೇತೃತ್ವದಲ್ಲಿ ಸಾಮೂಹಿಕ ರಾಮರಕ್ಷಾ ಮಂತ್ರ ಜಪ ನಡೆಯಿತು.

ನಗರದ ರಾಮಮಂದಿರದಲ್ಲಿ ರಾಮ, ಸೀತೆ, ಲಕ್ಷ್ಮಣ ಉತ್ಸವಮೂರ್ತಿಗಳಿಗೆ ವಿಶೇಷ ಅಲಂಕಾರ ಹಾಗೂ ಹಲವು ಧಾರ್ಮಿಕ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದ ಅರ್ಚಕರು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ತಾಲೂಕಿನ ವಿವಿಧ ಗ್ರಾಮಗಳಲ್ಲೂ ಭಕ್ತರು ಪಾನಕ, ಮಜ್ಜಿಗೆ ವಿತರಿಸುವ ಮೂಲಕ ರಾಮ ಸ್ಮರಣೆ ಮಾಡಿದರು.

ಆಯುಕ್ತ ಭೇಟಿ: ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಹೆಚ್.ಬಸವರಾಜೇಂದ್ರ ಅವರು ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಸೋಮವಾರ ಕುಟುಂಬ ಸಮೇತರಾಗಿ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಕೋದಂಡರಾಮ ದೇವಾಲಯದಲ್ಲಿ ವಿಶೇಷ ಪೂಜೆ



ಬನ್ನೂರಿನ ಕೋದಂಡರಾಮ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಬನ್ನೂರು, ಜ.22– ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಬನ್ನೂರಿನ ಶ್ರೀಕೋದಂಡರಾಮ ದೇವಾಲಯದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು.

ಮುಂಜಾನೆಯೇ ದೇವಾಲಯ ಶುಚಿಗೊಳಿಸಿ, ಬಗೆ ಬಗೆಯ ಹೂಗಳಿಂದ ದೇವಾಲಯ ಅಲಂಕರಿಸಿ, ತಳಿರು ತೋರಣ ಮತ್ತು ವಿದ್ಯುತ್ ದೀಪದಿಂದ ಸಿಂಗರಿಸಿ, ಶ್ರೀರಾಮಸಹಿತ ಸೀತಾದೇವಿಗೆ ವಿವಿಧ ಹೋಮ ಹವನ ನೆರವೇರಿಸಲಾಯಿತು. ನಂತರ ನೈವೇದ್ಯ ಸಮರ್ಪಿಸಿ ಮಹಾಮಂಗಳಾರತಿ ನೆರವೇರಿಸಲಾಯಿತು. ಬಳಿಕ ಭಕ್ತರಿಗೆ ಲಡ್ಡು ಪ್ರಸಾದ ವಿತರಿಸಲಾಯಿತು. ದೇವಾಲಯದ ಹೊರಗಡೆ ಭಕ್ತರು ಶ್ರೀರಾಮನ ಹೆಸರಿನಲ್ಲಿ ಪ್ರಸಾದ ನೀಡುವ ಜೊತೆಗೆ ಪಾನಕ ಮಜ್ಜಿಗೆ ವಿತರಣೆ ಮಾಡಿದರು.

ಪ್ರಧಾನ ಅರ್ಚಕ ಕೃಷ್ಣಸ್ವಾಮಿ ಮಾತನಾಡಿ, ಲಕ್ಷಾಂತರ ಜನರ ಕನಸು ಇಂದು ನನಸಾಗಿದ್ದು, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗಿದೆ. ಇದು ನಮ್ಮೆಲ್ಲರ ದೈವದ ಪ್ರತೀಕವಾಗಿದೆ. ಈ ದಿನ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ಭಗವಂತನ ಸ್ಮರಣೆ ಮಾಡುವ ಮೂಲಕ ಪ್ರಭು ಶ್ರೀರಾಮಚಂದ್ರನ ಕೃಪೆಗೆ ಪಾತ್ರರಾಗುತ್ತಿದ್ದಾರೆ ಎಂದರು. ಈ ವೇಳೆ ಶ್ರೀನಿವಾಸ್, ಶ್ರೀನಾಥ್, ಮುರಳಿ, ಶ್ರೀಕಾಂತ್ ಸೇರಿದಂತೆ ಇನ್ನಿತರರಿದ್ದರು.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸರಗೂರಲ್ಲಿ ವಾಹನ ಚಾಲಕರ ಸಂಘದಿಂದ ಶ್ರೀರಾಮನಿಗೆ ಪೂಜೆ ಸಲ್ಲಿಸಲಾಯಿತು. ಈ ವೇಳೆ ಸಂಘದ ಕಾರ್ಯದರ್ಶಿ ಎಂ.ನಾಗರಾಜು, ಗೌರವಾಧ್ಯಕ್ಷ ಹೆಚ್.ಎಸ್.ಲಿಂಗರಾಜು, ಅಧ್ಯಕ್ಷ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ಚಾಮರಾಜು, ಚಾಲಕರಾದ ವೆಂಕಟೇಶ್, ಚಿದಾನಂದ, ತಿಮ್ಮನಾಯಕ, ಕೆಇಬಿ ಗುತ್ತಿಗೆದಾರ ರಾಘವೇಂದ್ರ, ರಂಗಸ್ವಾಮಿ, ಸಣ್ಣಭೈರನಾಯಕ ಹಾಗೂ ಶ್ರೀರಾಮ ಭಕ್ತರು ಭಾಗಿಯಾಗಿದ್ದರು.

ತಗಡೂರು ಪ್ರೌಢಶಾಲೆಯಲ್ಲಿ ಕಳ್ಳತನ

ನಂಜನಗೂಡು, ಜ.22– ತಾಲೂಕಿನ ತಗಡೂರು ಗ್ರಾಮದ ಶ್ರೀಗುರುಮಲ್ಲೇಶ್ವರ ಬಾಲಕಿಯರ ಪ್ರೌಢಶಾಲೆ ಬಾಗಿಲು ಮೀಟಿ ದುಷ್ಕರ್ಮಿಗಳು ಅಡುಗೆ ಪಾತ್ರೆ ಹಾಗೂ ಆಹಾರ ಪದಾರ್ಥ ಕಳವು ಮಾಡಿದ್ದಾರೆ.

ಸೋಮವಾರ ಬೆಳಗ್ಗೆ ಮುಖ್ಯೋಪಾಧ್ಯಾಯರು ಶಾಲೆಗೆ ಆಗಮಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಶಾಲೆಯಲ್ಲಿ 2ನೇ ಬಾರಿಗೆ ಕಳ್ಳತನ ನಡೆದಿದ್ದು, ಈ ಸಂಬಂಧ ದೊಡ್ಡ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಸ್‌ಐ ಕೃಷ್ಣಕಾಂತ್ ಕೋಳಿ ಶ್ವಾನದಳ ಮತ್ತು ಬೆರಳಚ್ಚು ತಜ್ಞರೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕೋಟೆಯಲ್ಲಿ ಶ್ರೀರಾಮನಿಗೆ ಪುಷ್ಪಾರ್ಚನೆ



ಹೆಚ್.ಡಿ.ಕೋಟೆಯಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಬಿಜೆಪಿ ಮುಖಂಡ ಕೃಷ್ಣನಾಯಕ ಪುಷ್ಪಾರ್ಚನೆ ಮಾಡಿದರು.

ಹೆಚ್.ಡಿ.ಕೋಟೆ: ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀ ವರದರಾಜಸ್ವಾಮಿ ದೇವಾಲಯದಲ್ಲಿ ಹಮ್ಮಿಕೊಂಡಿದ್ದ ಪೂಜಾ ಕಾರ್ಯಕ್ರಮದಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಬಿಜೆಪಿ ರಾಜ್ಯ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ, ಇನ್ನಿತರರು ಪುಷ್ಪಾರ್ಚನೆ ನೆರವೇರಿಸಿದರು.

ಮುಂಜಾನೆಯಿಂದಲೇ ವರದರಾಜಸ್ವಾಮಿ, ತಾರಕ ರಾಮಲಿಂಗೇಶ್ವರ ದೇವಸ್ಥಾನ, ಹ್ಯಾಂಡ್‌ಪೋಸ್ಟ್ ಶ್ರೀಸಿದ್ದಿವಿನಾಯಕ, ತಾಲೂಕಿನ ತೆರಣಿಮುಂಟಿ ರವಿರಾಮೇಶ್ವರ ದೇವಸ್ಥಾನ, ಅಧಿದೇವತೆ ಚಿಕ್ಕದೇವಮ್ಮ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ, ರಾಮತಾರಕ ಮಂತ್ರ ಜಪ, ರಾಮ ತಾರಕ ಹೋಮ ನಡೆಯಿತು. ಬಳಿಕ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು.

ಎಲ್‌ಇಡಿ ಪರದೆ: ಪಟ್ಟಣದ ವರದರಾಜಸ್ವಾಮಿ ದೇವಾಲಯದ ಮುಂಭಾಗ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ವೀಕ್ಷಿಸಲು ಬೃಹತ್ ಎಲ್‌ಇಡಿ ಪರದೆ ಅಳವಡಿಸಿ ಭಕ್ತರಿಗೆ ಅನುಕೂಲ ಮಾಡಿಕೊಡಲಾಗಿತ್ತು. ಬಿಜೆಪಿ ರಾಜ್ಯ ಎಸ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ 3 ಸಾವಿರ ಮಂದಿಗೆ ಪ್ರಸಾದ, ಸಿಹಿ ವಿತರಿಸಿದರು.

ಸಂಭ್ರಮಾಚರಣೆ: ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಾಗೂ ಅಂಗಡಿ ಮುಂಗಟ್ಟುಗಳಲ್ಲಿ ಕೇಸರಿ ಧ್ವಜ ರಾರಾಜಿಸಿದವು. ಎಲ್ಲೆಂದರಲ್ಲಿ ಶ್ರೀರಾಮ ಮತ್ತು ಹನುಮಂತನ ಕಟೌಟ್‌ಗಳು ಕಂಡುಬಂದವು. ಅಲ್ಲದೇ ಸಂಘ ಸಂಸ್ಥೆಗಳು ಪಾನಕ, ಮಜ್ಜಿಗೆ, ಕೋಸಂಬರಿ, ಲಘು ಉಪಾಹಾರ ವಿತರಿಸಿದರು. ಎಲ್ಲೆಲ್ಲೂ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಸಂಜೆ ಪ್ರತಿ ಮನೆಯಲ್ಲಿ ದೀಪ ಬೆಳಗಿಸಲಾಯಿತು.

ಸಂಜೆ ಆಂಜನೇಯ ದೇವಾಲಯದಲ್ಲಿ ಉತ್ಸವ ಮೂರ್ತಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಮುಖಂಡರಾದ ಜಯಂತ್, ಶ್ರೀಕಾಂತ್, ತಿರುಮಲಾಚಾರ್, ದೇವರಾಜ್, ಪ್ರಮೋದ್, ಹೆಚ್.ಸಿ.ಗುರುಸ್ವಾಮಿ, ವೆಂಕಟೇಶ್ ಪ್ರಸಾದ್, ನಂದೀಶ್, ರಾಜು, ಗುರುಸ್ವಾಮಿ, ನಾರಾಯಣ ಲಾಲ್ ಇದ್ದರು.

ಹುಣಸೂರಿನ ದೇವಾಲಯಗಳಲ್ಲಿ ಶ್ರೀರಾಮ ಸ್ಮರಣೆ



ಹುಣಸೂರಿನ ರಾಮಮಂದಿರದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು.

ಹುಣಸೂರು, ಜ.22– ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಸೋಮವಾರ ಹುಣಸೂರು ಸೇರಿದಂತೆ ತಾಲೂಕಿನ ಎಲ್ಲಾ ರಾಮ ಮಂದಿರ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆದವು.

ನಗರದ ಬ್ರಾಹ್ಮಣರ ಬೀದಿಯ ರಾಮಮಂದಿರದಲ್ಲಿ ಬೆಳಗ್ಗೆಯಿಂದಲೇ ಪುರೋಹಿತ ನಾರಾಯಣಮೂರ್ತಿ ನೇತೃತ್ವದಲ್ಲಿ ಶ್ರೀರಾಮ ತಾರಕ ಹೋಮ, ಅಷ್ಟೋತ್ತರ ಪೂಜೆ ಸೇರಿದಂತೆ ಪ್ರಸಾದ ವಿತರಣೆ ನಡೆಯಿತು. ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಅಲ್ಲದೇ ದೇವಾಲಯದ ವತಿಯಿಂದ ಪಾನಕ, ಮಜ್ಜಿಗೆ ಮತ್ತು ಕೋಸಂಬರಿ ವಿತರಿಸಲಾಯಿತು.

ಜೆಎಲ್‌ಬಿ ರಸ್ತೆಯ ಪಾಂಡುರಂಗ ದೇವಸ್ಥಾನದಲ್ಲಿ ಭಕ್ತರಿಂದ ಭಜನೆ ನಡೆಯಿತು. ಅಯೋಧ್ಯೆಯಲ್ಲಿ ಶ್ರೀರಾಮನ ಪ್ರತಿಷ್ಠಾಪನೆಯಾದ ಬಳಿಕ ಪುರೋಹಿತ ಸುಬ್ರಹ್ಮಣ್ಯ ಮಹಾಮಂಗಳಾರತಿ ನೆರವೇರಿಸಿದರು.

ಸಂಕಲ್ಪ: ವರ್ತಕರ ಬಳಗ ಮತ್ತು ಮಹಿಳಾ ಸೀತಾರಾಮ ಸೇವಾ ಸಮಿತಿ ಮಹಿಳೆಯರು ಸಮಿತಿಯ ನಂದಿನಿ ದಿನೇಶ್ ನೇತೃತ್ವದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ 11 ದಿನಗಳ ಕಾಲ ಸಂಕಲ್ಪ ಸ್ವೀಕರಿಸಿ ಕಠಿಣ ವ್ರತ ಆಚರಿಸಿ ನಿತ್ಯ ರಾಮತಾರಕ ಸ್ತೋತ್ರ ಮತ್ತು ಭಜನೆ ನಡೆಸಿ, ಮಹಾಪೂಜೆ ನೆರವೇರಿಸಿ ವ್ರತ ಸಂಪನ್ನಗೊಳಿಸಿದರು.

ಸಿಹಿ ವಿತರಣೆ: ನಗರದ ವಿವಿಧೆಡೆ ಭಕ್ತರು ಸಾರ್ವಜನಿಕರಿಗೆ ಲಡ್ಡು, ಮೈಸೂರು ಪಾಕ್, ಬೂಂದಿ ಸೇರಿದಂತೆ ವಿವಿಧ ಸಿಹಿ ತಿನಿಸು ವಿತರಿಸಿದರು.

ಗಣೇಶಗುಡಿ ಬೀದಿ ರಾಮಮಂದಿರದಲ್ಲಿ ಮಹಿಳೆಯರು ಮತ್ತು ಪುರುಷರು ಭಜನೆ ಹಮ್ಮಿಕೊಂಡಿದ್ದರು. ರಾಘವೇಂದ್ರ ಮಠದಲ್ಲಿ ವಿಶೇಷ ಪೂಜೆ, ಅನ್ನಸಂತರ್ಪಣೆ ಆಡಳಿತ ಮಂಡಳಿ ಕೃಷ್ಣಾಚಾರಿ, ನಾಗರಾಜ್ ನೇತೃತ್ವದಲ್ಲಿ ಜರುಗಿತು. ಅಲ್ಲದೆ ಕಲ್ಕುಣಿಕೆ ರಾಮಮಂದಿರ ಮತ್ತು ಗರಡಿ ಮನೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿತರಿಸಿದರು.

ದಾವಣಿ ಬೀದಿ ರಾಮಮಂದಿರ, ಕರಿಗೌಡರ ಬೀದಿ ರಾಮಮಂದಿರ, ಮಾರುತಿ ಬಡಾವಣೆ ಮೈಲಾರಲಿಂಗೇಶ್ವರ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಸುಬ್ರಹ್ಮಣ್ಯ ದೇವಾಲಯ, ಎಪಿಎಂಸಿ ಮಾರ್ಕೆಟ್ ಹತ್ತಿರದ ಆಟೋ ಚಾಲಕರು, ಗೋಕುಲ ಬಡಾವಣೆ ಮಹದೇಶ್ವರ ದೇವಾಲಯ, ಮಾರುತಿ ಪೆಟ್ರೋಲ್ ಬಂಕ್, ಆಟೋ ಸ್ಟ್ಯಾಂಡ್ ಸೇರಿದಂತೆ ವಿವಿಧೆಡೆ ಶ್ರೀರಾಮನ ಸ್ಮರಿಸುವ ಮೂಲಕ ಸಾರ್ವಜನಿಕರಿಗೆ ಸಿಹಿ, ಮಜ್ಜಿಗೆ, ಪಾನಕ, ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಹುಣಸೂರು ತಾಲೂಕಿನ ಕೊಳುವಿಗೆ ಗ್ರಾಮದ ಶ್ರೀರಾಮ ದೇವಸ್ಥಾನ, ದೊಡ್ಡಹೆಜ್ಜೂರಿನ ವೀರಾಂಜನೇಯ ದೇವಸ್ಥಾನ, ಹನಗೋಡಿನ ಆಂಜನೇಯ ದೇವಾಲಯಗಳಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮುಖಂಡರಾದ ಶಿವಕುಮಾರ್, ಹೊಂಬೇಗೌಡ, ಕಸ್ತೂರಿಗೌಡ, ಬಸವಣ್ಣ, ದೇವರಾಜ್, ನಾಗೇಶ್, ಸಿರಿ, ಗಣೇಶ, ಕುಮಾರ್ ಹಾಗೂ ದೇವಾಲಯ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಹನುಮಾನ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಹನುಮಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಹನುಮಾನ್ (ಕ)	4 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಆಯಲನ್ (ತ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿ ಸಾವು



ನಂಜನಗೂಡು, ಜ.22– ತೀವ್ರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಯೋರ್ವ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ತಾಲೂಕಿನ ಇಬ್ಜಾಲ ಗ್ರಾಮದ ನಿವಾಸಿ ಮಹದೇವ ನಾಯಕ(40) ಸಾವನ್ನಪ್ಪಿದವರು. ಗ್ರಾಮದ ಡೈರಿ ಉಪಾಧ್ಯಕ್ಷನಾಗಿದ್ದ ಈತ ಉತ್ಪಾದಕರಿಗೆ ನಿಗದಿತ ಸಮಯಕ್ಕೆ ಹಣ ಪಾವತಿಸುವಂತೆ ಕಾರ್ಯದರ್ಶಿ ಶಿವು ಅಲಿಯಾಸ್ ಶ್ರೀನಿವಾಸ್ ಅವರಿಗೆ ತಿಳಿಸಿದ್ದರು. ಜ.19 ಸಂಜೆ ಮನೆಗೆ ಹಾಲು ತರಲೆಂದು ತೆರಳಿದ್ದ ಮಹದೇವನಾಯಕ ಡೈರಿಯಲ್ಲಿದ್ದ ಶಿವು ಅವರ ತಾಯಿ ರವಿಯಮ್ಮ ಅವರಿಗೆ ನಿಮ್ಮ ಮಗ ಸದಸ್ಯರಿಗೆ ಸರಿಯಾದ ಸಮಯಕ್ಕೆ ಹಣ ನೀಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಕಾರ್ಯದರ್ಶಿ ಶಿವು ಮಹದೇವ ನಾಯಕರ ಮೇಲೆ ಹಲ್ಲೆ ನಡೆಸಿ ಕೆಳಕ್ಕೆ ತಳ್ಳಿದ್ದರು.

ಇದರಿಂದ ತೀವ್ರ ಗಾಯಗೊಂಡಿದ್ದ ಮಹದೇವ ನಾಯಕನಿಗೆ ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಭಾನುವಾರ ರಾತ್ರಿ ಮಹದೇವನಾಯಕ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತನ ಪತ್ನಿ ಕಮಲಮ್ಮ ಹುಲ್ಲಹಳ್ಳಿ ಠಾಣೆಗೆ ದೂರು ನೀಡಿದ್ದಾರೆ.

ಶಿವರಾಜ್ ನಿಧನ



ಹೆಚ್.ಡಿ.ಕೋಟೆ, ಜ.22– ಮೈಸೂರಿನ ಬೋಗಾದಿ ನಿವಾಸಿ, ತಾಂಡವಪುರ ಪಿಎಸಿಎಸ್ ಸಿಇಓ ಶಿವರಾಜ್(60) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೆಚ್.ಡಿ.ಕೋಟೆ ತಾಲೂಕಿನ ಚಿಕ್ಕ ಕೆರೆಯೂರು ಗ್ರಾಮದ ತೋಟದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಶೀಲಮೂರ್ತಿ



ಹುಣಸೂರು, ಜ.22– ತಾಲೂಕಿನ ರತ್ನಪುರಿ ಗ್ರಾಮದ ನಿವಾಸಿ, ದಲಿತ ಸಂಘರ್ಷ ಸಮಿತಿ ಮಾಜಿ ತಾಲೂಕು ಸಂಘಟನಾ ಸಂಚಾಲಕ ಜಯಶೀಲಮೂರ್ತಿ(45) ಸೋಮವಾರ ಸಂಜೆ ನಿಧನರಾದರು.


ಮೃತರು ಪತ್ನಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಬಲಾಬಲಕ್ಕೆ ಮನ್ನಣೆ

ಕನಕಪುರ, ರಾಮನಗರದಲ್ಲಿ ವೈದ್ಯಕೀಯ ಕಾಲೇಜು ಆರಂಭ

ಬೆಂಗಳೂರು, ಜ.22(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ರಾಜಕೀಯ ಕೇಂದ್ರ ಸ್ಥಾನವಾದ ರಾಮನಗರಕ್ಕೂ ವೈದ್ಯಕೀಯ ಕಾಲೇಜುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಆರಂಭಿಸುವುದಾಗಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ. ಕನಕಪುರದಲ್ಲಿ ವೈದ್ಯಕೀಯ ಕಾಲೇಜು ಆರಂಭಗೊಂಡರೆ ಕರ್ನಾಟಕದಲ್ಲಿ ಇತಿಹಾಸ ಸೃಷ್ಟಿಯಾಗುತ್ತದೆ, ತಾಲೂಕು ಕೇಂದ್ರವೊಂದರಲ್ಲಿ ಸರ್ಕಾರಿ ಕಾಲೇಜು ಆರಂಭವಾಗುತ್ತಿರುವುದು ಇದೇ ಮೊದಲಾಗಲಿದೆ.

ಗಣಿ ಧಣಿಗಳ ರಾಜಕೀಯ ಕೇಂದ್ರ ವಿಜಯನಗರದಲ್ಲೂ ವೈದ್ಯಕೀಯ ಕಾಲೇಜೊಂದನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ. ಕರ್ನಾಟಕದಲ್ಲಿ ಮೂರು ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡುವಂತೆ ಅಖಿಲ ಭಾರತ ವೈದ್ಯಕೀಯ ಪರಿಷತ್‌ಗೆ ಶಿಫಾರಸು ಮಾಡಿದೆ.



ಶರಣ ಪ್ರಕಾಶ್

ಈ ಕೇಂದ್ರಗಳಲ್ಲಿ ಅತ್ಯಾಧುನಿಕ ಸರ್ಕಾರಿ ಆಸ್ಪತ್ರೆಗಳಿದ್ದು, ವೈದ್ಯಕೀಯ ಕಾಲೇಜು ಆರಂಭಕ್ಕೆ ಅನುಮತಿ ಕೋರಲಾಗಿದೆ. ಪ್ರತಿ ಕಾಲೇಜಿಗೆ 150 ಸೀಟುಗಳನ್ನು ನೀಡುವಂತೆಯೂ ಸರ್ಕಾರ ಶಿಫಾರಸು ಮಾಡಿದೆ. ಹಿಂದೆಯೇ ರಾಮನಗರದಲ್ಲಿ ವೈದ್ಯ ಕೀಯ ವಿಶ್ವವಿದ್ಯಾಲಯ ಪ್ರಾರಂಭಿಸಿ ಮಲ್ಟಿ ಸೂಪರ್ ಸ್ಪೆಷಾ ಲಿಟಿ ಆಸ್ಪತ್ರೆ ಹಾಗೂ ಕಾಲೇಜು ತೆರೆಯಲು ನಿರ್ಧರಿಸಲಾಗಿತ್ತು.

ರಾಮನಗರಕ್ಕೆ ನೀಡಬೇಕೆಂದಿರುವ ವೈದ್ಯಕೀಯ ಕಾಲೇ ಜನ್ನು ಕನಕಪುರಕ್ಕೆ ನೀಡಬೇಕೆಂದು ಸರ್ಕಾ ರದ ಮೇಲೆ ಶಿವಕುಮಾರ್ ಒತ್ತಡ ಹೇರಿದ್ದರು. ಇದಕ್ಕೆ ಜನರು ಹಾಗೂ ಜನಪ್ರತಿನಿಧಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಒತ್ತಡಕ್ಕೆ ಮಣಿದ ಸರ್ಕಾರ ರಾಮನಗರ ಜೊತೆಗೆ ಕನಕಪುರದಲ್ಲೂ ವೈದ್ಯಕೀಯ ಕಾಲೇಜು ತೆರೆಯಲು ನಿರ್ಧರಿಸಿದ್ದಲ್ಲದೆ, ನೂತನ ಜಿಲ್ಲೆ ವಿಜಯನಗರಕ್ಕೂ ಕಾಲೇಜನ್ನು ನೀಡಿದೆ ಎಂದರು.

ಸರ್ಕಾರಿ ಉದ್ಯೋಗ ಮೇಳ: ರಾಜ್ಯದಲ್ಲಿ ತಲೆದೋರಿರುವ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರದ ವತಿಯಿಂದಲೇ ಉದ್ಯೋಗ ಮೇಳಗಳನ್ನು ನಡೆಸುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು. ಫೆ2ನೇ ವಾರದಲ್ಲಿ ಬೆಂಗಳೂರು ನಗರದಲ್ಲಿ ಬೃಹತ್ ಉದ್ಯೋಗ ಮೇಳ ನಡೆಸಿ 50,000 ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲಾಗುವುದು.

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ನಗರ, ಜೆ.ಪಿ.ನಗರ, 'ಎ' ಬ್ಲಾಕ್, 1ನೇ ಮುಖ್ಯರಸ್ತೆ, ಶ್ರೀಗಂಧ, ಮನೆ. ನಂ.50 ರಲ್ಲಿ ವಾಸವಾಗಿರುವ ಶ್ರೀ ಆರ್. ಎಸ್. ರಾಜಶೇಖರರವರ ಮಗನಾದ ಶ್ರೀ ಆರ್. ವೀರೇಶ್ ರವರಿಗೆ, ಷೆಡ್ಯೂಲ್ ನಲ್ಲಿ ನಮೂದಿಸಿರುವ ಜಮೀನನ್ನು ಮೈಸೂರಿನ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯವು ಜಾರಿ ಸಂಖ್ಯೆ 679/2012 ರಂತೆ ಶ್ರೀಮತಿ ಕೆಂಪಮ್ಮ ಮತ್ತು ಇತರರ ಪರವಾಗಿ ಡಿಕ್ರಿಯನ್ನು ಜಾರಿ ಮಾಡುವ ಮೂಲಕ ಸದರಿ ನ್ಯಾಯಾಲಯದ ಆದೇಶದಂತೆ ಕೋರ್ಟ್ ಕಮೀಷನರ್ ಮೂಲಕ ದಿನಾಂಕ: 18.08.2016ರಂದು ನೊಂದಾಯಿತ ಕ್ರಯ ಪತ್ರವನ್ನು ಬರೆದು ನೊಂದಣಿ ಮಾಡಿಕೊಟ್ಟಿದ್ದು, ಸದರಿ ಕ್ರಯಪತ್ರವು ಮೈಸೂರು ಉತ್ತರ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿಯಾಗಿರುತ್ತದೆ ಹಾಗೂ ಸದರಿ ಸ್ವತ್ತಿನಲ್ಲಿ ನಮ್ಮ ಕಕ್ಷಿದಾರರು ಸ್ವಾಧೀನಾನುಭವದಲ್ಲಿರುತ್ತಾರೆ. ಆದರೆ ಇತ್ತೀಚೆಗೆ ಶ್ರೀಮತಿ ಕೆಂಪಮ್ಮ ಮತ್ತು ಇತರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಾವೇ ವಿಭಾಗ ಪತ್ರವನ್ನು ಸೃಷ್ಟಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದಾಗಿ ನಮ್ಮ ಕಕ್ಷಿದಾರರಿಗೆ ಮಾಹಿತಿ ಲಭ್ಯವಾಗಿದೆ.

ಆಗಾಗಿ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ಷೆಡ್ಯೂಲ್ ಸ್ವತ್ತಿನ ಮೇಲೆ ನಮ್ಮ ಕಕ್ಷಿದಾರರಿಗೆ ಹಕ್ಕು ಭಾದ್ಯತೆಗಳು ಇರುವುದರಿಂದ ಸ್ವತಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿರುವ ವ್ಯಕ್ತಿಗಳು ಹಾಗೂ ಅವರ ಕುಟುಂಬದವರ ಜೊತೆ ಯಾರೂ ಸಹ ಯಾವುದೇ ವಿಧವಾದ ಕ್ರಯ, ಕರಾರು, ಆಧಾರ, ಭೋಗ್ಯ ಇತ್ಯಾದಿ ವ್ಯವಹಾರಗಳನ್ನು ಮಾಡಬಾರದೆಂದು ತಿಳಿಯಪಡಿಸುತ್ತೇವೆ. ಒಂದು ವೇಳೆ ವ್ಯವಹರಿಸಿದಂತಹ ಪಕ್ಷದಲ್ಲಿ ಅಂತಹ ವ್ಯವಹಾರವು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಅಲ್ಲದೆ ಅದರಿಂದ ಉಂಟಾಗುವ ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯ ಗ್ರಾಮದ ಸರ್ವೆ ನಂಬರ್. 178/1 ರಲ್ಲಿ ವಿಸ್ತೀರ್ಣ 00 ಎಕರೆ 20 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂಧಿ:–
ಪೂರ್ವಕ್ಕೆ: ಸರ್ವೆ ನಂಬರ್ 178/2 ರ ಜಮೀನು, ಪಶ್ಚಿಮಕ್ಕೆ: ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 178/1 ರ ಉಳಿಕೆ ಜಮೀನು, ದಕ್ಷಿಣಕ್ಕೆ: ಹಳ್ಳ.

ಶ್ರೀ ಸುನಿಲ್ ಎಂ.ಆರ್. ಬಿ.ಎ.ಎಲ್, ಎಲ್.ಎಲ್.ಬಿ
ವಕೀಲರು, ನಂ. 218/ಕೆ–30,
ನಾರಾಯಣಶಾಸ್ತ್ರಿ ರಸ್ತೆ, ಕೆ.ಆರ್. ಮೊಹಲ್ಲಾ,
ಮೈಸೂರು. Mob: 97423 40603

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರಾದ, ಶ್ರೀ ಮೆಸರ್ ವಿಶ್ವರೂಪ ಎಂಟರ್ ಪ್ರೈಸಸ್ ಎಲ್.ಎಲ್.ಪಿ. ಅದರ ಪರವಾಗಿ **ವಿಶ್ವಾಸ್ ಉದಯಸಿಂಗ್ ಲಾಡ್** ಬಿನ್ ಉದಯ ಸಿಂಗ್ ವಿಠಲ್ ಲಾಡ್, ವಾಸ ನಂ 2990/12 ಮೇನ್, 8ನೇ ಕ್ರಾಸ್, ಇಂದಿರಾ ನಗರ, ಬೆಂಗಳೂರು ನಾರ್ಥ್ ಬೆಂಗಳುರು, ರವರ ಇರಾದೆಯ ಮೇರೆಗೆ,

ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ 1. ಶ್ರೀ ಕೆ. **ಮಂಜುನಾಥ್ ಬಿನ್ ಲೇಟ್ ಕೂಸೇಗೌಡ** ನಂ 463, 2ನೇ ಮೇನ್, 6ನೇ ಕ್ರಾಸ್, ಲೋಕನಾಯಕ ನಗರ, ಹೆಬ್ಬಾಳ ಮೇನ್ ರಸ್ತೆ, ಮೆಟಗಳ್ಳಿ ಮೈಸೂರು ಹಾಗೂ 2. **ಶ್ರೀಮತಿ ಕೆಂಪಮ್ಮ ಕೋಂ ನಂಜುಂಡಯ್ಯ** ಬಿನ್ ಕೂಸೇಗೌಡ, ನಂ 3033/1, ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಸ್ಥಾನದ ರಸ್ತೆ, 8ನೇ ಕ್ರಾಸ್ ಟಿ.ಕೆ. ಲೇ ಔಟ್ ಮೈಸೂರು ರವರಿಗೂ, ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಕ್ರಯದ ಕರಾರಿನ ಒಡಂಬಡಿಕೆಯಾಗಿದ್ದು ಅವರು ಸದರಿ ಜಮೀನಿನ ಸಂಬಂಧ ಕೆಲವು ದಾಖಲಾತಿಗಳನ್ನು ನನ್ನ ಕಕ್ಷಿದಾರರಿಗೆ ನೀಡಿದ್ದು ನನ್ನ ಕಕ್ಷಿದಾರರು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ, ಡಿಕ್ರಿ ಕೋರ್ಟ್ ಅಟಾಚೆಂಟ್ ಸಾಲ ಜೀವನಾಂಶ ಇನ್ನಿತರೆ ಯಾವುದೇ ಹಕ್ಕು ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಹಕ್ಕನ್ನು ಧೃಢೀಕರಿಸಲು ಸಂಬಂಧ ಪಟ್ಟ ದಾಖಲಾತಿಗಳೊಡನೆ ಹಾಜರಾಗಿ ತಮ್ಮ ಹೇಳಿಕೆಯನ್ನು ಅಥವಾ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರೆದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಕ್ರಯ ಪತ್ರವನ್ನು ಪಡೆದುಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮದಲ್ಲಿರುವ **ಸರ್ವೆ.ನಂ. 158** ರಲ್ಲಿ ವಿಸ್ತೀರ್ಣ 5 ಎಕರೆ 19 ಗುಂಟೆ ಜಮಿನಿಗೆ ಚೆಕ್ ಬಂದಿ: **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಲೇಟ್ ರಂಗರಾಮಯ್ಯನವರ ಜಮೀನು, **ಉತ್ತರಕ್ಕೆ:** ಜವರೇಗೌಡ ಅವರ ಜಮೀನು, **ದಕ್ಷಿಣಕ್ಕೆ:** ಆನಂದ್ ಮತ್ತು ಅವರ ಸಹೋದರರ ಜಮೀನು

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು
ನಂ. 645, ಮೊದಲನೇ ಮಹಡಿ,
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
ಮೊ.ನಂ. 94480 75718

Ph: 08226-223170 ಕರ್ನಾಟಕ ಸರ್ಕಾರ Fax: 08226-223180
08226-223180 Email: deo.cnagar@gmail.com

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಕಂದಾಯ ಇಲಾಖೆ)
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂಖ್ಯೆ: ಆರ್‌ಕೆ/ಸಿಆರ್/01/2023–24 ದಿನಾಂಕ: 20–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾಮರಾಜನಗರ ಜಿಲ್ಲೆಯ ಆಯ್ದ ತಾಲ್ಲೂಕು ಕಛೇರಿಗಳ ಅಭಿಲೇಖಾಲಯದ ಎಲ್ಲಾ ದಾಖಲಾತಿಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಕಂಪ್ಯೂಟರ್ ಮತ್ತು ಸ್ಕ್ಯಾನರ್‌ಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಏಜೆನ್ಸಿದಾರರಿಂದ/ಸಂಸ್ಥೆಗಳಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. (ಟೆಂಡರ್ ಸಂಖ್ಯೆ: **RD/2023-24/ND0089)** ಟೆಂಡರ್‌ಗಿಟ್ಟ ಮೊತ್ತ ರೂ. 6.84 ಲಕ್ಷಗಳು, ಇಎಂಡಿ ಮೊತ್ತ ರೂ. 17100.00 ಗಳು, ಆಸಕ್ತಿಯುಳ್ಳ ಏಜೆನ್ಸಿದಾರರು/ಸರಬರಾಜುದಾರರು ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗೆ ಬಿಡ್ ಸಲ್ಲಿಸಲು ಅಂತಿಮ ದಿ: 29.01.2024ರ ಸಂಜೆ 5.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:30.01.2024 ರ ಸಂಜೆ 5.00 ಗಂಟೆಗೆ ಹೆಚ್ಚಿನ ಮಾಹಿತಿ ಕಾಮಗಾರಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಕೊಠಡಿ ಸಂಖ್ಯೆ: 106, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ ಇಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:350:2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ: ಕರಾಸಾ/ಚಾನವಿ/ಸಂ/ವಾ/2813/2023–24 ದಿನಾಂಕ: 19.01.2024

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 04/2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಗುಂಡ್ಲುಪೇಟೆ, ತೆರಕಣಾಂಬಿ, ಹನೂರು ಮತ್ತು ಕೊಳ್ಳೇಗಾಲ ನಗರಸಭೆಯ ಕೊಳ್ಳೇಗಾಲ ಕ.ರಾ.ರ.ಸಾ.ನಿಗಮ ಬಸ್ ನಿಲ್ದಾಣದ ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗೆ ಏಕೈಕ ಪರವಾನಗಿದಾರರನ್ನು ಹಾಗೂ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಿಗೆ, ಮಳಿಗೆ ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹಿರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಹಾಗೂ ಸಂಧಾನ ಪ್ರಕಟಣೆ ಸಂ.04/2023–24 ದಿನಾಂಕ: 19.01.2024 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಹಾಗೂ ಸಂಧಾನದಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿವೆ.

1. ಮ್ಯಾನ್ಯುವಲ್ ಟೆಂಡರ್ & ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ: 20.02.2024 ಸಮಯ: 16.00 ಗಂಟೆವರೆಗೆ
2. ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸಲ್ಲಿಸಲು ಕೊನೆಯ ದಿನಾಂಕ: 21.02.2024 ಸಮಯ: 16.00 ಗಂಟೆವರೆಗೆ
3. ಮ್ಯಾನ್ಯುವಲ್ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22.02.2024 ಸಮಯ: 10.30 ರಿಂದ 12.00 ಗಂಟೆವರೆಗೆ
4. ಮ್ಯಾನ್ಯುವಲ್ ಟೆಂಡರ್ & ಸಂಧಾನ ಸಭೆಯ ದಿನಾಂಕ: 22.02.2024 ಸಮಯ: 12.30 ಗಂಟೆಯಿಂದ
5. ಇ–ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 20.02.2024 ಸಮಯ: 16.00 ಗಂಟೆವರೆಗೆ
6. ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಮೂಲ ಇ.ಎಂ.ಡಿ. ಡಿ.ಡಿ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2024 ಸಮಯ: 16.00 ಗಂಟೆವರೆಗೆ
7. ಇ–ಟೆಂಡರ್ ತೆರೆಯುವ ದಿನಾಂಕ: 22.02.2024 ಸಮಯ: ಬೆಳಗ್ಗೆ 11.00 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ)ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂ:– 7760990302, 7760990311).

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ವಾ.ಸಾ.ಸಂ.ಇ/ವಾಪ್ರ/3169/ಎಸ್‌ಎಸ್‌ಸಿ/2023–24 ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ